ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

27 ಜನವರಿ 2016 ಪುಟ 20 ರೂ. 15/-




ಜಿಮ್ಮಿ ಕಾರ್ಟರ್ ಸಮಾನತೆಗಾಗಿ ಧರ್ಮವನ್ನು ತ್ಯಜಿಸುತ್ತಿದ್ದೇನೆ



ಮೂಡಿಗೆರೆ ಕುಮ್ಮಿಯ 'ಪೋಲಿ' ಟಾಕ್

ಲಿಂಗಾಯತರ ಸುತ್ತ ಚೆಡ್ಡಿ ಶರಪಂಜರ






ಉತ್ತರಕನ್ನಡ ಆಗಂತುಕ ರಮೇಶ್ ರಂಗ ತಾಲೀಮು



ಶಬರಿಮಲೆ ಯಾತಕ್ಕಾಗಿ ಮಹಿಳೆಯರಿಗೆ ಪ್ರವೇಶ?

ರಾಜಕಾರಣದ ಸುಧಾರಣೆಯ ಅಜೆಂಡಾ ಯಾರದ್ದು?



ಈಚೆಗೆ ನಡೆದ ವಿಧಾನಪರಿಷತ್ ಚುನಾವಣೆಯಲ್ಲಿ ಅತ್ಯಂತ ನಿರ್ಲಜ್ಜ ರೀತಿಯಲ್ಲಿ ಮತಗಳ ಮಾರಾಟವಾದವು. ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳೇ ಮತದಾರರಾಗಿದ್ದ ಚುನಾವಣೆಯಲ್ಲಿ ಕನಿಷ್ಠ ಶೇ.90ರಷ್ಟು ಮತಗಳಿಗೆ ಹಣ ಹಂಚಿಕೆಯಾಗಿರುವ ಸಾಧ್ಯತೆಯಿದೆ. ಒಂದು ಜಿಲ್ಲೆಯಲ್ಲಿ ಗ್ರಾಮ ಪಂಚಾಯತಿ ಸದಸ್ಯರಿಗೆ 36 ಸಾವಿರ, ತಾ.ಪಂ ಸದಸ್ಯರಿಗೆ 54 ಸಾವಿರ, ಜಿ.ಪಂ ಸದಸ್ಯರಿಗೆ 81 ಸಾವಿರವೆಂದು ನಿಗದಿ ಮಾಡಲಾಗಿತ್ತು. ಈ ಅಂಕೆಗಳಲ್ಲೇ ಹಣ ಹಂಚಿದ್ದು ಏಕೆಂದರೆ, ಅವನ್ನು ಕೂಡಿದರೆ 9 ಬರಬೇಕಂತೆ. ಹಣ ಹಂಚಿದರೂ ಓಟು ಬಾರದೇ ಹೋಗಬಹುದು ಎಂಬ ಆತಂಕದಲ್ಲಿ ಸಂಖ್ಯಾಶಾಸ್ತ್ರದ ಬಲವನ್ನೂ ಸದರಿ ಅಭ್ಯರ್ಥಿ ಬಳಸಿಕೊಂಡಿರಬಹುದು. ಇದಕ್ಕಿಂತ ಸ್ವಲ್ಪ ಕೆಟ್ಟದಾದ ಅಥವಾ ಇದಕ್ಕಿಂತ ಕಡಿಮೆ ಕೆಟ್ಟದಾದ ರೀತಿಯಲ್ಲಿ ರಾಜ್ಯದ ಬಹುತೇಕ ಕಡೆ ಚುನಾವಣೆ ನಡೆಯಿತು. ಇದು ಮೇಲ್ಮನೆಯೆಂದು ಕರೆಯಲಾಗುವ ವಿಧಾನಪರಿಷತ್ ಚುನಾವಣೆಯ ಸ್ಥಿತಿ.

ಇನ್ನು ಸ್ವಲ್ಪ ಸಮಯದ ನಂತರ ಇದೇ ವಿಧಾನಪರಿಷತ್‌ಗೆ ಪದವೀಧರರು ಮತ್ತು ಶಿಕ್ಷಕರ ಕ್ಷೇತ್ರದ ಚುನಾವಣೆಗಳೂ ನಡೆಯುತ್ತವೆ. ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳಿಗಿಂತ ಸುಶಿಕ್ಷಿತರಾದ ಮತದಾರರಿರುವ ಆ ಚುನಾವಣೆಯೂ ಇಷ್ಟೇ ಅಥವಾ ಇದಕ್ಕಿಂತ ನಿರ್ಲಜ್ಜ ರೀತಿಯಲ್ಲಿ ನಡೆಯುತ್ತದೆ. ದೊಡ್ಡ ದೊಡ್ಡ ಕಲ್ಯಾಣಮಂಟಪಗಳಲ್ಲಿ ಈ 'ಗೌರವಾನ್ವಿತ ಮತದಾರ'ರನ್ನು ಸುರಿಸಿ ಮದ್ಯದ ಹೊಳೆಯನ್ನು ಹರಿಸಿ, ಕೊಡುಗೆಗಳನ್ನು ನೀಡಿ ಮತವನ್ನು ಖರೀದಿ ಮಾಡಲಾಗುತ್ತದೆ. ಅಲ್ಲಿ ಗೆದ್ದು ಬರುವ ಅಭ್ಯರ್ಥಿಗಳು ಮೇಲ್ಮನೆಯ ಇನ್ನೂ ಹೆಚ್ಚು ಸುಶಿಕ್ಷಿತ ಸದಸ್ಯರಾಗಿರಬೇಕೆಂದು ಬಯಸುವುದು ಹೇಗೆ ಸಾಧ್ಯ?

ಪ್ರತೀ ಚುನಾವಣೆಯೂ ಅದರ ಹಿಂದಿನ ಸಾಲಿನದ್ದಕ್ಕಿಂತ ಅಸಹ್ಯವಾಗುತ್ತಿರುವುದು ವಾಸ್ತವ. ಈ ರೀತಿಯಲ್ಲಿ ಪ್ರತೀ ಮತವನ್ನು ಖರೀದಿ ಮಾಡಿಯೇ ಗೆಲ್ಲುತ್ತೇವೆ ಎನ್ನುವ ಪರಿಸ್ಥಿತಿ ಇತ್ತೀಚಿನದ್ದು. ಆದರೆ ಹಿಂದೆಯೂ ಚುನಾವಣೆಗಳಲ್ಲಿ ಹಣದ ಮೇಲಾಟ ಬೇರೆ ರೀತಿ ಇತ್ತು. ಹಣ ಮಾತ್ರವಲ್ಲದೇ ಜಾತಿ, ಧರ್ಮ ಇತ್ಯಾದಿ ಅಂಶಗಳೂ ಕೆಲಸ ಮಾಡುತ್ತಿದ್ದವು. ಈ ಕಾರಣದಿಂದಲೇ ಚುನಾವಣಾ ಸುಧಾರಣೆಗಳ ಕುರಿತು ಹಲವು ಸಾರಿ ಚರ್ಚೆ ಎದ್ದಿದೆ. ಚುನಾವಣೆಯನ್ನು ಸಾಧ್ಯವಾದಷ್ಟೂ ಕಟ್ಟುನಿಟ್ಟಾಗಿ ನಡೆಸುವುದು, ಪಕ್ಷಾಂತರ ನಿಷೇಧ ಕಾಯ್ದೆ, ಚುನಾವಣಾ ಖರ್ಚಿಗೆ ಮಿತಿ, ಚುನಾವಣಾ ಖರ್ಚಿನ ಲೆಕ್ಕ ಕೊಡುವುದು, ಆಸ್ತಿ ಮತ್ತು ಕ್ರಿಮಿನಲ್ ಕೇಸುಗಳನ್ನು ನಾಮಪತ್ರ ಸಲ್ಲಿಸುವಾಗಲೇ ಘೋಷಣೆ ಮಾಡಬೇಕು ಇತ್ಯಾದಿಗಳ ಕುರಿತು ಚರ್ಚೆ ನಡೆದು ಇಂದು ಒಂದು ಮಟ್ಟಕ್ಕೆ ಜಾರಿಯೂ ಆಗಿದೆ. ಇದರಲ್ಲಿ ಕಳ್ಳ ಲೆಕ್ಕ ಕೊಡುವುದು, ಪಕ್ಷಾಂತರ ನಿಷೇಧ ಕಾಯ್ದೆಯನ್ನು ತಪ್ಪಿಸಿಕೊಳ್ಳುವ ಮಾರ್ಗಗಳನ್ನು ಹುಡುಕಿಕೊಂಡಿರುವುದೂ ಆಗಿ ಹೋಗಿದೆ.

ಅಭ್ಯರ್ಥಿಗಳ ಖರ್ಚನ್ನು ಸರ್ಕಾರವೇ ಭರಿಸುವುದು, ಗೆದ್ದವರನ್ನು ಹಿಂದಕ್ಕೆ ಕರೆಸಿಕೊಳ್ಳುವುದು, ಚಲಾವಣೆಯಾದ ಮತಗಳಲ್ಲಿ ಹೆಚ್ಚಿನ ಮತ ಪಡೆದವರು ಗೆಲ್ಲುವ (**First past the post**) ನೀತಿ ತಪ್ಪಿಸಿ ಬೇರೆ ರೀತಿಯ ಚುನಾವಣೆ ನಡೆಸಬೇಕು, ಚುನಾವಣಾ ಅಪರಾಧಗಳಿಗೆ ಇನ್ನೂ ಕಠಿಣ ಶಿಕ್ಷೆ ವಿಧಿಸಬೇಕು ಇತ್ಯಾದಿ ಇತ್ಯಾದಿ ಅಂಶಗಳ ಕುರಿತು ಏನೂ ಆಗಿಲ್ಲವಾದರೂ ಚರ್ಚೆಯಂತೂ ನಡೆದಿದೆ. ಆದರೆ ಪ್ರಶ್ನೆ ಇರುವುದು, ಇಷ್ಟರಿಂದ ನಮ್ಮ ಚುನಾವಣೆಗಳನ್ನು ಸುಧಾರಣೆ ಮಾಡಿಬಿಡುವುದು ಸಾಧ್ಯವೇ ಎಂದು. ಇಂತಹ ಚರ್ಚೆ ಹಿಂದಿನಿಂದಲೂ ಇದ್ದಿತ್ತು. ತಾರ್ಕುಂಡೆ ಆಯೋಗ, ದಿನೇಶ್ ಗೋಸ್ವಾಮಿ ಸಮಿತಿ ವರದಿ, ಇಂದ್ರಜಿತ್ ಗುಪ್ತಾ ಸಮಿತಿ ವರದಿ, ಕಾನೂನು ಆಯೋಗದ ವರದಿ, ಸಂವಿಧಾನದ ಕಾರ್ಯನಿರ್ವಹಣೆಯ ಪರಾಮರ್ಶೆ ಸಮಿತಿ ವರದಿ ಇತ್ಯಾದಿಗಳು ಮತ್ತು ಸ್ವತಃ ಚುನಾವಣಾ ಆಯೋಗವೇ ಮಾಡಿರುವ ಶಿಫಾರಸ್ಸುಗಳು ಇವೆಲ್ಲವೂ ರಚನೆಯಾಗಿದ್ದು ಮತ್ತು ಶಿಫಾರಸ್ಸುಗಳನ್ನು ಮುಂದಿಟ್ಟದ್ದು ಇಂತಹ ಚರ್ಚೆಯ ಕಾರಣಕ್ಕೇ ಆಗಿದೆ. ಇವೆಲ್ಲದರ ಹೊರತಾಗಿಯೂ ಹೆಚ್ಚಿನ ಬದಲಾವಣೆ ಸಂಭವಿಸಿಲ್ಲ.

ಈ ಅವಧಿಯಲ್ಲೇ ನಡೆದ ಒಂದು ಪ್ರಮುಖ ಬೆಳವಣಿಗೆ ಎಂದರೆ ಆಮ್‌ಆದ್ಮಿ ಪಕ್ಷದ್ದು. ಚುನಾವಣೆಯಲ್ಲಿ ಆಮ್‌ಆದ್ಮಿ ಪಕ್ಷವು ಇದ್ದುದರಲ್ಲಿ ಸ್ವಚ್ಛವಾಗಿ ನಡೆದುಕೊಂಡಿತು ಮತ್ತು ಗೆದ್ದೂ ಬಿಟ್ಟಿತು. ಇದ್ದುದರಲ್ಲಿ ಎಂದು ಏಕೆ ಹೇಳಬೇಕಾಗಿದೆಯೆಂದರೆ, ಆಮ್‌ಆದ್ಮಿ ಪಕ್ಷವನ್ನು ಸ್ಥಾಪಿಸಿದ ಮುಂಚೂಣಿ ತಂಡದಲ್ಲಿದ್ದ ಭೂಷಣ್‌ರು ಮತ್ತು ಯೋಗೇಂದ್ರ ಯಾದವ್ ಅವರು ಆಮ್‌ಆದ್ಮಿ ಪಕ್ಷವು ದೆಹಲಿ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಆರಿಸಿದ ರೀತಿ ಮತ್ತು ಚುನಾವಣೆಯನ್ನು ನಡೆಸಿದ ರೀತಿಯ ಕುರಿತು ತಕರಾರುಗಳನ್ನು ತೆಗೆದು ಹೊರಬಂದಿದ್ದಾರೆ. ಅದೇನೇ



ಇದ್ದರೂ, ಈ ವಿಚಾರದಲ್ಲಿ ಇತರ ಪಕ್ಷಗಳಿಗೂ ಆಮ್‌ಆದ್ಮಿ ಪಕ್ಷಕ್ಕೂ ಹೋಲಿಸುವ ಹಾಗಿಲ್ಲ ಎಂಬುದು ವಾಸ್ತವ. ಎಡಪಕ್ಷಗಳೂ ಸಹ ಭಾರೀ ಪ್ರಮಾಣದಲ್ಲಿ ಹಣವನ್ನು ಬಳಸಿ ಚುನಾವಣೆ ಗೆಲ್ಲುತ್ತಿದ್ದವು ಎಂದು ಹೇಳಲಾಗುವುದಿಲ್ಲ. ಎಡಪಕ್ಷಗಳಿಗೂ ದೊಡ್ಡ ಗೆಲುವನ್ನು ಸಾಧಿಸಲು ಸಾಧ್ಯವಾಗಿದ್ದು ಮೂರು ರಾಜ್ಯಗಳಲ್ಲಿ ಮಾತ್ರ. ಸದರಿ ಪ್ರಯೋಗವನ್ನು ದೇಶದ ಇತರ ರಾಜ್ಯಗಳಲ್ಲೂ ಮಾಡುವುದು ಸಾಧ್ಯವೇ ಇಲ್ಲವೇ ಎಂಬುದನ್ನು ಇನ್ನೂ ಕಾದುನೋಡಬೇಕಾಗಿದೆ.

ಚುನಾವಣೆಗಳು ನಡೆಯಬೇಕಾದ ರೀತಿಯ ಬಗ್ಗೆ ಅಷ್ಟೇನೂ ಮಡಿವಂತಿಕೆ ಹೊಂದಿಲ್ಲದ ಬಹುಜನ ಸಮಾಜ ಪಕ್ಷವೂ ಸಹ ಉತ್ತರ ಪ್ರದೇಶದಿಂದ ಆಚೆಗೆ, ಅಂತಹ ಪ್ರಮುಖ ಗೆಲುವನ್ನು ಕಂಡಿಲ್ಲದಿರುವ ಹಿನ್ನೆಲೆಯಲ್ಲೂ ನಾವು ಕಾದು ನೋಡುವ ಅಗತ್ಯವಿದೆ. ಏಕೆಂದರೆ, ಆಮ್‌ಆದ್ಮಿ ಪಕ್ಷವು ಚುನಾವಣೆಯನ್ನು ಗೆದ್ದ ನಂತರವೂ ದೇಶದ ಉಳಿದ ಭಾಗಗಳಲ್ಲಿ ಚುನಾವಣಾ ಅಕ್ರಮಗಳು ಕಡಿಮೆಯಾದ ಬಗ್ಗೆಯಾಗಲೀ, ಇತರ ರಾಜಕೀಯ ಪಕ್ಷಗಳಲ್ಲಿ ಏನಾದರೂ ಬದಲಾವಣೆ ಬಂದ ಬಗ್ಗೆಯಾಗಲೀ ದೊಡ್ಡ ಪುರಾವೆಗಳು ಸಿಕ್ಕಿಲ್ಲ. ಈ ಕಾರಣಗಳಿಂದ ಚುನಾವಣಾ ಸುಧಾರಣೆಯನ್ನು ಮಾಡಬೇಕಾದ ಅಗತ್ಯವನ್ನು ನಮ್ಮ ಅಜೆಂಡಾದಿಂದಲೇ ತೆಗೆದು ಹಾಕಿ ಬಿಡಬೇಕಾದ ಪರಿಸ್ಥಿತಿಯೇನೂ ಏರ್ಪಟ್ಟಿಲ್ಲ.

ಇದರ ಆಚೆಗೆ ಇನ್ನೂ ಕೆಲವು ಮುಖ್ಯ ಪ್ರಶ್ನೆಗಳು ಇವೆ. ಆಗಬೇಕಾದ್ದು ಕೇವಲ ಚುನಾವಣಾ ಸುಧಾರಣೆಗಳು ಮಾತ್ರವಾ, ರಾಜಕೀಯ ಸುಧಾರಣೆಯಾ? ರಾಜಕೀಯ ಸುಧಾರಣೆಯೆಂದರೆ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಬರಬೇಕಾದ ರಾಚನಿಕ ಬದಲಾವಣೆಗಳಿಲ್ಲದೇ ಪ್ರತ್ಯೇಕವಾಗಿ ನಡೆಯುವ ಪ್ರಕ್ರಿಯೆಯೇ? ಅಂಬೇಡ್ಕರ್ ಅವರು ಸಂಸದೀಯ ಪ್ರಜಾಪ್ರಭುತ್ವದ ಯಶಸ್ಸಿಗೆ ಪೂರ್ವಷರತ್ತುಗಳೆಂದು ಭಾವಿಸಿದ್ದ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಗಳು ಇಲ್ಲದ ಸಮಾಜದಲ್ಲಿ ಕೇವಲ ಚುನಾವಣಾ ಸುಧಾರಣೆಗಳಿಂದ ಸಂಪೂರ್ಣ ಬದಲಾವಣೆ ಸಾಧ್ಯವೇ?

ಇಂತಹ ಹಲವು ಪ್ರಶ್ನೆಗಳನ್ನು ನಾವೆಲ್ಲರೂ ಕೇಳಿಕೊಳ್ಳಬೇಕು. ಆದರೆ, ಇಂತಹ ಕೆಲವು ಪ್ರಶ್ನೆಗಳನ್ನು ಮುಂದಿಟ್ಟು 'ಚುನಾವಣಾ ಸುಧಾರಣೆ'ಗಳಿಂದ ಹೊರಗುಳಿದಿರುವ ಪ್ರಮುಖ ಪ್ರಗತಿಪರ ಶಕ್ತಿಗಳೆಂದರೆ ವಿವಿಧ ಬ್ರಾಂಡ್‌ನ ಎಡಪಂಥೀಯರು. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬದಲಾವಣೆಗಳು ಹಿಂದಿನದ್ದಕ್ಕಿಂತ (ಅಂದರೆ ಈಗಿರುವುದಕ್ಕಿಂತ) ಸಂಪೂರ್ಣ ಬೇರೆಯೇ ಆದ ರೀತಿಯಲ್ಲಿ ಆಗುವುದು ಕ್ರಾಂತಿಯಿಂದಲ್ಲದೇ ಬೇರೆ ಇನ್ನಾವುದರಿಂದಲೂ ಸಾಧ್ಯವಿಲ್ಲ ಎಂಬುದು ಅವರ ನಂಬಿಕೆ. ಈ ಕ್ರಾಂತಿಯ ಸ್ವರೂಪ ಮತ್ತು ಸಾಧಿಸಲು ಇರುವ ಮಾರ್ಗದ ಕುರಿತು ಬೇರೆ ಬೇರೆ ಬ್ರಾಂಡ್‌ಗಳದ್ದು ಬೇರೆ ಬೇರೆ ಅನಿಸಿಕೆಗಳಿವೆ. ಅದೇನೇ ಇದ್ದರೂ, ಈ ಸುಧಾರಣೆಗಳನ್ನು ಸಾಧಿಸಿಕೊಳ್ಳುವ ಜಾಲಕ್ಕೆ ಸಿಕ್ಕಿ, ನಿಜವಾದ ಬದಲಾವಣೆಗಳನ್ನು ತರುವುದರಿಂದ ದೂರವೇ ಉಳಿದುಬಿಡುವ ಕುರಿತು ಅವರೆಲ್ಲರಿಗೂ ಹೆಚ್ಚು ಕಡಿಮೆ ಒಂದೇ ರೀತಿಯ ಅಭಿಪ್ರಾಯವಿದ್ದಂತಿದೆ.

ಇನ್ನು ಇತರ ಪ್ರಗತಿಪರ ಶಕ್ತಿಗಳ ವಿಚಾರಕ್ಕೆ ಬರುವುದಾದಲ್ಲಿ, ವಿವಿಧ ಜನವಿಭಾಗಗಳ (ರೈತರು, ಕಾರ್ಮಿಕರು, ದಲಿತರು ಇತ್ಯಾದಿ) ಸಂಘಟನೆಗಳು ಆಯಾ ಸಮುದಾಯಗಳ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳಿಗಾಗಿ ಹೋರಾಡುವ ಸಂಘಟನೆಗಳಿವೆ. ಅವು ನಡೆಸುವ ಚಳವಳಿಗಳಲ್ಲಿ ಸಾಮಾಜಿಕ ಮತ್ತು ಆರ್ಥಿಕ ಹಕ್ಕೊತ್ತಾಯಗಳಿಗಾಗಿ ನಡೆಸುವವೇ ಪ್ರಧಾನವಾಗಿರುತ್ತವೆ. ಸಮಾನತೆಗಾಗಿ ನಡೆಸುವ ಈ ಚಳವಳಿಗಳೂ ಸಮಗ್ರ ಬದಲಾವಣೆ ತರಲು ಆಗದೇ ಇರುವುದು, ರಾಜಕೀಯ ಅಧಿಕಾರದ ಕಾರಣಕ್ಕೇ ಎನ್ನುವುದನ್ನು ಬಹುತೇಕ ಎಲ್ಲರೂ ಒಪ್ಪುತ್ತಾರೆ. ಆದರೂ ಆಗಾಗ್ಗೆ ನಡೆಸುವ ಬಿಡಿ ಚಿಂತನೆಗಳಾಚೆ, ಒಂದು ನಿರ್ದಿಷ್ಟ ಪರ್ಯಾಯ ರಾಜಕೀಯ ಪರಿಹಾರವನ್ನು ಮುಂದಿಟ್ಟು ರಾಜಕೀಯ ಆಂದೋಲನ ನಡೆಸುವ ಕೆಲಸ ಯಾರಿಂದಲೂ ಆಗುತ್ತಿಲ್ಲ. ಸಮಾಜವಾದವೇ ಪರ್ಯಾಯ ಎಂದು ಹೇಳುವವರೂ ಸಹಾ ಸಮಾಜವಾದೀ ಸಮಾಜದಲ್ಲಿ ಚುನಾವಣೆ ಹೇಗೆ ನಡೆಯುತ್ತದೆ; ರಾಜಕೀಯ ಅಧಿಕಾರ ಕೆಳಗಿನವರೆಗೂ ಹರಿಯುವ ಬಗೆ ಹೇಗೆ; ಆಡಳಿತದ ನಿರ್ದಿಷ್ಟ ವಿಧಾನಗಳೇನು ಎಂಬ ಬಗ್ಗೆ ಸ್ಪಷ್ಟವಾದ ಪರಿಕಲ್ಪನೆ ಹೊಂದಿದ್ದಂತೆ ಕಾಣುವುದಿಲ್ಲ.


ರಷ್ಯಾ, ಚೀನಾ ಮತ್ತಿತರೆಡೆ ಕ್ರಾಂತಿಯನ್ನು ಸಾಧಿಸಿದ ನಂತರ ಯಾವ ಬಗೆಯ ಚುನಾವಣಾ ವ್ಯವಸ್ಥೆ ಮತ್ತು ಆಡಳಿತ ವ್ಯವಸ್ಥೆ ಇದ್ದಿತ್ತು ಎಂಬ ಬಗ್ಗೆ ಕಮ್ಯುನಿಸ್ಟರೂ ಹೆಚ್ಚು ಪ್ರಚಾರ ಮಾಡುವುದು ಕಾಣುವುದಿಲ್ಲ. ಒಂದು ವೇಳೆ, ಅದರ ಬಗ್ಗೆ ಚರ್ಚೆ ನಡೆದರೆ, ಅದು ಬಹುತೇಕ ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರಗಳ ನೀತಿಗಳಲ್ಲಿ ಬಂದ ಬದಲಾವಣೆಯ ಕುರಿತೇ ಆಗಿರುತ್ತದೆ. ಈ ದೇಶದಲ್ಲೂ ಕ್ರಾಂತಿಯೇ ಆಗಲಿ, ರಷ್ಯಾ ಮತ್ತು ಚೀನಾಕ್ಕಿಂತ ಇನ್ನೂ ಅತ್ಯುತ್ತಮವಾದ ಆಡಳಿತ ವ್ಯವಸ್ಥೆಯೇ ಇಲ್ಲಿ ಬರುವಂತಾಗಲಿ. ಆದರೆ, ಅದರ ಸ್ವರೂಪ ಹೇಗಿರುತ್ತದೆ ಎಂಬುದನ್ನು ಯಾಕೆ ಮುಂದಿಡಬಾರದು? ಇವತ್ತು ಇರುವ ರೀತಿಯ ಪ್ರಜಾತಂತ್ರದಲ್ಲಿ ಜಾತಿವಿನಾಶವೂ, ಪುರುಷಾಧಿಪತ್ಯದ ನಾಶವೂ, ಅಸಮಾನತೆಯ ನಾಶವೂ ಆಗುವುದಿಲ್ಲವೆಂಬ ಖಚಿತ ಅಭಿಪ್ರಾಯವಿದ್ದೂ, ಸಾಮಾಜಿಕ ಮತ್ತು ಆರ್ಥಿಕ ಹಕ್ಕೊತ್ತಾಯಗಳನ್ನು ಮುಂದಿಟ್ಟುಕೊಂಡು ಹೋರಾಡುತ್ತಿಲ್ಲವೇ? ಹಾಗೆಯೇ ರಾಜಕೀಯ ಪರ್ಯಾಯವನ್ನೂ ನಿರ್ದಿಷ್ಟವಾದ ಸ್ವರೂಪದಲ್ಲಿ ಮುಂದಿಡುವುದು ಸಾಧ್ಯವಾಗಬೇಕು.

ಉಳಿದಂತೆ, ರಾಜಕೀಯ ಅಧಿಕಾರದ ಸ್ವರೂಪದಲ್ಲಿ, ಚುನಾವಣೆಗಳು ನಡೆಯಬೇಕಾದ ರೀತಿಯಲ್ಲಿ, ಅಧಿಕಾರವು ಚಲಾವಣೆಯಾಗಬೇಕಾದ ರೀತಿಯ ಕುರಿತಾಗಿ ನಮ್ಮಲ್ಲಿ ಹೆಚ್ಚಿನ ಚರ್ಚೆ ನಡೆಯದಿರಲು ಇನ್ನೂ ಒಂದು ಕಾರಣವಿದೆ. ಅದೇನೆಂದರೆ, ಸಂವಿಧಾನದ ಕುರಿತು ಇರುವ ಪವಿತ್ರ ಭಾವನೆ. 'ಈ ದೇಶದ ಸಂವಿಧಾನ ಅದ್ಭುತವಾಗಿದೆ, ಅದು ಜಗತ್ತಿನ ಅತ್ಯುತ್ತಮ ರಾಜಕೀಯ ದಸ್ತಾವೇಜಾಗಿದ್ದು ಅದರಲ್ಲಿ ದೊಡ್ಡ ಕೊರತೆಗಳಿಲ್ಲ, ಏನಾದರೂ ತಪ್ಪಿದ್ದರೆ, ಅದನ್ನು ಜಾರಿ ಮಾಡುವ ರೀತಿಯಲ್ಲಿ ಅಷ್ಟೇ' ಎನ್ನುವ ಒಂದು ಅಭಿಪ್ರಾಯ ಸಾಕಷ್ಟು ವ್ಯಾಪಕವಾಗಿದೆ. ಬಹುಶಃ ಡಾ.ಬಿ.ಆರ್.ಅಂಬೇಡ್ಕರ್ ಅವರ ಕುರಿತಾದ ಗೌರವದ ಕಾರಣಕ್ಕೂ ಇಂತಹ ಒಂದು ಅಭಿಪ್ರಾಯ ಬಲವಾಗಿರುವ ಸಾಧ್ಯತೆಯಿದೆ. ಸಂವಿಧಾನದ ಕುರಿತು, ಸಂಸದೀಯ ಪ್ರಜಾತಂತ್ರದ ಕುರಿತು ಎಲ್ಲಕ್ಕಿಂತ ಮುಖ್ಯವಾಗಿ ಭಾರತದ ಸಮಾಜದ ಕಟುವಾದ ವಿಮರ್ಶೆಯನ್ನು ಸ್ವತಃ ಅಂಬೇಡ್ಕರರೇ ಮಾಡಿದ್ದರು ಎಂಬುದನ್ನು ಮರೆಯಲಾಗದು.


ದೇಶದ ಎಲ್ಲಾ ಶೋಷಿತ ಸಮುದಾಯಗಳಿಗೂ ಅಧಿಕಾರ ಸಮನಾಗಿ ಸಿಗುವ ನಿಟ್ಟಿನಲ್ಲಿ, ಪ್ರಜಾತಂತ್ರದ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಪ್ರಜೆಯೂ ಸಕ್ರಿಯವಾಗಿ ಭಾಗಿಯಾಗಲು ಸಾಧ್ಯವಾಗುವ ರೀತಿಯಲ್ಲಿ ಪ್ರಜಾತಂತ್ರದ ರಚನೆ ಹಾಗೂ ಪುನರ್‌ರಚನೆ ಹೇಗಾಗಬೇಕು ಎಂಬುದು ಸಾಕಷ್ಟು ಚರ್ಚೆಗೆ ಒಳಗಾಗುವ ಅಗತ್ಯವಿದೆ. ಸೂಕ್ತವಾದ ಪರ್ಯಾಯಗಳನ್ನೂ ಮುಂದಿಟ್ಟು ರಾಜಕೀಯ ಆಂದೋಲನವಾಗದೇ ಇಂದಿನ ಸ್ಥಿತಿಯಲ್ಲಿ ಬದಲಾವಣೆ ಬರುವುದಿಲ್ಲ.

ಹಾಗಾದರೆ, ಇಂದು ಕೆಡುತ್ತಿರುವ ವ್ಯವಸ್ಥೆಯ ಕುರಿತು ನೈತಿಕ ಪ್ರಶ್ನೆಗಳನ್ನು ಎತ್ತುವುದು ಬೇಡವೇ? ಖಂಡಿತಾ ಎತ್ತಬೇಕು. ಕೇವಲ ನೈತಿಕ ಪ್ರಶ್ನೆಗಳು ಮತ್ತು ಬೈಗುಳಗಳಿಂದ ಈ ವ್ಯವಸ್ಥೆಯನ್ನು ಬದಲಿಸಲಾಗದು ಅಷ್ಟೇ. ಆದರೂ ಹಣ ಹಂಚುವವರು ಮತ್ತು ಹಣ ಪಡೆದುಕೊಳ್ಳುವ ಮತದಾರರ ಮುಂದೆಯೂ ನೈತಿಕ ಪ್ರಶ್ನೆಗಳನ್ನು ಎತ್ತಲೇಬೇಕು. ಅವರಲ್ಲಿ ಕನಿಷ್ಠ ನಾಚಿಕೆ ಮೂಡದಿದ್ದರೆ, ಸಾರ್ವಜನಿಕವಾಗಿ ಜನ ಥೂ, ಛೀ ಎನ್ನಬಹುದು ಎಂಬ ಭಯ ಇಲ್ಲದಿದ್ದಲ್ಲಿ ನಾವು ಬಯಸುವ ರಾಜಕೀಯ ಆಂದೋಲನವೂ ಸೃಷ್ಟಿಯಾಗುವುದಿಲ್ಲ.

ಈಗ ತಾನೇ ಚುನಾವಣೆ ಮುಗಿದಿರುವ ಸ್ಥಳೀಯ ಸಂಸ್ಥೆಗಳ ವಿಧಾನಪರಿಷತ್ ಕ್ಷೇತ್ರದ ಮತದಾರರ ಎದುರು ಈ ಪ್ರಶ್ನೆಗಳನ್ನು ಕೇಳಬೇಕು. ಸದ್ಯದಲ್ಲೇ ಬರುತ್ತಿರುವ ತಾ.ಪಂ., ಜಿ.ಪಂ. ಮತದಾರರು ಹಾಗೂ ಅಭ್ಯರ್ಥಿಗಳನ್ನು ಪ್ರಶ್ನಿಸಬೇಕು; ಹಾಗೆಯೇ ಶಿಕ್ಷಕರ ಕ್ಷೇತ್ರ ಮತ್ತು ಪದವೀಧರರ ಕ್ಷೇತ್ರದ ಅಭ್ಯರ್ಥಿಗಳು ಮತ್ತು ಮತದಾರರಿಗೆ ಎಲ್ಲರಿಗಿಂತ ಹೆಚ್ಚು ಛೀಮಾರಿ ಹಾಕಬೇಕು. ಅಲ್ಲೇನಾದರೂ ನಾಚಿಕೆ ಮೂಡಿದರೆ, ಬಹುಶಃ ಅದೂ ಸಹ ನಾವು ಬಯಸುವ ರಾಜಕೀಯ ಆಂದೋಲನಕ್ಕೆ ದಾರಿ ಮಾಡಿಕೊಡಬಹುದು. ■



ಮುಠ್ಠಾಳರ ಸಂಘ





• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಇತ್ತೀಚೆಗೆ ಖ್ಯಾತ ವಿಜ್ಞಾನಿಯೂ, ಭಾರತ ರತ್ನ ಪ್ರಶಸ್ತಿ ವಿಜೇತರೂ ಆದ ಸಿ.ಎನ್.ಆರ್.ರಾವ್ ಅವರು ಒಂದು ಸಂದರ್ಶನದಲ್ಲಿ "ನರೇಂದ್ರ ಮೋದಿಯವರು ದೂರದೃಷ್ಟಿಯನ್ನು ಹೊಂದಿರುವ ಮನುಷ್ಯ" ಎಂದೂ, "ಅವರಿಗೆ ಸೂಕ್ತ ವಿಜ್ಞಾನಿಗಳಿಂದ ಸಲಹೆಗಳು ಸಿಕ್ಕರೆ ದೇಶಕ್ಕೆ ಒಳ್ಳೆಯದಾಗುತ್ತೆ" ಎಂದೂ ಹೇಳಿದರು. ಪಾಪ, ಅದು ಅವರ ದೊಡ್ಡತನವೆನ್ನಬೇಕೋ ಅಥವಾ ದಡ್ಡತನ ಅನ್ನಬೇಕೋ ಗೊತ್ತಾಗುತ್ತಿಲ್ಲ. ಯಾಕೆಂದರೆ ಸ್ವತಃ ರಾವ್ ಅವರೇ ಮುಖ್ಯಸ್ಥರಾಗಿದ್ದ 'ಪ್ರಧಾನ ಮಂತ್ರಿಯ ವೈಜ್ಞಾನಿಕ ಸಲಹಾ ಮಂಡಳಿ'ಯನ್ನು ಮೋದಿ ಪ್ರಧಾನಿ ಆದ ದಿನದಿಂದಲೇ ತಟಸ್ಥಗೊಳಿಸಲಾಗಿದೆ. ಯಾವ ಮಟ್ಟಕ್ಕೆಂದರೆ ಅದರ ವೆಬ್‌ಸೈಟನ್ನೂ ಒಂದೂವರೆ ವರ್ಷಗಳಿಂದ ಅಪ್‌ಡೇಟ್ ಮಾಡುವ ಗೋಜಿಗೆ ಯಾರೂ ಹೋಗಿಲ್ಲ. ಈಗಲೂ ಅದರಲ್ಲಿ ಮನಮೋಹನ್ ಸಿಂಗ್ ಅವರೇ ಪ್ರಧಾನಿಯಾಗಿ ಮಿಂಚುತ್ತಿದ್ದಾರೆ ಮತ್ತು ರಾವ್ ಅವರೇ ಈಗಲೂ ಮಂಡಳಿಯ ಮುಖ್ಯಸ್ಥರೆಂದು ಆ ವೆಬ್‌ಸೈಟ್ ಹೇಳುತ್ತದೆ.

ಪ್ರಾಯಶಃ ಮೋದಿಗೆ ರಾವ್ ತರಹದ ಅಂತರರಾಷ್ಟ್ರೀಯ ಮಟ್ಟದ ವಿಜ್ಞಾನಿಗಳಿಂದ, ಎಂಜಿನಿಯರ್‌ಗಳಿಂದ, ಸಂಶೋಧಕರಿಂದ, ತಂತ್ರಜ್ಞಾನಿಗಳಿಂದ ಯಾವ ತರಹದ ಸಲಹೆಗಳೂ ಬೇಕಿಲ್ಲ. ಯಾಕೆಂದರೆ ಆರೆಸ್ಸೆಸ್ ಎಂಬ ಸಂಘಟನೆಯಲ್ಲೇ ಬೆಳೆದು ಈಗ ಕೇಂದ್ರ ಸರ್ಕಾರದಲ್ಲಿ, ಬಿಜೆಪಿ ಪಕ್ಷದಲ್ಲಿ ಮತ್ತು ಒಟ್ಟಾರೆ ಸಂಘಪರಿವಾರದಲ್ಲಿ ಆಯಕಟ್ಟಿನ ಸ್ಥಾನಗಳನ್ನು ಅಲಂಕರಿಸಿರುವವರಲ್ಲಿ ಸಾಕಷ್ಟು ಮಂದಿ ವೈಜ್ಞಾನಿಕ ಮನೋಭಾವವನ್ನು ಹೊಂದಿರುವವರು ಇದ್ದಾರೆ (?) ಅವರಲ್ಲಿ ಸ್ವತಃ ಮೋದಿಯೂ ಒಬ್ಬ.

ನೆಹರೂ ಕಾಲದಿಂದ ಅಸ್ತಿತ್ವದಲ್ಲಿದ್ದ ವೈಜ್ಞಾನಿಕ ಸಲಹಾಮಂಡಳಿಗೆ ದೊಡ್ಡ ಜವಾಬ್ದಾರಿ ಇತ್ತು. ಅದೇನೆಂದರೆ ಸರ್ಕಾರದ ನೀತಿಗಳನ್ನು ವೈಜ್ಞಾನಿಕವಾಗಿ ಜಾರಿಗೆ ತಂದು ಅದು ಸಾಧ್ಯವಾದಷ್ಟು ಹೆಚ್ಚು ಜನರಿಗೆ ತಲುಪುವಂತೆ ಮಾಡುವುದು. ಜೊತೆಗೆ ವೈಜ್ಞಾನಿಕ ಚಿಂತನೆಯನ್ನು ಹೆಚ್ಚಿಸುವುದು, ವೈಜ್ಞಾನಿಕ ಸಂಶೋಧನೆಗಳಿಗೆ ಒತ್ತು ಕೊಡುವುದು ಇತ್ಯಾದಿ ಕೆಲಸಗಳನ್ನೂ ಮಂಡಳಿ ಮಾಡುತ್ತಿತ್ತು. ಆದರೀಗ ಮೋದಿ ಮತ್ತು ಆತನ ಪಟಾಲಂಗೆ ಇದರ ಅವಶ್ಯಕತೆ ಇಲ್ಲದಂತಾಗಿದೆ. ಯಾಕೆಂದರೆ ಆಧುನಿಕ ತಂತ್ರಜ್ಞಾನವನ್ನು ಬಲ್ಲ ಈಗಿನ ವಿಜ್ಞಾನಿಗಳಿಗಿಂತಲೂ ಮೋದಿ ಮತ್ತು ಆತನ ವಿದ್ವಾಂಸ ಪಡೆಗೆ ಪುರಾಣ, ವೇದ, ಉಪನಿಷತ್ತು ಇತ್ಯಾದಿಗಳಲ್ಲೇ ಅತ್ಯದ್ಭುತವಾದ ವಿಚಾರಗಳು, ವಿಜ್ಞಾನಗಳು, ಸಂಶೋಧನೆಗಳು ಅಡಗಿವೆ. ಅವನ್ನೆಲ್ಲ ಮೋದಿ ಮತ್ತಾತನ ಪರಿವಾರ ಈಗಾಗಲೇ ಅರಿತುಕೊಂಡಿರುವುದರಿಂದ ರಾವ್ ಮತ್ತು ಅವರಂತಹ ಆಧುನಿಕ ವಿಜ್ಞಾನಿಗಳಿಂದ ಮೋದಿ ಸರ್ಕಾರಕ್ಕೆ ಕಿಂಚಿತ್ತು ಉಪಯೋಗವಿಲ್ಲ.

ಉದಾಹರಣೆಗೆ, ಮೋದಿ ಗುಜರಾತಿನ ಮುಖ್ಯಮಂತ್ರಿ ಆಗಿದ್ದಾಗ ಒಂದು ಶಾಲಾ ಪುಸ್ತಕಕ್ಕೆ ಆತ ಮುನ್ನುಡಿ ಬರೆದಿದ್ದ. ಆ ಪುಸ್ತಕದಲ್ಲಿ ಅಮೆರಿಕದ ರೈಟ್ ಸಹೋದರರಿಗಿಂತಲೂ ಸಾವಿರಾರು ವರ್ಷಗಳ ಹಿಂದೆಯೇ ಭಾರತದಲ್ಲಿ ಶ್ರೀರಾಮ ವಿಮಾನ ಹಾರಿಸಿದ್ದ ಎಂಬಂತಹ ವೈಜ್ಞಾನಿಕ 'ಪಾಠ'ಗಳಿದ್ದವು. ಮೋದಿಯ ಈ ಅಮೋಘ ಜ್ಞಾನದರ್ಶನ ಆಗ ಬರೀ ಗುಜರಾತಿನ ಜನರಿಗೆ ಆಗಿತ್ತು. 'ವಿಕಾಸ ಪುರುಷ'ನಾಗಿ ಪೋಜು ಕೊಟ್ಟು ಪ್ರಧಾನಿ ಆದನಂತರ ಆತನ ಅರಿವಿನ ಆಳ ಮತ್ತು ಅಗಲ ದೇಶದ ಜನರಿಗೂ ಗೊತ್ತಾಗಬೇಕಲ್ಲವೆ? ಆದ್ದರಿಂದ ಆತ 2014ರ ಆಗಸ್ಟ್ ತಿಂಗಳಲ್ಲಿ ಮುಂಬೈಯಲ್ಲಿ ತನ್ನ ಪ್ರಾಯೋಜಕರಲ್ಲಿ ಒಬ್ಬರಾದ ಕೋಟ್ಯಾಧಿಪತಿ ಉದ್ಯಮಿ ಮುಕೇಶ್ ಅಂಬಾನಿಗೆ ಸೇರಿದ ಒಂದು ಆಸ್ಪತ್ರೆಯನ್ನು ಉದ್ಘಾಟಿಸುತ್ತ ತನ್ನ ಜ್ಞಾನಭಂಡಾರವನ್ನು ದೇಶದ ಮುಂದೆ ಮಾತ್ರವಲ್ಲ, ಇಡೀ ಜಗತ್ತಿನ ಮುಂದೆಯೇ ಪ್ರದರ್ಶಿಸಿದ. ಅಂದು ಮೋದಿ "ಮಹಾಭಾರತದಲ್ಲಿ ಕರ್ಣ ಕುಂತಿಯ ಗರ್ಭದಿಂದ ಹುಟ್ಟಲಿಲ್ಲ ಎಂದು ಹೇಳಲಾಗಿದೆ. ಅದರ ಅರ್ಥ ಆಗಿನ ಕಾಲದಲ್ಲೇ ನಮ್ಮ ದೇಶದಲ್ಲಿ ಕ್ಲೋನಿಂಗ್ ತಂತ್ರಜ್ಞಾನ ಇತ್ತು ಎಂಬುದು. ಹಾಗೆಯೇ ನಾವೆಲ್ಲ ಗಣೇಶನನ್ನು ಪೂಜಿಸುತ್ತೇವೆ. ಆಗಿನ ಕಾಲದಲ್ಲಿ ಬಾಲಕನ ದೇಹಕ್ಕೆ ಆನೆಯ ತಲೆಯನ್ನು ಜೋಡಿಸುವ ಪ್ಲಾಸ್ಟಿಕ್ ಸರ್ಜರಿ ಕುರಿತ ಜ್ಞಾನವೂ ನಮ್ಮವರಿಗಿತ್ತು" ಎಂದೆಲ್ಲ ಹೇಳಿದ್ದ.

ಸಹಜವಾಗಿಯೇ ಮೋದಿಯ ಇಂತಹ 'ಜ್ಞಾನ'ಕ್ಕೆ, ಕಸ್ನಂತಹ ಕುತರ್ಕಗಳಿಂದ ವಿರೋಧ ವ್ಯಕ್ತವಾಗಿತ್ತು. ಅದರಲ್ಲೂ ಮಂಗಳೂರಿನ ಪ್ರವೀಣ್ ಎಸ್ ಶೆಟ್ಟಿ ತರಹದವರು "ಕರ್ಣ ಕುಂತಿಯ ಗರ್ಭದಿಂದ ಜನಿಸಲಿಲ್ಲ ಎಂದರೆ ಆತನಿಗೆ ಹೊಕ್ಕಳು ಇರಲಿಲ್ಲ ಎಂದರ್ಥ. ಹಾಗೆಯೇ ಸಂಘ ಪರಿವಾರದವರು ಹೇಳುವಂತೆ ಕೌರವರೂ ಕ್ಲೋನಿಂಗ್ ತಂತ್ರಜ್ಞಾನದಿಂದ ಜನಿಸಿದವರಾದ್ದರಿಂದ ಅವರೆಲ್ಲರಿಗೂ ಹೊಕ್ಕಳು ಇರಲಿಲ್ಲ ಎಂದಾಯಿತಲ್ಲವೇ" ಎಂದು ಪ್ರಶ್ನಿಸಿದ್ದರು. ಆಗ ಬಿಜೆಪಿಯ ಮತ್ತೊಬ್ಬ ಮೇಧಾವಿ ನಮ್ಮೆಲ್ಲರ ಅಜ್ಞಾನವನ್ನು ಖಂಡಿಸುತ್ತಾ, ಮೋದಿ ಹೇಳಿದ್ದೇ ಸರಿ ಎಂದು ವಾದಿಸಿದ್ದ. ಉತ್ತರಖಂಡದ ಮಾಜಿ ಮುಖ್ಯಮಂತ್ರಿಯೂ ಹಾಲಿ ಸಂಸದನೂ ಆದ ರಮೇಶ್ ಪೋಕ್ರಿಯಲ್ ನಿಶಾಂಕ್ ಎಂಬಾತ ಸಂಸತ್ತಿನಲ್ಲೇ "ಮೋದಿ ಅವರು ಗಣೇಶನ ಪ್ಲಾಸ್ಟಿಕ್ ಸರ್ಜರಿ ಕುರಿತು ಹೇಳಿರುವ ಮಾತು ಸರಿಯಾದದ್ದು. ಆಗ ನಿಜವಾಗಲೂ ಅಂತಹ ಶಸ್ತ್ರಚಿಕಿತ್ಸೆ ನಡೆದಿತ್ತು. ಬೇರೆ ಜಗತ್ತಿನ ಯಾವ ಕಡೆಯೂ ಇಲ್ಲದಿದ್ದ ಜ್ಞಾನ ನಮ್ಮವರಿಗಿತ್ತು" ಎಂಬ ಮಹತ್ತರ ಸಂಗತಿಯನ್ನು ಬಹಿರಂಗಪಡಿಸಿದ್ದ. ಅಂದಹಾಗೆ ಈ ನಿಶಾಂಕ್ ಪ್ರಕಾರ ಜ್ಯೋತಿಷ್ಯವೂ ಒಂದು ವಿಜ್ಞಾನವಂತೆ. ಅಷ್ಟೇ ಅಲ್ಲ, ಭಾರತೀಯ ವಿಜ್ಞಾನಿಗಳು ಈಗ 'ನಾವೂ ಅಣು ಬಾಂಬ್ ತಯಾರಿಸಿದ್ದೇವೆ' ಎಂದು ಬೆನ್ನು ತಟ್ಟಿಕೊಳ್ಳುತ್ತಿದ್ದಾರೆ. ಆದರೆ ವಾಸ್ತವವಾಗಿ ಅಮೆರಿಕದವರು ಮತ್ತು ರಷ್ಯಾದವರು ಅಣು ಬಾಂಬ್‌ಅನ್ನು ತಯಾರಿಸುವ ಮುನ್ನವೇ, ಕ್ರಿಸ್ತಪೂರ್ವ ಎರಡನೆ ಶತಮಾನದಲ್ಲಿ ಕಣಾದ್ ಎಂಬ ಋಷಿಯು ಮೊಟ್ಟಮೊದಲ ಬಾರಿಗೆ ಅಣುಬಾಂಬ್‌ಗಳನ್ನು ಸ್ಫೋಟಿಸಿದ್ದನಂತೆ. ಹಾಗೆ ಹೇಳುವಾಗ ಪಾಪ ನಿಶಾಂಕ್ ಅವರು ಕ್ರಿ.ಪೂ ಎರಡನೆ ಶತಮಾನವನ್ನು 2,200 ವರ್ಷಗಳ ಹಿಂದೆ ಎನ್ನುವ ಬದಲಾಗಿ 'ಲಕ್ಷಾಂತರ ವರ್ಷಗಳ ಹಿಂದೆ' ಎಂದು ಮಾತಿನ ಭರದಲ್ಲಿ ತಪ್ಪು ಲೆಕ್ಕಹಾಕಿದ್ದಾರಷ್ಟೇ. ಅದನ್ನೇ ನಮ್ಮಂತಹವರು ಆಧಾರವಾಗಿಟ್ಟುಕೊಂಡು ಅವರು ಬಯಲುಗೊಳಿಸಿರುವ ಸತ್ಯಸಂಗತಿಯನ್ನು ಅಲ್ಲಗಳೆಯುವುದು ಸೂಕ್ತವಲ್ಲ. ಹಾಗೆ ಅಲ್ಲಗಳೆದರೆ ಅದು ನಮ್ಮ ಮುಠ್ಠಾಳತನವಾಗುತ್ತದೆ.

ಮೋದಿಯ ಸಚಿವ ಸಂಪುಟದಲ್ಲಿ ಹರ್ಷ ವರ್ಧನ್ ಎಂಬುವವರು ಮೊದಲು ಆರೋಗ್ಯ ಮಂತ್ರಿ ಆಗಿದ್ದರು. ಆಗ ಅವರು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಗೆ ಕೊಟ್ಟ ಸಂದರ್ಶನವೊಂದರಲ್ಲಿ "ಏಡ್ಸ್ ನಿಯಂತ್ರಿಸಲು ಕಾಂಡೋಮ್‌ಗಳ ಬದಲಾಗಿ ನಮ್ಮ ಭಾರತೀಯ ಸಂಸ್ಕೃತಿಯನ್ನು ಉಪಯೋಗಿಸಿಕೊಳ್ಳಬೇಕು" ಎಂಬ ನಿಲುವನ್ನು ವ್ಯಕ್ತಪಡಿಸಿದ್ದರು. ರಾಜಕಾರಣಿ ಆಗುವ ಮುನ್ನ ಈ ವರ್ಧನ್ ಮಹಾಶಯರು ವೃತ್ತಿಯಲ್ಲಿ ವೈದ್ಯರಾಗಿದ್ದವರು. ಆದ್ದರಿಂದ ಏಡ್ಸ್ ರೋಗದ ನಿಯಂತ್ರಣಕ್ಕೆ ಸಂಪ್ರದಾಯ ಮತ್ತು ಸಂಸ್ಕೃತಿಗಿಂತಲೂ ಕಾಂಡೋಮ್‌ಗಳೇ ಸೂಕ್ತ ಎಂಬುದು ಇವರಿಗೆ ಗೊತ್ತಿಲ್ಲವೆ ಎಂದು ಹಲವು ದಡ್ಡ ಶಿಖಾಮಣಿಗಳು ಪ್ರಶ್ನಿಸಿದ್ದವು. ಹಾಗೆಯೇ ವರ್ಧನ್ ಸಾಹೇಬರು ಶಾಲೆಗಳಲ್ಲಿ "ಲೈಂಗಿಕ ಶಿಕ್ಷಣದ ಅವಶ್ಯಕತೆ ಇಲ್ಲ" ಎಂದಿದ್ದರು. ಅದನ್ನೂ ಕೆಲವರು ಪ್ರಶ್ನಿಸಿದಾಗ "ಇಲ್ಲ, ಇಲ್ಲ, ಲೈಂಗಿಕ ಶಿಕ್ಷಣ ಇರಲಿ ಆದರೆ ಅದು ಕೀಳುಮಟ್ಟದ್ದು ಆಗಿರಕೂಡದು" ಎಂದಿದ್ದರು. ಆದರೆ ಲಿಂಗಗಳ ಬೆಳವಣಿಗೆ, 'ಗುಡ್ ಟಚ್/ಬ್ಯಾಡ್ ಟಚ್', ವೀರ್ಯ, ಅಂಡಾಣು ಇತ್ಯಾದಿಗಳ ಬಗ್ಗೆ ಮಾತನಾಡದೆ ಲೈಂಗಿಕ ಶಿಕ್ಷಣದ ಪಾಠಗಳನ್ನು ರೂಪಿಸುವುದು ಹೇಗೆ ಎಂಬುದೇ ಶಿಕ್ಷಕರಿಗೆ ದೊಡ್ಡ ತಲೆನೋವಾಗಿತ್ತು. ಅದೇನೇ ಇರಲಿ, ವರ್ಧನ್ ಅವರ ಈ ಅಮೋಘ ಜ್ಞಾನದ ಅರಿವು ಆಗ ಮೋದಿಗೆ ಆಗಿರಬೇಕು. ಆದ್ದರಿಂದ ಈತನಿಗೆ ಆರೋಗ್ಯ ಖಾತೆಗಿಂತ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆಯೇ ಸೂಕ್ತ ಎಂದು ಆತನನ್ನು ಈ ಇಲಾಖೆಗೆ ವರ್ಗಾಯಿಸಿದರು. ಈ ಇಲಾಖೆಯನ್ನೂ, ವರ್ಧನ್ ಸಾಹೇಬರು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದಾರೆ. ಉದಾಹರಣೆಗೆ, ಹೋದ ವರ್ಷ ಭಾರತೀಯ ವಿಜ್ಞಾನ ಸಮಾವೇಶ ನಡೆದಾಗ ಕೇಸರಿ ಪಡೆಯ ಹಲವು ಸ್ವಯಂಘೋಷಿತ ವಿಜ್ಞಾನಿಗಳು ಐದು ಸಾವಿರ ವರ್ಷಗಳ ಹಿಂದೆಯೇ ಭಾರತದಲ್ಲಿ ವಿಮಾನಗಳಿದ್ದವು, ಒಂದು ಗ್ರಹದಿಂದ ಇನ್ನೊಂದು ಗ್ರಹಕ್ಕೆ ಹಾರಬಲ್ಲಂತಹ ಬಾನಗಾಡಿಗಳಿದ್ದವು, ಅಂತಹ ಯಂತ್ರಗಳಿಗೆ ಗಂಜಲದಿಂದ ತಯಾರಿಸಲಾದ ಇಂಧನವನ್ನು ಉಪಯೋಗಿಸಲಾಗುತ್ತಿತ್ತು ಎಂದೆಲ್ಲ ತರ್ಕಗಳನ್ನು ಮಂಡಿಸಿದ್ದರು. ಆಗಲೂ ಹಲವರು "ಇದೆಲ್ಲ ಎಂತಹ ಮೌಢ್ಯ? ರಾಮಾಯಣದಲ್ಲಿ ಬರುವ ಪುಷ್ಪಕ ವಿಮಾನವು ಕವಿಯ ಕಲ್ಪನೆಯೇ ಹೊರತು ಅದು ವಾಸ್ತವವಲ್ಲ" ಎಂದು ತಕರಾರು ಎತ್ತಿದ್ದರು. ಆಗ ವರ್ಧನ್ ಸಾಹೇಬರು "ಭಾರತೀಯ ವಿಜ್ಞಾನಿಗಳು ನಮ್ಮ ಪೂರ್ವಜರು ಮಾಡಿದ್ದ ಸಾಧನೆಗಳ ಬಗ್ಗೆ ಕೀಳು ಭಾವನೆ ಇಟ್ಟುಕೊಳ್ಳುವ ಅಗತ್ಯವಿಲ್ಲ. ಯಾಕೆಂದರೆ ಸಾವಿರಾರು ವರ್ಷಗಳ ಹಿಂದೆ ಭಾರತವು ವಿಜ್ಞಾನದಲ್ಲಿ ಮಾತ್ರವಲ್ಲ, ವೈದ್ಯಕೀಯ, ಕಲೆ, ಸಂಸ್ಕೃತಿ, ವಾಣಿಜ್ಯ ಸೇರಿದಂತೆ ವಿವಿಧ ರಂಗಗಳಲ್ಲಿ ಉತ್ತುಂಗ ಪರ್ವದಲ್ಲಿತ್ತು" ಎಂದು ಸ್ಪಷ್ಟಪಡಿಸುವ ಮೂಲಕ ಕೇಸರಿ ಬಣದ ವಿಜ್ಞಾನಿಗಳಲ್ಲಿ ಆತ್ಮವಿಶ್ವಾಸವನ್ನು ತುಂಬಿದ್ದರು.

ಇದೆಲ್ಲ ನಡೆಯುತ್ತಿದ್ದಾಗ ಸಾರಿಗೆ ಸಚಿವ ನಿತಿನ್ ಗಡ್ಕರಿಯವರು ತಮ್ಮದೇ ಆದ ಸಂಶೋಧನೆಯಲ್ಲಿ ತೊಡಗಿದ್ದರು. ಆದರೆ ಅವರು ಚೆಡ್ಡಿಗಳಿಗೆ ಬಹುಪ್ರಿಯವಾದ ಗೋವಿನ ಗಂಜಲದ ಬದಲಾಗಿ ತಮ್ಮ ಮೂತ್ರವನ್ನೇ ತಮ್ಮ ಮೌಲಿಕ ಸಂಶೋಧನೆಯ ಕಚ್ಚಾವಸ್ತು ಆಗಿ ಉಪಯೋಗಿಸಿದ್ದರು. ಬರ ಸಮಸ್ಯೆ ಕುರಿತು ಕಳೆದ ವರ್ಷ ಬಿಜೆಪಿ ನಾಗಪುರದಲ್ಲಿ ಆಯೋಜಿಸಿದ್ದ ಸಭೆಯೊಂದರಲ್ಲಿ ವಿಜ್ಞಾನಿ ಗಡ್ಕರಿ ತಮ್ಮ ಸಂಶೋಧನೆಯ ಫಲವನ್ನು ಸಾರ್ವಜನಿಕರೊಂದಿಗೆ ಹಂಚಿಕೊಂಡಿದ್ದರು.

ಅವತ್ತಿನ ಸಭೆಯಲ್ಲಿ ಅವರು ಹೀಗೆ ಹೇಳಿದ್ದರು: "ನಾನು ನನ್ನ ದೆಹಲಿ ಮನೆಯಲ್ಲಿ ಒಂದು ಪ್ಲಾಸ್ಟಿಕ್ ಕ್ಯಾನ್‌ನಲ್ಲಿ ನನ್ನ ಮೂತ್ರವನ್ನು ಸಂಗ್ರಹಿಸಲಾರಂಭಿಸಿದೆ. ಒಂದು ದಿನ ಆ ಮೂತ್ರವನ್ನು ಹಲವು ಗಿಡಗಳಿಗೆ ಹಾಕಲು ನನ್ನ ಮನೆ ತೋಟದ ಮಾಲಿಗೆ ಹೇಳಿದೆ. ಆತ ಹಾಗೆಯೇ ಮಾಡಿದ. ನೋಡುನೋಡುತ್ತಿದ್ದಂತೆ ಮೂತ್ರ ಹಾಕಿದ ಗಿಡಗಳು ಜೋರಾಗಿ ಬೆಳೆಯಲಾರಂಭಿಸಿದವು. ಈಗ ನಾನು ಐವತ್ತು ಲೀಟರ್ ಮೂತ್ರವನ್ನು ಸಂಗ್ರಹಿಸಿಡಬಲ್ಲ ಕ್ಯಾನ್‌ಗಳನ್ನು ಇಟ್ಟುಕೊಂಡಿದ್ದು ಪ್ರತಿದಿನ ಅವುಗಳಲ್ಲಿ ನನ್ನ ಮೂತ್ರವನ್ನು ಇಡುತ್ತೇನೆ. ಮೂತ್ರದಲ್ಲಿ ಯೂರಿಯಾ ಮತ್ತು ಸಾರಜನಕ ಇರುವುದರಿಂದ ಅದು ಉತ್ತಮ ಗೊಬ್ಬರವಾಗುತ್ತದೆ. ಆ ಕಾರಣಕ್ಕೆ ಇವತ್ತು ನನ್ನ ಮನೆಯ ತೋಟದಲ್ಲಿ ಮೂತ್ರದಿಂದಾಗಿ ಹಲವು ಗಿಡಗಳು ಇತರೆ ಗಿಡಗಳಿಗಿಂತ ಒಂದೂವರೆ ಅಡಿ ಎತ್ತರ ಬೆಳೆದಿವೆ."

ಪಾಪ ಗಡ್ಕರಿಯವರು ಬರಪೀಡಿತ ಪ್ರದೇಶಗಳ ಪರಿಹಾರಕ್ಕೆಂದು ಇಂತಹ ಅದ್ಭುತ ಸಂಶೋಧನೆಯನ್ನು ನಡೆಸಿದ್ದರೆ, ಅದನ್ನು ಅರ್ಥಮಾಡಿಕೊಳ್ಳದ ಸಸ್ಯವಿಜ್ಞಾನಿಗಳು ಮಾನವ ಮೂತ್ರದಲ್ಲಿ ಗಿಡಗಳ ಬೆಳವಣಿಗೆಗೆ ಪ್ರಚೋದಿಸುವ ಅಂಶಗಳು ಇವೆ ಎಂಬುದಕ್ಕೆ ಯಾವುದೇ ವೈಜ್ಞಾನಿಕ ಪುರಾವೆಗಳಿಲ್ಲ ಎಂದೇ ವಾದಿಸಿದರು. ಅವರಿಗೇನು ಗೊತ್ತು? ಅವರು ಎಂದಾದರೂ ಗಡ್ಕರಿ ಅವರಂತೆ ಸಂಶೋಧನೆ ಮಾಡಿದ್ದಾರೆಯೆ? ಅವರೆಲ್ಲ ನಮ್ಮ ಕೃಷಿ ಇಲಾಖೆ ಮತ್ತು ವಿಶ್ವವಿದ್ಯಾಲಯಗಳಿಂದ ದೊಡ್ಡ ಮೊತ್ತದ ಸಂಬಳ ಪಡೆದು ಕಾಲಹರಣ ಮಾಡುತ್ತಿರುವ ನಿಷ್ಪ್ರಯೋಜಕರು.

ಕೃಷಿ ಮಂತ್ರಿ ರಾಧಾಮೋಹನ್ ಸಿಂಗ್ ಎಂಬುವವರೂ ಸುಮ್ಮನೇನು ಕೂತಿರಲಿಲ್ಲ. ದೇಶದಲ್ಲಿ ರೈತರು ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ ಅವರು ತಮ್ಮ ಕೈಲಾದಷ್ಟನ್ನು ಮಾಡಿ ರೈತರ ನೆರವಿಗೆ ಬಾರದೆ ಇರಲಾಗುತ್ತದೆಯೇ? ಮೋದಿ ಸಾಹೇಬರು ತಮಗೆ ಕೊಟ್ಟಿರುವ ಖಾತೆಗೆ ನ್ಯಾಯ ಒದಗಿಸಬಾರದೆ? ಅದಕ್ಕೇ ಸಿಂಗ್ ಅವರೂ ತಮ್ಮದೇ ಆದಂತಹ ಪ್ರಯೋಗಗಳನ್ನು ನಡೆಸಿದರು. ಒಂದು ವರ್ಷ ಕಾಲ ಅವರು ನಡೆಸಿದ ಪ್ರಯೋಗ ಫಲ ನೀಡಿತು. ಸಹಜವಾಗಿಯೇ ಅವರು ಅದನ್ನು ಸಂತೋಷದಿಂದಲೇ ದೇಶದ ರೈತರಿಗೆ ತಿಳಿಸಿದರು. ಅವರು ಏನನ್ನು ಹೇಳಿದರೆಂದರೆ "ರಾಜಯೋಗ ಮಾಡಿದರೆ ರೈತರ ಎಲ್ಲಾ ಸಮಸ್ಯೆಗಳು ಬಗೆಹರಿದು ಅವರು ಆತ್ಮಹತ್ಯೆ ಮಾಡಿಕೊಳ್ಳುವ ಬದಲು ನೆಮ್ಮದಿಯ ಜೀವನವನ್ನು ಸಾಗಿಸುವಂತಾಗುತ್ತದೆ. ಯೋಗದಿಂದ ರೈತರು ಬಿತ್ತುವ ಬೀಜಗಳಿಗೆ ಪರಮಾತ್ಮನ ಶಕ್ತಿ ಕಿರಣಗಳು ತಾಕಿ ಅವು ಉತ್ತಮ ಬೆಳೆಯಾಗಿ ಬೆಳೆಯುತ್ತವೆ. ಇದೆಲ್ಲದರಿಂದಾಗಿ ತಾಪಮಾನ ಏರಿಕೆ, ಇತ್ಯಾದಿ ಸಮಸ್ಯೆಗಳಿಂದ ಕೃಷಿಕರಿಗೆ ಬಿಡುಗಡೆ ಸಿಗುತ್ತದೆ" ಎಂಬ ಮಹತ್ತರವಾದ ಆವಿಷ್ಕಾರ.


ಗೃಹ ಸಚಿವ ರಾಜನಾಥ್ ಸಿಂಗ್ ಅವರೂ ಅದ್ಯಾರೋ ಜರ್ಮನಿಯ ವಿಜ್ಞಾನಿ ಭಾರತದ ವೇದಗಳನ್ನು ಆಧರಿಸಿಯೇ ಪರಿಮಾಣ ಭೌತವಿಜ್ಞಾನದ ತತ್ವವನ್ನು ಮಂಡಿಸಿದ್ದಾನೆ ಎಂಬ ಮಾಹಿತಿಯನ್ನೂ ಬಹಿರಂಗಪಡಿಸಿದರು. ಇದೆಲ್ಲಕ್ಕೆ ಸರಿಯಾಗಿ ಕಳೆದ ವಾರ ಮೈಸೂರಿನಲ್ಲಿ ಜರುಗಿದ ಈ ವರ್ಷದ ಭಾರತೀಯ ವಿಜ್ಞಾನ ಸಮಾವೇಶದಲ್ಲಿ ಕೇಸರಿ ಬಳಗದ ಇಬ್ಬರು "ಶಂಖವನ್ನು ಊದುವುದರಿಂದ ಆರೋಗ್ಯ ಸರಿಹೋಗುತ್ತದೆ" ಎಂದೂ, "ಹುಲಿ ಚರ್ಮದ ಮೇಲೆ ಕೂತರೆ ಲೈಂಗಿಕ ಆಶಯಗಳನ್ನು ನಿಯಂತ್ರಿಸಬಹುದು" ಎಂದೂ ವಿನೂತನವಾದ ಸಂಶೋಧನೆಗಳನ್ನು ಮಂಡಿಸಿದ್ದಾರೆ.

ಸಾರಾಂಶದಲ್ಲಿ ಹೇಳುವುದಾದರೆ, ಮೋದಿ ಮತ್ತು ಆತನ ಸಂಘದ ಸದಸ್ಯರು ಪುರಾಣ, ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ ಇತ್ಯಾದಿಗಳಲ್ಲಿ ಇರುವ ಎಲ್ಲಾ ಜ್ಞಾನವನ್ನು ಹೀರಿ ಕುಡಿದಿರುವುದರಿಂದ ಸದ್ಯದಲ್ಲೇ 'ಅಚ್ಛೇ ದಿನ್'ಗಳು ಬರಲಿವೆ. ಬರೀ ಬುಲೆಟ್ ರೈಲುಗಳು ಯಾಕೆ, ಮಂಗಳ ಗ್ರಹ ಮಾತ್ರವಲ್ಲ, ಗುರು ಗ್ರಹಕ್ಕೂ ಹಾರಿಹೋಗಿ ಬರುವಂತಹ ಬಾನಗಾಡಿಗಳು ತಯಾರಾಗಲಿವೆ. ಅವುಗಳಿಗೆ ಗೋವುಗಳ ಗಂಜಲವನ್ನೇ ಇಂಧನವಾಗಿ ಉಪಯೋಗಿಸಲಾಗುತ್ತದೆ. ಬೀಜಗಳಿಗೆ ಪರಮಾತ್ಮನೇ ಶಕ್ತಿಯನ್ನು ತುಂಬಲಿರುವುದರಿಂದ ಮತ್ತು ಗಡ್ಕರಿ ಸಾಹೇಬರ ಮೂತ್ರವು ಉತ್ತಮ ಗೊಬ್ಬರವಾಗುವುದರಿಂದ ರೈತರ ಹೊಲಗಳಲ್ಲಿ ಬೆಳೆಗಳು ಕಂಗೊಳಿಸಲಿವೆ. ಅವರು ಇನ್ನು ಮುಂದೆ ಆತ್ಮಹತ್ಯೆಗೆ ಶರಣಾಗುವ ಪ್ರಮೇಯವೇ ಉದ್ಭವಿಸುವುದಿಲ್ಲ. ಭಾರತೀಯರೆಲ್ಲರೂ ಪ್ರತಿದಿನ ಶಂಖ ಊದಿ ಉತ್ತಮ ಆರೋಗ್ಯವನ್ನು ಸಂಪಾದಿಸುವುದರಿಂದ ಆರೋಗ್ಯ ಇಲಾಖೆಯೇ ಅಪ್ರಸ್ತುತವಾಗುತ್ತದೆ. ಹುಲಿಗಳ ಸಂಖ್ಯೆಯನ್ನು ಹೆಚ್ಚಿಸಿ ಮುಂದೊಮ್ಮೆ ಅತ್ಯಾಚಾರ ಎಸಗುವ ಸಂಭಾವಿತರಿಗೆ ಅದರ ಚರ್ಮವನ್ನು ಹಂಚಲಾಗುತ್ತದೆ; ಆ ಮೂಲಕ ಎರಡು ಗುರಿಗಳನ್ನು ಸಾಧಿಸಿದಂತಾಗುತ್ತದೆ. ಮೊದಲನೆಯದಾಗಿ ದೇಶದಲ್ಲಿ ಅತ್ಯಾಚಾರವೇ ನಿಂತುಹೋಗುತ್ತದೆ. ಎರಡನೆಯದಾಗಿ ಅಂತಹ ದಾಳಿಗಳಿಂದ ಮಹಿಳೆಯರಿಗೆ ಮತ್ತು ಹೆಣ್ಣು ಮಕ್ಕಳಿಗೆ ರಕ್ಷಣೆ ನೀಡಿದಂತಾಗುತ್ತದೆ. ಪರಿಮಾಣ ಭೌತವಿಜ್ಞಾನದ ತತ್ವವನ್ನು ಆಧರಿಸಿ ನಿಯಮಗಳನ್ನು ಜಾರಿಗೆ ತರುವುದರಿಂದ ದೇಶಾದ್ಯಂತ ಕಾನೂನು ಮತ್ತು ಸುವ್ಯವಸ್ಥೆ ನೆಲೆಸುತ್ತದೆ.

ಇಷ್ಟೆಲ್ಲಾ ಸಂಘಪರಿವಾರದ ವಿಜ್ಞಾನಿಗಳು ಸಾಧಿಸಲಿದ್ದಾರಾದ್ದರಿಂದ ಮೋದಿ ಮತ್ತು ಅವರ ಸರ್ಕಾರಕ್ಕೆ ಸಿ.ಎನ್.ಆರ್.ರಾವ್ ತರಹದ ವಿಜ್ಞಾನಿಗಳಿಂದ ಉತ್ತಮ ಸಲಹೆಗಳ ಅಗತ್ಯತೆಯಾದರೂ ಎಲ್ಲಿದೆ? ಈ ಸರಳ ಸತ್ಯವನ್ನು ರಾವ್ ಸಾಹೇಬರು ಅರ್ಥಮಾಡಿಕೊಂಡು ತೆಪ್ಪಗಿದ್ದರೆ ಅವರಿಗೆ ಮಾತ್ರವಲ್ಲ, ದೇಶಕ್ಕೂ ಒಳಿತು! ■

ದೇಶಪಾಂಡೆ-ಸುನಿಲ್ ಹೆಗಡೆಗೆ ಢವಢವ

ಹಳಿಯಾಳದಲ್ಲಿ ಆಗಂತುಕ ರಮೇಶ್ ರಂಗತಾಲೀಮು!!


ದೇಶಪಾಂಡೆ


ಉತ್ತರ ಕನ್ನಡದ ಹಳಿಯಾಳ ರಾಜ್ಯದ ಹೈವೋಲ್ಟೇಜ್ ವಿಧಾನಸಭಾ ಕ್ಷೇತ್ರಗಳಲ್ಲೇ ರೆಡ್ ಹಾಟ್! ಇದಕ್ಕೆ ಕಾರಣ, ಹಳಿಯಾಳದ ಹುಲಿ, ಸಿಎಂ ಮಟೀರಿಯಲ್ ಎಂದೆಲ್ಲ ಗುರುತಿಸಿಕೊಂಡಿರುವ ಬಲಾಢ್ಯ ರಾಜಕಾರಣೋದ್ಯಮಿ ಆರ್.ವಿ. ದೇಶಪಾಂಡೆ!! ಬರ-ಬಡತನದ ಹಳಿಯಾಳದಲ್ಲಿ ಕೊಪ್ಪರಿಗೆಗಟ್ಟಲೆ ಕಪ್ಪು ಕಾಸು ಹರಿಸಿ ಸತತವಾಗಿ ಗೆಲ್ಲುತ್ತಿರುವ ದೇಶಪಾಂಡೆ ಮೂರು ದಶಕದಿಂದ ಕಟ್ಟಿರುವ ಸಾಮ್ರಾಜ್ಯದಲ್ಲಿ ತಲ್ಲಣದ ಕಂಪನಗಳು ಏಳತೊಡಗಿದೆ...

ಹಳಿಯಾಳದ ಜನರಿಗೆಂದೂ ಈ ದೇಶಪಾಂಡೆ ನಂಬಿಗಸ್ಥ ನಾಯಕನಾಗಿರಲೇ ಇಲ್ಲ; ಅನಿವಾರ್ಯ ಅನಿಷ್ಟವಷ್ಟೇ. ಸಮಾಜಮುಖಿ ಚಿಂತನೆಗಳ ಗಂಧಗಾಳಿಯೇ ಇಲ್ಲದ ಪಾಳೇಗಾರಿ ಪರಾಕ್ರಮದ ದೇಶಪಾಂಡೆ ಶಾಸಕ-ಮಂತ್ರಿ ರೂಪದಲ್ಲಿ ಶನಿಯಂತೆ ಗಂಟು ಬೀಳುತ್ತಿರುವುದು ಹಳಿಯಾಳದ ದುರಂತವೇ ಸರಿ! ಹಳಿಯಾಳ ಎಂದರೆ ಶಾಸಕ-ಮಂತ್ರಿ-ಮುಖ್ಯಮಂತ್ರಿಯಾಗಲು ಬೇಕಾದ ಒಂದು ನಿರ್ಜೀವ ಭೌಗೋಳಿಕ ಪ್ರದೇಶವೆಂದಷ್ಟೇ ಪರಿಗಣಿಸಿರುವ ಈ ಡಾನ್ ಜನಸಾಮಾನ್ಯರೊಂದಿಗೆ ಬೆರೆತು ಪ್ರೀತಿ-ವಿಶ್ವಾಸ ತೋರಿಸಿದ್ದೇ ಇಲ್ಲ, ಕ್ಷೇತ್ರದ ಸಮಸ್ಯೆ-ಸಂಕಷ್ಟಕ್ಕೆ ಸ್ಪಂದಿಸಿದ್ದೇ ಇಲ್ಲ. ದರ್ಪ-ದುರಹಂಕಾರ-ದೌಲತ್ತು-ಸ್ವಜನಪಕ್ಷಪಾತದಂಥ ಸಕಲ ಸದ್ಗುಣ ಬೆಳೆಸಿಕೊಂಡಿರುವ ಈತ ಸಾಮ-ಭೇದ-ದಂಡ ಪ್ರಯೋಗಿಸಿ ಎಲ್ಲ ಪಕ್ಷದ ಎದುರಾಳಿಗಳನ್ನು ಹೊಸಕಿ ಹಾಕುತ್ತಲೇ ಬಂದಿದ್ದಾರೆ. ಅಷ್ಟೂ ಪಾರ್ಟಿಯ ದೊಡ್ಡವರ ಅನೈತಿಕ ಸಖ್ಯದ ದೇಶಪಾಂಡೆ ಸ್ವಕ್ಷೇತ್ರ-ಸ್ವಜಿಲ್ಲೆಯಲ್ಲಿ ಪ್ರತಿಸ್ಪರ್ಧಿಗಳು ಬೆಳೆಯದಂತೆ ಕುತಂತ್ರ ಚಾಲೂ ಇಟ್ಟಿದ್ದಾರೆ.

ಹಾಗಂತ ದೇಶಪಾಂಡೆ ಹಳಿಯಾಳದಲ್ಲಿ ನಿರಾತಂಕವಾಗೇನೂ ಇಲ್ಲ, ಜನರಿಗಂತೂ ಈತ ಬೇಡದ ಪೀಡೆ. ಮೊದಲೆರಡು ಬಾರಿ ಹೆಗಡೆಜೀ ಗಾಳಿಯಲ್ಲಿ ನಿರಾಯಾಸವಾಗಿ ಅಸೆಂಬ್ಲಿಗೆ ತೂರಿಹೋಗಿದ್ದ ಈ ಸಂಡೆ ಪ್ಲೀಡರ್ ಮೂರನೇ ಬಾರಿ ಮರಾಠರ ಎಸ್.ಕೆ. ಗೌಡ ಎಂಬ ಅಂದಿನ ಕಾಂಗ್ರೆಸ್ ಕ್ಯಾಂಡಿಡೇಟ್ ಎದುರು ಅಕ್ಷರಶಃ ತಿಣುಕಾಗಿ ಬಿಟ್ಟಿದ್ದರು. ಬರೀ ಎರಡು ನೂರು ಚಿಲ್ಲರೆ ಮತದಂತರದಿಂದ ದಡ ಸೇರಿದ್ದ ದೇಶಪಾಂಡೆಗೆ ಆ ಹೊತ್ತಲ್ಲಿ ಎಲೆಕ್ಷನ್ ಅಧಿಕಾರಿಯಾಗಿದ್ದ ವಿ.ಎಸ್. ನಾಯಕ್ ಎಂಬ ನಾಲಾಯಕ್ ಬಚಾವ್ ಮಾಡಿದ್ದನೆಂದು ಇವತ್ತಿಗೂ ಜಿಲ್ಲೆಯ ಜನರು ನೆನೆನೆನೆದು ನಗುತ್ತಾರೆ. ಆನಂತರ ದೇಶಪಾಂಡೆ ಕರಾರುವಾಕ್ಕಾಗಿ ಷಡ್ಯಂತ್ರ ಹೆಣೆಯುವ ಕಲೆ ಕಲಿತರು. ಗುರು ಹೆಗಡೆಜೀಗೆ ತಿರುಮಂತ್ರ ಹಾಕಿ ಕಾಂಗ್ರೆಸ್‌ಗೆ ನುಸುಳಿದ ದೇಶಪಾಂಡೆ ದಳದ ಪರ್ವದಲ್ಲಿ ಕೈಗಾರಿಕಾಮಂತ್ರಿಯಾಗಿ ಕೂಡಿಹಾಕಿದ್ದ ಕಾಸು ದಿಲ್ಲಿ ದಣಿಗಳಿಗೆ ಕಪ್ಪದಂತೆ ಆಗಾಗ ಒಪ್ಪಿಸಿ ಆಯಕಟ್ಟ ಕಾಂಗ್ರೆಸ್ ಕರಾಮತ್ತುಗಾರನಾಗಿ ರೂಪಾಂತರಗೊಂಡುಬಿಟ್ಟರು.

ದೇಶಪಾಂಡೆ ದಿಲ್ಲಿ-ಬೆಂಗಳೂರಲ್ಲಿ ಭರ್ಜರಿ ತೂಕ ಬೆಳೆಸಿಕೊಂಡರೂ ಹಳಿಯಾಳ ಮಂದಿಗೆ ಮಾತ್ರ ಯಾಕೋ ಆತನ ಬಗ್ಗೆ ಭರವಸೆ-ನಂಬಿಕೆ ಬರಲೇ ಇಲ್ಲ! ಸ್ವ-ಜಾತಿ (ಕೊಂಕಣಿ)ಯ ಪುಂಡ ಪುಢಾರಿ ವಿ.ಡಿ. ಹೆಗಡೆಯನ್ನು ಎಮ್ಮೆಲ್ಸಿಯಾಗಿ ಮಾಡಿದ್ದ ದೇಶಪಾಂಡೆಗೆ ಈ ಮಿತ್ರನ ಮಗನೇ ಮುಂದೊಂದು ದಿನ ಕಡು ಶತ್ರುವಾಗುತ್ತಾನೆಂದು ಸಣ್ಣ ಸ್ವಪ್ನ ಸೂಚನೆಯೂ ಆಗಲಿಲ್ಲ ಪಾಪ. ವಿ.ಡಿ. ಹೆಗಡೆ ಮತ್ತಾತನ ಮಗ ಸುನಿಲ್ ಹೆಗಡೆ ಹಳಿಯಾಳದಲ್ಲಿ ದೇಶಪಾಂಡೆ ಪಡೆ ಮಾಡಿದ ಅಷ್ಟೂ ಪಾತಕದ ಪ್ರಮುಖ ಫಲಾನುಭವಿಗಳು! ದೇಶಪಾಂಡೆ-ವಿ.ಡಿ. ಹೆಗಡೆ-ಎಸ್.ಎಲ್.ಘೋಟನೇಕರ್ ಮತ್ತು ಸುನಿಲ್ ಹೆಗಡೆ ಗ್ಯಾಂಗ್ ಹಳಿಯಾಳದಲ್ಲಿ ಆಚರಿಸಿದ ಸುಗ್ಗಿ ಹಬ್ಬ, ಹೋಳಿಹಬ್ಬ ನೆನಪಾದರೆ ಇವತ್ತಿಗೂ ಅಲ್ಲಿಯ ಜನರು ಬೆಚ್ಚಿಬೀಳುತ್ತಾರೆ. ಮತ್ತೆ ಎಮ್ಮೆಲ್ಸಿ ಮಾಡಲಿಲ್ಲ ಎಂಬ ಸಿಟ್ಟಿಂದ ದೇಶಪಾಂಡೆಗೆ ತಿರುಗಿ ಬಿದ್ದಿದ್ದ ವಿ.ಡಿ. ಹೆಗಡೆ ಮಗ ಸುನಿಲ್‌ನನ್ನೇ ಅಶ್ವಮೇಧದ ಕುದುರೆಯಾಗಿ ಅಖಾಡಕ್ಕೆ ಇಳಿಸಿಬಿಟ್ಟರು. 2008ರಲ್ಲಿ ದೇಶಪಾಂಡೆ ಎದುರು ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಸುನಿಲ್ ಸೈತಾನನ ಸೋಲಿಸಿದ ಸರದಾರನಾಗಿ ಅಚ್ಚರಿಮೂಡಿಸಿದ್ದರು.

2013ರ ಚುನಾವಣೆ ಹೊತ್ತಿಗೆ ದೇಶಪಾಂಡೆ ತುಂಬ ಎಚ್ಚರಿಕೆಯ ಹೆಜ್ಜೆಗಳನ್ನು ಇಟ್ಟರು. ತಾನು ಬದಲಾಗಿದ್ದೇನೆ; ಬಡವರ ಪರವಾಗಿದ್ದೇನೆಂದು ಅಮಾಯಕರಿಗೆ ಮಂಕುಬೂದಿ ಎರಚಿದರು. ಸಂತೆಸಂತೆಗೆ ಹೋಗಿ ಜನರ ಹೆಗಲ ಮೇಲೆ ಕೈಹಾಕಿ ಕುಶಲ ವಿಚಾರಿಸುತ್ತ ತರಕಾರಿ ಖರೀದಿಸಿದರು. ಗೂಡಂಗಡಿಗೆ ಹೋಗಿ ಮಿರ್ಚಿ-ಚಾಯ್ ಸವಿದರು. ಎಲೆಕ್ಷನ್‌ನಲ್ಲಂತೂ ಕೋಟಿ-ಕೋಟಿ ಹರಿಸಿದರು. ಒಂದೇ ಟರ್ಮಿನ ಶಾಸಕಗಿರಿಗೆ ಸುಸ್ತಾದಂತೆ ಸುನಿಲ್ ಸೋತು ಶರಣಾದರು. ದೇಶಪಾಂಡೆ ಮಂತ್ರಿಗಿರಿ ಭರಾಟೆಗೆ ದಿಕ್ಕೆಟ್ಟುಹೋದ ಸುನಿಲ್ ತಪ್ಪು-ತಪ್ಪು ಲೆಕ್ಕಾಚಾರ ಹಾಕತೊಡಗಿದರು. ದೇಶಪಾಂಡೆ ಹೊಡೆತಕ್ಕೆ ಹೈರಾಣಾದ ಸುನಿಲ್ ಆತ್ತ ದಳದ ದೊರೆಗಳಾದ ಕುಮ್ಮಿ-ದೇವ್ರೂ ಜತೆ ಜಗಳಾಡಿಕೊಂಡರು. ಹಳಿಯಾಳದಲ್ಲಿ ನೆಲೆ-ಬೆಲೆಯೇ ಇಲ್ಲದ ಬಿಜೆಪಿ ಸೇರಿ ರಾಜಕೀಯ ಆತ್ಮಹತ್ಯೆ ಮಾಡಿಕೊಂಡರು.


ಎಸ್.ಎಲ್.ಘೋಟನೇಕರ್

ಚೆಡ್ಡಿ ಪಕ್ಷದ ಗರ್ಭಗುಡಿ ಸಂಸ್ಕೃತಿ ಸುನಿಲ್‌ಗೆ ಹೊಂದಾಣಿಕೆ ಆಗಲೇ ಇಲ್ಲ, ಬಿಜೆಪಿಯಲ್ಲಿ ಇದ್ದೂಇಲ್ಲದಂತಾದ ಸುನಿಲ್‌ಗೆ ಹಳಿಯಾಳದಲ್ಲಿ ನಿರ್ಣಾಯಕ ಸ್ಥಾನದಲ್ಲಿರುವ ಅಲ್ಪಸಂಖ್ಯಾತರ ಮತ ಸಿಗಲಾರದೆಂಬುದು ಖಾತ್ರಿಯಾಗುತ್ತಲೇ ದೇಶಪಾಂಡೆ ಕ್ಷೇತ್ರದಲ್ಲಿ ಎದುರಾಳಿಯೇ ಇಲ್ಲದ ಗರ್ವದಲ್ಲಿ ಹಾರಾಡತೊಡಗಿದರು. ಬಿಜೆಪಿ ಸೇರಿ ಅಂತರ್‌ಪಿಶಾಚಿಯಂತೆ ಆಗಿರುವ ಸುನಿಲ್ ಹೆಗಡೆ ಹೆದರಿಕೆ ದೇಶಪಾಂಡೆಗೆ ಈಗಂತೂ ಒಂಚೂರೂ ಇಲ್ಲ! ಆದರೆ ಹೊಸ ಪ್ರತಿಸ್ಪರ್ಧಿಯೊಬ್ಬ ಶರವೇಗದಲ್ಲಿ ತಯಾರಾಗುತ್ತಿರುವ ಅಬ್ಬರಕ್ಕೆ ದೇಶಪಾಂಡೆ ತಬ್ಬಿಬ್ಬಾಗಿ ಹೋಗಿದ್ದಾರೆ. ದೂರದ ಬೆಂಗಳೂರು ಗ್ರಾಮಾಂತರ ಪ್ರದೇಶದ ಕೊಡ್ತಿ ಎಂಬ ಹಳ್ಳಿಯ ಕೆ.ಆರ್. ರಮೇಶ್ ಎಂಬ ನಿಗೂಢ ಹಣವಂತ ಹಳಿಯಾಳದಲ್ಲಿ ಕಳೆದ ಮೂರ್ನಾಲ್ಕು ವರ್ಷದಿಂದ 'ಆಟ' ಆಡುತ್ತಿರುವುದು ದೇಶಪಾಂಡೆ ಸಾಹೇಬರ ನಿದ್ದೆಗೆಡಿಸಿಬಿಟ್ಟಿದೆ.



ರಮೇಶ್

ರಮೇಶ್‌ನ ಕುರುಡು ಕಾಂಚಾಣದ ಕುಣಿತದ ಆಕರ್ಷಣೆಗೋ, ದೇಶಪಾಂಡೆ ಮೇಲಿನ ಬೇಜಾರಿಂದಲೋ ಒಟ್ಟಿನಲ್ಲಿ ಹಳಿಯಾಳ, ಜೋಯಿಡಾ-ದಾಂಡೇಲಿ ಭಾಗದ ಮಂದಿ ಮಾತ್ರ ಈ ಆಗಂತುಕ ರಮೇಶ್‌ನ ಹಿಂದೆ ತಂಡೋಪತಂಡವಾಗಿ ಹೋಗುತ್ತಿದ್ದಾರೆ. ಮುಂಬರುವ ಆಸೆಂಬ್ಲಿ ಎಲೆಕ್ಷನ್‌ನಲ್ಲಿ ಜೆಡಿಎಸ್ ಕ್ಯಾಂಡಿಡೇಟಾಗುವ ಸಕಲ ಸ್ಕೆಚ್ ಹಾಕಿಕೊಳ್ಳುತ್ತಿರುವ ರಮೇಶ್‌ನ ರಾಜಕೀಯ ರಂಗತಾಲೀಮಿನ ಸದ್ದು ದೇಶಪಾಂಡೆ ಒಬ್ಬರನ್ನೇ ಅಲ್ಲ, ಮಾಜಿ ಶಾಸಕ ಸುನಿಲ್ ಹೆಗಡೆಯನ್ನು ಚಿಂತೆಗೀಡುಮಾಡಿಬಿಟ್ಟಿದೆ. ಕ್ಷೇತ್ರ ಹದ ಮಾಡಿಕೊಳ್ಳಲೆಂದು ಈ ರಮೇಶ್ ಹಳಿಯಾಳ-ಜೋಯಿಡಾ-ದಾಂಡೇಲಿ ಏರಿಯಾದಲ್ಲಿ ಚೆಲ್ಲಾಡಿದ ಹಣವೇ ಹತ್ತಿರತ್ತಿರ ಒಂದು ಕೋಟಿಯಷ್ಟಾಗಿದೆ! ಸಮಷ್ಟಿಯ ಒಳಿತಿಗಲ್ಲದಿದ್ದರೂ ವೈಯಕ್ತಿಕ ಮದುವೆ, ಮುಂಜಿ, ಸೋಬನ, ರಸಮಂಜರಿ, ದೇವಸ್ಥಾನ, ಸೀರೆ-ಪಂಚೆಗಾಗಿ ಈತ ಮೊಗೆಮೊಗೆದು ಕಾಸು ಕೊಟ್ಟಿದ್ದಾನೆ. ದುಡ್ಡೆಲ್ಲಿಯದಪ್ಪಾ? ನಿನ್ನ ಉದ್ಯೋಗ ಏನಪ್ಪಾ ಎಂದರೆ, ಊರಲ್ಲಿ (ಕೋಡ್ತಿಯಲ್ಲಿ) ಇರುವ ಜಮೀನು ಮಾರಿ ಇಲ್ಲಿಯ ಉದ್ಧಾರ ಮಾಡ್ತಿದ್ದೇನೆ ಅಂತಾನೆ; 'ನಿಂಗೇನು ಹುಚ್ಚಾ? ನಿನ್ನ ಊರಲ್ಲೇ ಸಮಾಜಸೇವೆ ಮಾಡಬಹುದಲ್ಲ' ಎಂದರೆ, 'ನಾನು ಹಳಿಯಾಳದ ಅಳಿಯ; ನನ್ನ ಹೆಂಡತಿ ಇಲ್ಲಿಯ ಬಹುಸಂಖ್ಯಾತ ಮರಾಠರ ಹುಡುಗಿ' ಅಂತಾನೆ.

ಜನರೊಂದಿಗೆ ಯಾವುದೇ ಬಿಗುಮಾನ-ಬಿಂಕ ಇಲ್ಲದೆ ಬೆರೆಯುವ ರಮೇಶನ ನಡೆ-ನುಡಿ ಮಾತ್ರ ನಿಗೂಢ. ಬೆಂಗಳೂರಲ್ಲಿ ದೊಡ್ಡ ಜಮೀನ್ದಾರನಂತೆ ಈತ; ಅಲ್ಲಿಯ ಒಂದೊಂದೇ ಹೊಲ ಮಾರಿ ಹಳಿಯಾಳದಲ್ಲಿ ರಾಜಕಾರಣಾರ್ಥ ಸಮಾಜಸೇವೆ ಮಾಡುತ್ತಾನಂತೆ. ಸರಿಸುಮಾರು 500 ಕಿ.ಮೀ. ದೂರದ ಹಳಿಯಾಳಕ್ಕೆ ಬೆಂಗಳೂರಿಂದ ಬಂದು ಠಿಕಾಣಿ ಹೂಡಿರುವ ರಮೇಶ್‌ಗೆ ಊರು ಪರಿಚಯಿಸಿದವನು ನಾರಾಯಣ ರಡ್ಡಿ ಎಂಬ ಕುಸ್ತಿ ಪೈಲ್ವಾನ್. ಹಳಿಯಾಳದ ಅರ್ಲವಾಡ ಗ್ರಾಮದ ನಾರಾಯಣ ರಡ್ಡಿ ಮತ್ತು ರಮೇಶ ಅದ್ಯಾವುದೋ ಟ್ರೈನಿಂಗ್‌ನಲ್ಲಿ ಪರಿಚಯವಾಗಿದ್ದರಂತೆ. ಗೆಳೆತನ ಬೆಳೆದು ನಾರಾಯಣ ಹಳಿಯಾಳದ ತನ್ನ ಮನೆಗೆ ರಮೇಶನನ್ನು ಹತ್ತು ವರ್ಷದ ಹಿಂದೆ ಕರೆತಂದಿದ್ದನಂತೆ. ಶ್ರೀಮಂತ ಜಮೀನ್ದಾರನೂ, ರಿಯಲ್ ಎಸ್ಟೇಟ್ ಉದ್ಯಮಿಯೂ ಆದ ರಮೇಶ್‌ನಿಗೆ ಹಳಿಯಾಳದ ಜನರ ಅಮಾಯಕತೆ-ಅಸಹಾಯಕತೆ, ಬಡತನ 'ಸಮಾಜ ಸೇವೆ'ಗೆ ಪ್ರೇರೇಪಿಸಿತಂತೆ. ಕೈಯೊಡ್ಡಿದವರಿಗೆ ಬೊಗಸೆ ತುಂಬ ಹಣ ಈತ ಕೊಡತೊಡಗಿದನಂತೆ.

ರಮೇಶನ ದಾನ-ಧರ್ಮ ಕಂಡು ಜನ ಸಹಜವಾಗೇ ಹಿಂದೆ ಬಿದ್ದಿದ್ದಾರೆ. ಕೋಡ್ತಿ ಗ್ರಾಮ ಪಂಚಾಯಿತಿ ಅಧ್ಯಕ್ಷನಾಗಿ ಅಲ್ಲಿ ಮಾಡಿದ ರಾಜಕೀಯ ರಮೇಶ್ ಹಳಿಯಾಳದಲ್ಲಿ ಪ್ರಯೋಗಿಸಲು ಆರಂಭಿಸಿದ್ದಾನೆ. ಹಳಿಯಾಳದ ಮುದಲಿಗೇರಾ ಎಂಬ ಹಳ್ಳಿಯ ವಿಚ್ಛೇದಿತ ಹೆಂಗಸೊಬ್ಬಳ ಮದುವೆಯೂ ಈತ ಮಾಡಿಕೊಂಡು ತಾನೊಬ್ಬ ಜನಪರ-ಸುಧಾರಣಾವಾದಿ ಎಂದು ತೋರಿಸಿಕೊಂಡಿದ್ದಾನೆ. ಇದು ಜನರನ್ನು ಇನ್ನಷ್ಟು ಸೆಳೆದಿದೆ. ಮುದಲಿಗೇರಾದಲ್ಲೇ ಮನೆಯೊಂದನ್ನು ಕಟ್ಟಿದ್ದಾನೆ. ತಿಂಗಳಲ್ಲಿ ಹಲವು ದಿನ ಇಲ್ಲೇ ಇದ್ದು ಶಾಸಕನಾಗುವ ಕನಸು ಕಾಣುತ್ತಿದ್ದಾನೆ. ಪ್ರತಿ ವರ್ಷ ಆಗಸ್ಟ್ ತಿಂಗಳಲ್ಲಿ ಬರುವ ತನ್ನ ಹುಟ್ಟುಹಬ್ಬ ಇಲ್ಲೇ ಆಚರಿಸುತ್ತಾನೆ. ಅಂದು ಹಳಿಯಾಳದ ಹಳ್ಳಿಗಳ ಬಡ ಹೆಂಗಸರಿಗೆ ಸಾವಿರಾರು ಸೀರೆ ಹಂಚುತ್ತಾನೆ; ವಿಕಲಚೇತನರಿಗೆ ನೆರವು ನೀಡುತ್ತಾನೆ; ಶಾಲಾಮಕ್ಕಳಿಗೆ ನೋಟ್‌ಬುಕ್ ಹಂಚುತ್ತಾನೆ; ಸ್ವ-ಸಹಾಯ ಸಂಘದ ಸ್ತ್ರೀಯರಿಗೆ ಉಪಕಾರ ಮಾಡುತ್ತಾನೆ. ಇದೆಲ್ಲ ಹಳವಂಡ ಎಮ್ಮೆಲ್ಲೆ ಆಗಲಿಕ್ಕೆಂದೇ ಎಂಬುದು ಹಳಿಯಾಳದ ಜನರಿಗೆ ಪಕ್ಕಾ ಆಗಿಹೋಗಿದೆ.

ರಮೇಶ್ ಹಳಿಯಾಳ, ಜೋಯಿಡಾ, ದಾಂಡೇಲಿಗೆ ಬಂದನೆಂದರೆ ಸಾಕು, ಮಂತ್ರಿ ದೇಶಪಾಂಡೆ ಬೆನ್ನಿಗೆ ಇರದ ಒಡ್ಡೋಲಗ ಬಂದಿರುತ್ತದೆ. ಕನಿಷ್ಠ ಒಂದು ಸಾವಿರ ಜನ ಪ್ರತಿದಿನ ರಮೇಶ್ ಭೇಟಿಯಾಗ್ತಾರೆ. ಅವರವರ ಸಮಸ್ಯೆ-ಬೇಡಿಕೆಗೆ ತಕ್ಕಂತೆ ಆತ ದುಡ್ಡು ದಾನ ಮಾಡ್ತಾನೆ. ಜನ ಪುಳಕಿತರಾಗಿ 'ದೇಶಪಾಂಡೆಗಿಂತ ಈ ರಮೇಶಣ್ಣನೇ ಚಲೋ ಮನ್ಶಾ ಆದಾನು' ಅನ್ನುತ್ತ ಹೋಗುತ್ತಾರೆ. ಜನರೊಂದಿಗೆ ಮುಕ್ತವಾಗಿ ಬೆರೆಯುವ ರಮೇಶ್‌ನ


ಸುನೀಲ್ ಹೆಗ...

ಪುಂಗಿ ಮಂತ್ರಿ ದೇಶಪಾಂಡೆ-ಮಾಜಿ ಶಾಸಕ ಸುನಿಲ್ ಬುಡುಬುಡುಕೆಗಿಂತಲೂ ಬೆಟರ್ ಆಗಿ ಕೇಳಿಸುತ್ತಿದೆ. 'ಕರುನಾಡು ಸುವರ್ಣ' ಎಂಬ ಸಂಘಟನೆ ಕಟ್ಟಿಕೊಂಡು ಜನರ ನಡುವೆ ಓಡಾಡಿಕೊಂಡಿದ್ದ ರಮೇಶ್ . ಯಾವುದಾದರೂ ಪಕ್ಷ ಸೇರಿ ದೇಶಪಾಂಡೆ -ಸುನಿಲ್‌ಗೆ ಸೆಡ್ಡು ಹೊಡೆಯಲು ಗುರಿ ಇಟ್ಟುಕೊಂಡಿದ್ದ ಈಡೇರಿಕೆಗೆ ಈಗ ಮುಹೂರ್ತ ಕೂಡಿಬಂದಿದೆ.

ಇದೇ 17ರಂದು ಜೆಡಿಎಸ್, ಪಿತಾಮಹ ದೇವೇಗೌಡ, ಯುವರಾಜ ಕುಮಾರಸ್ವಾಮಿ ಮತ್ತಿತರ ಛೋಟಾ-ಮೋಟಾ ನಾಯಕರನ್ನು ಹಳಿಯಾಳಕ್ಕೆ ಕರೆಸಿ ಅವರ ಸನ್ನಿಧಿಯಲ್ಲಿ ಜೆಡಿಎಸ್ ಸೇರಲು ರಮೇಶ್ ಕಾರ್ಯಕ್ರಮ ಹಾಕಿಕೊಂಡಿದ್ದಾನೆ. ಸುನಿಲ್ ಹೆಗಡೆ ಜೆಡಿಎಸ್ ತೊರೆದನಂತರ ಹಳಿಯಾಳದಲ್ಲಿ ಆ ಪಕ್ಷಕ್ಕೆ ರಮೇಶ್‌ನಂಥ ಪೈಸಾವಾಲಾನ ಅಗತ್ಯವಿತ್ತು. ಸುನಿಲ್ ಜೆಡಿಎಸ್ ಬಿಟ್ಟರೂ ಆ ಪಕ್ಷ ಇಲ್ಲಿ ಪೂರ್ತಿ ಖಾಲಿಯೇನೂ ಆಗಿಲ್ಲ, ಕಾಂಗ್ರೆಸ್-ಬಿಜೆಪಿಗೆ ಒಗ್ಗದ ಹಲವು ಜಾತ್ಯತೀತರು ಇನ್ನೂ ದಳದಲ್ಲಿದ್ದಾರೆ. ದೇಶಪಾಂಡೆಯ ದಾದಾಗಿರಿ, ಆತನ ಸೇನಾಧಿಪತಿ ಘೋಟನೇಕರ್‌ನ ಗೂಂಡಾಗಿರಿಗೆ ರೋಸಿಹೋಗಿರುವ ಎಂ.ಎಸ್.ಕುರಬಗಟ್ಟಿ, ಕೈತಾನ್ ಬಾರ್ಬೋಜಾ, ದೇಮಾಣಿ ಶಿರೋಜಿಯಂಥವರು ಈಗಾಗಲೇ ಜೆಡಿಎಸ್ ಪಾಲಾಗಿದ್ದಾರೆ. ಹಾಗೆಯೇ ಬಿಜೆಪಿಯ ಮಡಿ-ಮೈಲಿಗೆ, ಡೋಂಗಿ ದೇವರು-ಧರ್ಮ ಒಗ್ಗದವರೂ ಜೆಡಿಎಸ್ ಸೇರುತ್ತಿದ್ದಾರೆ. ಮಾಜಿ ಶಾಸಕ ಸುನಿಲ್ ಜತೆ ಬಿಜೆಪಿ ಸೇರಿ ಕೆಟ್ಟೆವೆಂದು ಬಾಯ್ಬಾಯಿ ಬಡಿದುಕೊಳ್ಳುತ್ತ ಒಂದಿಷ್ಟು ಮಾಜಿ ದಳವಾಯಿಗಳು ಮರಳಿ ತವರಿಗೆ ಬರುತ್ತಿದ್ದಾರೆ. ಇವರಿಗೆಲ್ಲ ರಮೇಶನ ಕಾಂಚಾಣ ಸದ್ದೂ ಸೆಳೆಯುತ್ತಿದೆ.

ಇವತ್ತಿಗೂ ತನ್ನ ಜಾತಿ ಗುಟ್ಟು ಬಿಟ್ಟುಕೊಡದೆ ರಮೇಶ್ ಹಳಿಯಾಳದ ಬಹುಸಂಖ್ಯಾತ ಮರಾಠರ ಕುಲಕನ್ಯೆ ತನ್ನ ಹೆಂಡತಿ ಎನ್ನುತ್ತಲೇ ರಾಜಕಾರಣ ಮಾಡುತ್ತಿದ್ದಾನೆ. ಮಾಜಿ ಮಂತ್ರಿ ಆಲ್ಕೋಡು ಹನ್ಮಂತಪ್ಪರ ಸಖ್ಯದ ಮೂಲಕವೇ ಜೆಡಿಎಸ್ ಮಾಂಡಲೀಕರ ಸಂಧಿಸಿರುವ ಈತನನ್ನು ದಲಿತನೆಂದು ಹೇಳುವವರೂ ಇದ್ದಾರೆ. ದೇವೇಗೌಡ, ಕುಮಾರಸ್ವಾಮಿ ಸಖ್ಯ ಬೆಂಗಳೂರು ಕಡೆಯ ಒಕ್ಕಲಿಗರ ಮೂಲಕ ಕುದುರಿಸಿಕೊಂಡಿರುವ ರಮೇಶ್ ಆ ಜಾತಿಯನೆಂದು ಊಹಿಸುವವರೂ ಇದ್ದಾರೆ. ಇವತ್ತಿಗೂ ಬೆಂಗಳೂರಿನ ಕೋಡ್ತಿ ಪಂಚಾಯ್ತಿಯ ಮೆಂಬರ್ ಆಗಿರುವ ರಮೇಶ್‌ನ ತಾಯಿ ಬಗ್ಗೆ ಗೊತ್ತಿರುವವರು ಆತ ಪರಿಶಿಷ್ಟ ಪಂಗಡದವನೆಂದು ವ್ಯಾಖ್ಯಾನಿಸುತ್ತಿದ್ದಾರೆ.

ಈ ಜನ್ಮರಹಸ್ಯ ಏನೇ ಇರಲಿ. ರಮೇಶ್‌ನ ಬೆನ್ನಹಿಂದೆ ಹಳಿಯಾಳ-ಜೋಯಿಡಾದ ಮರಾಠರು, ದಲಿತರು, ಮುಸ್ಲಿಮರು, ಕ್ರಿಶ್ಚಿಯನ್ನರು ನಿಂತಿದ್ದಾರೆಂಬುದು ಸ್ಥಳೀಯ ರಾಜಕಾರಣದ ಸ್ಥಿತಿ-ಗತಿ ಅರಿತವರಿಗೆ ಕಾಣಿಸುತ್ತದೆ. ನಾಡಿದ್ದು ದೊಡ್ಡ ಗೌಡರ ಎದುರು ಜೆಡಿಎಸ್‌ಗೆ ರಮೇಶ್ ಜತೆಯಲ್ಲಿ ಸಮರ್ಪಣೆಯಾಗಲು ದೇಶಪಾಂಡೆ-ಸುನಿಲ್ ಹೆಗಡೆ ಮತ್ತು ಬಿಜೆಪಿ ಬಗ್ಗೆ ಬೇಸರ ಬಂದವರ ದೊಡ್ಡದೊಂದು ತಂಡ ತಯಾರಾಗುತ್ತಿದೆ. ಒಂದಂತೂ ಖರೆ. ಆಗಂತುಕ ರಮೇಶ್‌ನ ಜೆಡಿಎಸ್ ಎಂಟ್ರಿ ದೇಶಪಾಂಡೆ ಸಂಸ್ಥಾನದಲ್ಲಿ ನಡುಕ ಮೂಡಿಸುತ್ತಿದೆ; ಮರಳಿ ಜೆಡಿಎಸ್ ಸೇರಲು ಯೋಚಿಸುತ್ತಿದ್ದ ಸುನಿಲ್ ಹೆಗಡೆಯನ್ನು ಅತಂತ್ರ ಮಾಡುತ್ತಿದೆ; ಬಿಜೆಪಿ ಬಾಡುವ ಸೂಚನೆ ತೋರಿಸುತ್ತಿದೆ.

ಒಟ್ಟಿನಲ್ಲಿ ಹಳಿಯಾಳದ ಹಣ ಬಲ-ತೋಳ್ಬಲದ ರಾಜಕಾರಣದಲ್ಲಿ ಸಂಕ್ರಮಣ ಕಾಲ!!

■ ನಹುಷ

ಸಿದ್ದರಾಮಯ್ಯ ನಿಮ್ಮ ಜತೆಯಿದ್ರೆ ಜೈಲಿಗೊಯ್ತಿದ್ರು ಸಾ


ಥೂತ್ತೇರಿ

ಯಾಹೂ

ಹೊತ್ತನೆ ಹಳೆ ಹೆಂಡತಿಯ ಮನೆಗೆ ಕದ್ದು ಹೋಗಿ ಬಂದಂತೆ ಮೋದಿ ಪಾಕಿಸ್ತಾನಕ್ಕೆ ಹೋಗಿ ಬಂದಕೂಡಲೇ ಭಾರತದ ಚಡ್ಡಿ ವೀರರು ಪ್ರಶಂಸೆಯ ಸುರಿಮಳೆಗೈಯ್ಯುತ್ತಿರುವಾಗಲೇ ಅತ್ತ ಪಾಕಿಸ್ತಾನದಿಂದ ಪಠಾಣ್‌ಕೋಟ್ ಮೇಲೆ ದಾಳಿ ನಡೆಯಿತಲ್ಲಾ, ಕಾಂಗ್ರೆಸ್ ಕಾಲದಲ್ಲಿ ಹೀಗೆ ಯಾರಾದರೂ ಹೋಗಿ ಬಂದಿದ್ದರೆ ಈ ವೀರಾಧಿವೀರರು ಸುಮ್ಮನಿರುತ್ತಿದ್ದರೆ? ದೆಹಲಿಯ ಗಲ್ಲಿಗಲ್ಲಿಗಳಲ್ಲಿ ಪ್ರತಿಭಟನೆ ಮಾಡಿ ಟೈರಿಗೆ ಬೆಂಕಿಹಚ್ಚಿ ಚಳಿ ಕಾಯಿಸಿಕೊಳ್ಳುತ್ತಿರಲಿಲ್ಲವೇ? ಇಂದಿರಾ ಗಾಂಧಿ ಕಾಲದಲ್ಲೂ ಪಠಾಣ್‌ಕೋಟ್ ಮೇಲೆ ದಾಳಿಯಾಗಿತ್ತು. ಕೂಡಲೇ ಇಂದಿರಾ ಗಾಂಧಿ "ಪಾಕಿಸ್ತಾನದ ಈ ದಾಳಿಯನ್ನ ನಾವು ಎದುರಿಸಲು ಸಿದ್ಧ" ಎಂದರಲ್ಲದೆ, ಯುದ್ಧ ಮಾಡಿ ಗೆದ್ದು ಸಂಸತ್ತಿನಲ್ಲಿ ವಾಜಪೇಯಿಯಿಂದ 'ದುರ್ಗೆ' ಎಂಬ ಬಿರುದು ಸಂಪಾದಿಸಿದ್ದರು. ಆದರೀಗ ಮೋದಿ ಶರೀಫರಿಗೆ ಫೋನ್ ಮಾಡುತ್ತಾನೆ. ಆತ ತನಿಖೆಯ ನಾಟಕವಾಡುತ್ತಾನೆ. ಪಾಕಿಸ್ತಾನದ ಮಿಲಿಟರಿ ಮತ್ತು ಟೆರರಿಸ್ಟರ ನಡುವೆ ಸಿಕ್ಕಿಕೊಂಡಿರುವ ಶರೀಫನ ತನಿಖೆ ನ್ಯಾಯಸಮ್ಮತವಾಗಿ ನಡೆದು, ಅಪರಾಧಿಗಳು ಪತ್ತೆಯಾಗಿ, ಅವರಿಗೆ ಪನಿಷ್‌ಮೆಂಟಾಗುವುದು ನಿಜವೆ? ಪಾಕಿಸ್ತಾನದ ಟೆರರಿಸ್ಟರನ್ನು ಕೊಂದ ಕಾರಣಕ್ಕೆ ಅಲ್ಲಿನ ಸೈನಿಕರ ಮಕ್ಕಳನ್ನೇ ಕೊಂದವರಿಗೆ ಪಾಕಿಸ್ತಾನ ಪಾಠ ಕಲಿಸುವುದು ನಿಜವೆ? ಅದೆಲ್ಲಕ್ಕಿಂತ ಸಾಬರನ್ನ ಕೊಲ್ಲಲು ಸರಕಾರವನ್ನು ಬಳಸಿದವನೊಬ್ಬನನ್ನು ಪಾಕಿಸ್ತಾನ ಮನ್ನಿಸುವುದು ಕನಸಿನ ಮಾತಂತಲ್ಲಾ, ಥೂತ್ತೇರಿ!

* * *

ಭಾರತ ಪಾಕಿಸ್ತಾನದ ಸಮಸ್ಯೆ ಆರು ದಶಕದ್ದು. ಅದು ಎಂದೂ ಕೂಡ ಬಗೆಹರಿಯುವಂತಹದ್ದಲ್ಲ. ಆದರೆ ಕರ್ನಾಟಕದ ವೀರಶೈವ ಮಹಾಸಭೆಯ ಜನ ಹೊಸ ಸಮಸ್ಯೆಯೊಂದನ್ನು ಹುಟ್ಟುಹಾಕಿಕೊಂಡಿದ್ದಾರಂತಲ್ಲಾ. ಕೀಳುಜಾತಿಯ ಜನಗಳು ವೀರಶೈವ ಹೆಣ್ಣುಮಕ್ಕಳನ್ನು ಕೆಡಿಸುವುದು, ಚುಡಾಯಿಸುವುದು, ಬಲಾತ್ಕಾರದಿಂದ ಮದುವೆಯಾಗುವುದು ಇತ್ಯಾದಿ ಕೃತ್ಯಗಳನ್ನು ಮಾಡುತ್ತಿದ್ದಾರೆ. ಇದನ್ನು ತಡೆಯಲು ಶಿವಸೇನೆಯಂತಹ ಸೇನೆಯನ್ನು ಹುಟ್ಟುಹಾಕಬೇಕಿದೆ. ಸದರಿ ಸೇನೆಯು ವೀರಶೈವ ಧರ್ಮ ಕಾಪಾಡಲೋಸ್ಕರ ಕೆಡಿಸುವುದು, ಬಲಾತ್ಕರಿಸುವುದು ಮತ್ತು ಮದುವೆಯಾಗುವುದನ್ನು ತಡೆದು ತಾವೇ ಆ ಕೆಲಸ ಮಾಡುವಂತಾಗಬೇಕು. ಇದರ ಅಧ್ಯಕ್ಷತೆಯನ್ನು ಪ್ರಮೀಳಾ ನೇಸರ್ಗಿ ಎಂಬ ಮಹಿಳೆಗೆ ವಹಿಸಬೇಕೆಂದು ಒತ್ತಾಯಿಸಿದ್ದಾರಂತಲ್ಲಾ. ಇದರಿಂದ ಬೆಚ್ಚಿಬಿದ್ದ ವೀರಶೈವ ವಿರೋಧಿಗಳು "ಇದೆಂತಹ ರೋಗ? ಹನ್ನೆರಡನೆ ಶತಮಾನದಲ್ಲಿ ಕೀಳುಜಾತಿಗಳಾಗಿದ್ದವರನ್ನೆಲ್ಲಾ ಬಸವಣ್ಣ ಕರೆದು ಕಟ್ಟಿದ ಲಿಂಗಕ್ಕೆ ಕುತ್ತಿಗೆಯೊಡ್ಡಿ ಈಗ ತಾವು ಬಿಟ್ಟುಬಂದ ಜಾತಿಯವರನ್ನೇ ಕೀಳು ಎನ್ನುತ್ತಿದ್ದಾರೆ! ಇವರ ಮನದಲ್ಲಿನ ಕೀಳುಭಾವನೆಗೆ ಕಾರಣ ಚಡ್ಡಿಗಳ ಸಹವಾಸದೋಷವೇ ಇರಬೇಕು. ಇದೆಲ್ಲಕ್ಕಿಂತ ಮುಖ್ಯವಾಗಿ ಬೊಂಬಾಯಿಯಲ್ಲಿ ಕನ್ನಡಿಗರನ್ನ ಹಿಂಸಿಸುವ ಶಿವಸೇನೆಯಂತಹ ಸಂಘಟನೆ ಕರ್ನಾಟಕದಲ್ಲಿ ಉದ್ಭವಿಸಿ ಅದಕ್ಕೆ ಅತ್ಯಾಚಾರಕ್ಕೆ ಒಳಗಾದ ಮಹಿಳೆಯರ ವಿರುದ್ಧವೇ ಹೋರಾಡುತ್ತಿರುವ ಪ್ರಮೀಳಾ ಠಾಕ್ರೆಯಿಂದ ವೀರಶೈವ ಮಹಿಳೆಯರಿಗೆ ನ್ಯಾಯ ಸಿಗುವುದು ನಿಜವೇ?" ಎಂದು ಆಡಿಕೊಂಡರಂತಲ್ಲಾ, ಥೂತ್ತೇರಿ!!



* * *

ಮನೆಯೊಳಗಿನ ಜಗಳದಿಂದ ಸಿಟ್ಟಾದ ಯಜಮಾನರು ಹಾದಿಬೀದಿ ಜನಗಳನ್ನು ಬೈಯ್ಯುತ್ತ ಸಮಾಧಾನಗೊಳ್ಳುವಂತೆ ಮಾನ್ಯ ಮಾಜಿ ಪ್ರಧಾನಿಗಳು "ಈ ಸಿದ್ದರಾಮಯ್ಯನ ಸರಕಾರ ನನ್ನ ಜೀವನದಲ್ಲಿ ನಾನು ನೋಡಿದ ಕೆಟ್ಟ ಸರಕಾರ" ಎಂದುಬಿಟ್ಟಿದ್ದಾರಲ್ಲ, ಈ ಬಗ್ಗೆ ಮಾತನಾಡಿಸಬೇಕೆಂದು ಫೋನ್ ಮಾಡಿದಾಗ ರಿಂಗಾಯ್ತು-

ರಿಂಗ್‌ಟೋನ್: "ನಮ್ಮ ಸಂಸಾರ ಆನಂದ ಸಾಗರ, ಜೆಡಿಎಸ್ ಎಂಬ ದೈವವೆ ನಮಗಾಧಾರ, ಆ ದೈವ ತಂದ ಸಿರಿಯಿಂದ ಬಾಳೆ ಬಂಗಾರ."

"ಹಲೋ?"

"ನಾನು ಸಾರ್ ಯಾಹು, ನಿಮ್ಮ ಅಭಿಮಾನಿ."

"ಹೇಗಿದ್ದೀರಿ ಗುರುವೇ?"

"ಚೆನ್ನಾಗಿದ್ದೀನಿ ಸಾರ್. ಈ ವಯಸ್ಸಿನಲ್ಲೂ ಗಂಗಾವತಿ ಕಡಿಕೋಗಿ ಯಾರದೊ ಮನೇಲಿ ಮನಿಗಿದ್ದು ಬತ್ತಿರಲ್ಲ, ಗ್ರೇಟ್ ಸಾರ್."

"ಅದಕ್ಕೆಲ್ಲ ಹಿಂದಿನ ಜನ್ಮದಲ್ಲಿ ಪಡಕೊಂಡು ಬಂದಿರಬೇಕು."

"ಸಿದ್ದರಾಮಯ್ಯನ ಸರಕಾರದ ಬಗ್ಗೆ ಒಂದೆರಡು ಪ್ರಶ್ನೆ ಕೇಳ್ತೀನಿ ಸಾರ್."

"ಅಹ್ಹಹ್ಹೈಯ್ಯೋ, ಇದೊಂದು ಸರಕಾರನ? ನನ್ನ ರಾಜಕೀಯ ಜೀವನದಲ್ಲಿ ಇಷ್ಟು ಕೆಟ್ಟ ಸರಕಾರವೇ ನೋಡಿಲ್ಲ."

"ಹೌದಾ ಸಾರ್?"

"ಹೌದಾ ಅಂತ ಕೇಳ್ತಿರಲ್ರೀ? ಅಹಿಂದ ಸರಕಾರ ಅಂತರೆ ಎಲ್ಲಿದೆ ಅಹಿಂದ?"

"ಅಹಿಂದ ಸರಕಾರ ಆಗಿರದ್ಕೆ ಸಾರ್ ಹಿಂಗಿರದು. ನಿಮ್ಮ ವಿಶ್ವಾಸದಲ್ಲಿದ್ದ ಶ್ರೀನಿವಾಸ್ ಪ್ರಸಾದ್ ರೆವಿನ್ಯೂ ಮಂತ್ರಿ. ನಿಮ್ಮ ಅಭಿಮಾನಿ ಮಹದೇವಪ್ಪ ನೀವು ಚೆನ್ನಾಗಿ ನಿರ್ವಹಿಸಿದ ಖಾತೆ ಮಂತ್ರಿ. ಆಂಜನೇಯ ಸಮಾಜ ಕಲ್ಯಾಣ ಮಂತ್ರಿ. ಜಾರಕಿಹೊಳಿ, ಉಮಾಶ್ರೀ, ಪರಮೇಶ್ವರ ನಾಯಕ್ ಇವರೆಲ್ಲಾ ಅಹಿಂದ ಮಂತ್ರಿಗಳಲ್ಲವೆ? ಸ್ವತಃ ಮುಖ್ಯಮಂತ್ರಿಯೇ ನಾನು ಅಹಿಂದ ಮುಖ್ಯಮಂತ್ರಿ ಅಂತರೆ. ಇದಕ್ಕಿಂತ್ಲೂ ಅಹಿಂದ ಮಾಹಿತಿ ಬೇಕಾ ಸಾರ್."

"ಮೈಸೂರಿಗೆ 20 ಮಂದಿ ಕುರುಬ ಜಾತಿ ಅಧಿಕಾರಿಗಳನ್ನು ಹಾಕಿಕೊಂಡಿದ್ದಾರೆ. ಇದು ಹೇಗೆ ಅಹಿಂದಾ?"

"ಸಾರ್, ಕುಮಾರಣ್ಣ ಮುಖ್ಯಮಂತ್ರಿಯಾಗಿದ್ದಾಗ ಸುಮಾರು ನೂರು ಜನ ಸಬ್‌ಇನ್ಸ್‌ಪೆಕ್ಟರ್‌ಗಳನ್ನು ನಿಮಗೆ ಅನುಕೂಲ ಮಾಡೋ ಜಾಗಗಳಿಗೆ ಹಾಕಿದ್ರಿ. ಎಂ.ಪಿ. ಪ್ರಕಾಶ್ ಗೃಹ ಸಚಿವರಾದ್ರೂ ಎಸ್ಪಿಗಳು, ಅಡಿಷನಲ್ ಎಸ್ಪಿಗಳು ಮತ್ತೆ ಸರ್ಕಲ್ ಇನ್ಸ್‌ಪೆಕ್ಟರ್ ಟ್ರಾನ್ಸ್‌ಫರ್ ನೀವೇ ಮಾಡುಸ್ತಿದ್ರಿ. ಕುಮಾರಣ್ಣನಂತೂ ಸಿದ್ದರಾಮಯ್ಯನ ಜಾತಿ ಅಧಿಕಾರಿಗಳನ್ನ ಬೇಟೆಯಾಡಿದ್ರು ಸಾರ್. ಜಾತಿರಾಜಕಾರಣ ಮಾಡಿದವರಿಗೆ ಜಾತಿರಾಜಕಾರಣವೇ ಕಾಣತ್ತೆ ಸಾರ್."

"ಮಿಸ್ಟರ್ ಯಾಹೂ, ನನ್ನ ರಾಜಕೀಯ ಜೀವನದಲ್ಲಿ ನಾನು ಜಾತಿ ರಾಜಕಾರಣ ಮಾಡಿದವನಲ್ಲ. ನನ್ನ ಪಾರ್ಟಿ ಅಧ್ಯಕ್ಷನನ್ನಾಗಿ ದಲಿತ ಜನಾಂಗದ ತಿಪ್ಪೇಸ್ವಾಮಿಯವರನ್ನು ಮಾಡಿದ್ದೆ. ನನ್ನ ಖಾಸಗಿ ಅಧಿಕಾರಿ ಕುರುಬ ಜನಾಂಗದ ತಿಪ್ಪೇಸ್ವಾಮಿ. ಹಾಸನದ ಜಿಲ್ಲಾ ಪಂಚಾಯ್ತಿ ಅಧ್ಯಕ್ಷನ್ನಾಗಿ ದಲಿತ ಜನಾಂಗದ ಹುಡುಗನನ್ನು ಮಾಡಿದ್ದೆ. ಇದೇ ಸಿದ್ದರಾಮಯ್ಯನ ಬೆಳೆಸಿದ್ದ್ಯಾರು?"

"ನೀವೇ ಅಲ್ಲವ ಸಾರ್? ನೀವೇ ಬೆಳೆಸಿದವನ ಸರಕಾರನ ಈ ಹಿಂದೆ ನಾನು ನೋಡದಷ್ಟು ಕೆಟ್ಟ ಸರಕಾರ ಅಂತಿರಲ್ಲಾ, ಕೆಟ್ಟ ಹೆಸರು ನಿಮಗೇ ಅಲ್ಲವಾ?"

"ಅಯ್ಯೋ ರಾಮ, ನಮಗ್ಯಾಕೆ ಕೆಟ್ಟ ಹೆಸರು? ಅವ್ರುರೇನು ನಮ್ಮ ಜತೆ ಇದ್ದಾರಾ?"

"ನಿಮ್ಮ ಜೊತೆ ಇದ್ರೆ ಇನ್ನೂ ಕೆಟ್ಟ ಸರಕಾರ ಆಗದು ಸಾರ್."

"ಅದು ಹೇಗೆ? ಜತೇಲಿ ನಾವು ಇರತಿರಲಿಲ್ಲವಾ?"

"ಅದೇ ಸಾರ್ ಸಮಸ್ಯೆ. ಬೆಳಗಾಯ್ತು ಅಂದ್ರೆ ನೀವು, ನಿಮ್ಮ ಮಕ್ಕಳು, ಮೊಮ್ಮಕ್ಕಳು, ನಂಟ್ರು, ಇಷ್ಟ್ರು, ಬೀಗರು, ಬಿಜ್ಜರ ಫೈಲನ್ನೆಲ್ಲಾ ಹೊತಗಂಡೋಗೀ ಸಿದ್ದರಾಮಯ್ಯನಿಂದ ಸಯಿನು ತಗೊತಿದ್ರಿ. ಅದೂ ಭೂಮಿ ಸಂಬಂಧವಾದ ಫೈಲು ಸಾರ್. ಆಗ ಸಿದ್ದರಾಮಯ್ಯ ಖಂಡಿತ ಜೈಲಿಗೋಗಂಗಾಯ್ತಿತ್ತು."

"ನಮ್ಮ ಜತೆ ಇದ್ದೋರಾರು ಜೈಲಿಗೋಗಿಲ್ಲ."

"ಕೆ.ಪಿ. ಎಸ್ಪಿಲಿದ್ದ ಡಾ. ಕೃಷ್ಣ ಹೋಗಿಬಂದ ಸಾರ್. ಆಗ್ಲಿಂದ ಆತ ಯಾವ ಮದುವೆ, ತಿಥಿಲೂ ಕಾಣ್ತಾಯಿಲ್ಲ. ಇನ್ನೂ ಯಡಿಯೂರಪ್ಪ ಹೋಗಿದ್ದು ನಿಮ್ಮ ಸಹವಾಸದಿಂದ. ಕುಮಾರಣ್ಣನೂ ಕೂಡ ಡಿನೋಟಿಫಿಕೇಷನ್ ವಿಷಯದಲ್ಲಿ ಬೇಲ್ ಪಡಕೊಂಡವ್ರುರೆ. ಅಂತ ಕೆಲಸ ಸಿದ್ದರಾಮಯ್ಯನ ಸರಕಾರದಲ್ಲಿ ಇನ್ನೂ ಯಾರು ಮಾಡಿಲ್ಲ ಸಾರ್."

"ಕಾದು ನೋಡಿ. ಇನ್ನು ಎರಡೂ ವರ್ಷದ ಅವಧೀಲಿ ಏನೇನು ಮಾಡ್ತರೆ ಅಂತ ನಿಮಗೆ ಗೊತ್ತಾಗುತ್ತೆ."

"ಇನ್ನೊಂದು ವಿಷಯ ಸಾರ್. ನಮ್ಮ ನೆನಪಲ್ಲಿರೊ ಕೆಟ್ಟ ಸರಕಾರ ಗುಂಡೂರಾಯರದು. ಬಂಗಾರಪ್ಪಂದು. ಈಚೆಗೆ ಯಡಿಯೂರಪ್ಪಂದು. ಇಷ್ಟೆಲ್ಲಾ ಇದ್ರು ನೀವು ಸಿದ್ದು ಸರಕಾರದಂತ ಕೆಟ್ಟ ಸರಕಾರ ನಾನು ನೋಡಿಲ್ಲ ಅಂದಿದ್ದಿರಲ್ಲಾ, ಕಾರಣ ಏನು ಸಾರ್?"

"ಅಯ್ಯೋ ಶಿವನೆ, ಕಾರಣ ಕೇಳ್ತೀರಲ್ರೀ. ಯಾರಾದ್ರು ಈ ಸರಕಾರದ ಬಗ್ಗೆ ಒಂದೇ ಒಂದು ಒಳ್ಳೆ ಮಾತಾಡ್ತರೇನ್ರಿ?"

"ಇಲ್ಲ ಸಾರ್, ಅದಂತೂ ನಿಜ. ಅಹಿಂದ ಅಂತ ಬಾಯಿಬಿಟ್ಟು ಹೇಳಿಕೊಂಡು ಅವರಿಗೇ ಆದ ಕಾರ್ಯಕ್ರಮ ರೂಪಿಸಿರೊ ಸರಕಾರದ ಬಗ್ಗೆ ಯಾವನಾದ್ರೂ ಮೆಚ್ಚಿಮಾತಾಡ್ತನ ಸಾರ್? ಸರಕಾರದಲ್ಲಿರೊ ಲಿಂಗಾಯತ್ರ ಶಾಸಕರೇ ಟೀಕೆ ಮಾಡ್ತರೆ. ಪತ್ರಿಕೆಯವರಿಗೂ ಈ ಸರಕಾರ ಸಪ್ಪೆ ಸರಕಾರದಂಗೆ ಕಾಣತ್ತೆ, ಸಿದ್ದರಾಮಯ್ಯ ನಿಮ್ಮ ತರನೇ ವೇದಿಕೆಲಿ ನಿದ್ದೆ ಮಾಡ್ತರೆ. ಇದೊಂದು ರೀತಿ ಎಮ್ಮೆ ನಡಿಗೆ ಸರಕಾರ. ಆದ್ರೂ ಹದಿನೆಂಟು ತಿಂಗಳಿದ್ದ ನಿಮ್ಮ ಸರಕಾರನೂ ಹೀಗೆ ಇತ್ತಲವ. ನಿಮ್ಮ ಸರಕಾರದಲ್ಲಿ ಗೋವಿಂದೇಗೌಡ್ರು ಮಾತ್ರ ಪ್ರಾಮಾಣಿಕರಿದ್ರು. ಈ ಸರಕಾರದಲ್ಲಿ ಕಿಮ್ಮನೆ ರತ್ನಾಕರ್, ಕೃಷ್ಣಬೈರೇಗೌಡ ಅಂತ ಇಬ್ರಿದಾರೆ. ನಿಮ್ಮ ತರದ್ದೇ ಸರಕಾರ ಬೈತಿರಲ್ಲ ಸಾರ್. ಹಾಸನದಲ್ಲಿ ಸೋತಿದ್ದಕ್ಕೆ, ಅನ್ನಾರಿ ಟೀಕಿಸಿದ್ದಕ್ಕೆ ಸಿಟ್ಟು ಬಂದದಾ ಸಾರ್?"

"ಚುನಾವಣೆಯಲ್ಲಿನ ಯಾವುದೇ ಸೋಲುಗೆಲುವಿಗೂ ನಾನು ತಲೆ ಕೆಡಿಸಿಕೊಂಡೋನಲ್ಲ, ಹಾಸನದಲ್ಲಿ ಪ್ರತಿ ಓಟಿಗೆ 50 ಸಾವಿರ ಕೊಟ್ರು."

"ಮಂಡ್ಯದಲ್ಲಿ ನಿಮ್ಮ ಪಾರ್ಟಿ ಕ್ಯಾಂಡಿಡೇಟ್ ಅಷ್ಟೇ ಕೊಟ್ರಲ್ಲ ಸಾರ್? ಅವರು ಕೊಟ್ಟ ದುಡ್ಡ ಲೆಕ್ಕ ಹಾಕಿದ್ರೆ ಬರೋಬ್ಬರಿ 22 ಕೋಟಿ ಆಯ್ತದೆ ಸಾರ್."

"ಚುನಾವಣೆ ಭ್ರಷ್ಟತೆ ಬಗ್ಗೆ ನಾನು ಮಾತನಾಡಕ್ಕೋಗಲ್ಲ. ಹತ್ತೊಂಬತ್ತು ನೂರಾ ಎಪ್ಪತ್ತೊಂಬತ್ತನೇ ಇಸವಿಯಲ್ಲಿ ಶ್ರೀಮಾನ್ ಅರಸುರವರನ್ನ ಭ್ರಷ್ಟ ಅಂತ ಹೇಳಿ ಭಾಷಣ ಮಾಡಿದ್ದೆ. ಆದ್ರೆ ಮರುದಿನ ಅವರ ಮನೆ ಬಾಗಿಲಿಗೆ ಹೋಗಿ ಮುರಾರ್ಜಿ ದೇಸಾಯಿಗೆ ಸಹಾಯ ಮಾಡಿ ಅಂತ ಕೇಳೊ ಪರಿಸ್ಥಿತಿ ಬಂತು. ಆಗಿನಿಂದ ಭ್ರಷ್ಟತೆ ಬಗ್ಗೆ ಮಾತಾಡಲ್ಲ ನಾನು."

"ಭ್ರಷ್ಟತೆ ಬಗ್ಗೆ ಮಾತಾಡಲ್ಲ ಅಂದ್ರೆ ಒಪ್ಪಿಕೊಂಡ್ರಿ ಅಂತ ಅಲ್ಲವ ಸಾರ್."


"ಒಪ್ಪಿಕೊಂಡೆ ಅಂತ ಅಲ್ಲ."

"ಮತ್ತೆ?"

"ಆ ಬಗ್ಗೆ ಮಾತಾಡಲ್ಲ ಅಂತ."

"ಥೂತ್ತೇರಿ!!!" ■

ದ್ವಂದ್ವ ಸ್ವಾಮಿಯ ದುಂದು ಪರ್ಯಾಯ



ಪರ್ಯಾಯದ ಹೆಸರಲ್ಲಿ ಜನರ ಬಿಟ್ಟಿ ಸಂಪತ್ತು ಹಾಗು [illegible]ರವಕ್ಕೆ ಹೊಂಚುತ್ತಿರುವ ಉಡುಪಿಯ ಒಂದು ವರ್ಗ [illegible]ಗ ಚಕ್ಕಳಮಕ್ಕಳ ಹಾಕಿ ಸುಭಿಕ್ಷವಾಗಿ ಉಣ್ಣಲು ಕುಂತಿವೆ. [illegible]ಟಿಕಲ್ ರಾಜಕಾರಣಿಯಂತೆ ವರ್ತಿಸುವ ಉಡುಪಿಯ [illegible]ವಿಧಾರಿ ಪೇಜಾವರರು ತಮ್ಮ ಪ್ರತಿಯೊಂದು [illegible]ಳಿಕೆಯನ್ನೂ ದೇವೇಗೌಡರಂತೆ ಬಹಳಷ್ಟು ದೂರದ [illegible]ಜಕಾರಣವನ್ನು ಊಹಿಸಿಯೇ ಇಡುವಂತಹವರು. ಮನೆಯಲ್ಲಿ [illegible]ತ್ತಿನ ಊಟಕ್ಕೂ ಗತಿಯಿಲ್ಲದೇ ನೂರಾರು ಸಮಸ್ಯೆಗಳಿ[illegible]ವ ಕೆಳವರ್ಗದ ಜನರಲ್ಲಿ ಸ್ವಧರ್ಮ ರಕ್ಷಣೆಯ ಕೋಮು [illegible]ಮಲನ್ನು ತುಂಬಿ ಅವರನ್ನು ಅನ್ಯಧರ್ಮೀಯರ ವಿರುದ್ಧ [illegible]ಬಿಟ್ಟು ಕಾರ್ಯಸಾಧಿಸಿಕೊಳ್ಳುವ ಕಲೆ ಈ ಕುತ್ಸಿತ [illegible]ಗೆ ಗೊತ್ತು. ಅದೇರೀತಿ ತಾನು ಆ ವಿಚಾರಕ್ಕೆ [illegible]ಬಂಧಿಸಿಯೇ ಇಲ್ಲ ಎಂಬಂತೆ ತೋರಿಸಿಕೊಳ್ಳುವುದೂ [illegible]ತ್ತು. [illegible] ಒಂದೇ [illegible] ಗೊತ್ತು, [illegible] ತಮ್ಮ ದೇಗುಲದಲ್ಲೇ ನಡೆಯುವ [illegible] [illegible] ಬಗ್ಗೆ ದಾಟಿ ಬಿಟ್ಟು ಸಮರ್ಥಿಸಿಕೊಳ್ಳಲೂ ಗೊತ್ತು. ವರ್ಣಸಂಕರಕ್ಕೆ ಅನುಮತಿ ಎಂದರೆ ಸನಾತನ ಧರ್ಮದ ತಳಹದಿಯಾದ ಶ್ರೇಣೀಕೃತ ವ್ಯವಸ್ಥೆಗೆ ಪೆಟ್ಟೆಂದು ಅಂತರಜಾತಿ ವಿವಾಹವನ್ನು ತೀವ್ರವಾಗಿ ವಿರೋಧಿಸುತ್ತಲೇ ಬ್ರಾಹ್ಮಣ ಮತದ ಒಗ್ಗೂಡಿಕೆಗಾಗಿ ತ್ರಿಮತಸ್ಥರೊಳಗಿನ ವಿವಾಹ ಓಕೆ ಎನ್ನಲೂ ಗೊತ್ತು. ಅದಕ್ಕೇ ಅಲ್ಲವೇ ದ್ವಂದ್ವಸ್ವಾಮಿ ಎನ್ನುವ ವಿಶಿಷ್ಟ ಬಿರುದು. ಎಂಟು ಮಠಗಳ ಉಡುಪಿಯ ದೇಗುಲಕ್ಕೆ ಒಬ್ಬರೇ ವಾರಸುದಾರರಲ್ಲವಾದರೂ ಅನಧಿಕೃತವಾಗಿ ಸದ್ಯಕ್ಕೆ ಒನ್ ಅಂಡ್ ಒನ್ಲಿ ವಾರಸುದಾರರಂತೆ ಬಿಂಬಿಸಿಕೊಳ್ಳುತ್ತಿರುವುದು ಪೇಜಾವರರು ಮಾತ್ರ. ಬಹುಶಃ ಕರಾವಳಿ ಜಿಲ್ಲೆಗಳಲ್ಲಿ ಅವತ್ತು 'ಪುಂಡಸ್ವಾಮಿ' ಎಂದೇ ಕುಖ್ಯಾತನಾಗಿದ್ದ ವಾದಿರಾಜರ ಬಳಿಕ ವಾದಿರಾಜರಂತೆ ದಾರ್ಷ್ಟ್ಯದಿಂದ ಕಾರ್ಯಸಾಧನೆಗಿಳಿಯದಿದ್ದರೂ ತನ್ನ ಶಕುನಿತಂತ್ರಗಳ ಮೂಲಕ ಕಾರ್ಯಸಾಧನೆ ಗಿಳಿಯುತ್ತಿರುವ ಏಕೈಕ ಸ್ವಾಮಿಯೆಂದರೆ ಅದು ಪೇಜಾವರರು ಮಾತ್ರ.


500 ವರ್ಷಗಳ ಹಿಂದಿನ ವಾದಿರಾಜರು ಇಲ್ಲಿನ ಶೈವ ದೇಗುಲಗಳ ಮೇಲೆ ಪ್ರಭುತ್ವದ ಪ್ರಭಾವಳಿಯನ್ನಿಟ್ಟು ಕೊಂಡು ತನ್ನ ಬಲಾತ್ಕಾರದ ಪ್ರವೃತ್ತಿಯನ್ನು ತೋರಿದ್ದಕ್ಕೆ ಐತಿಹಾಸಿಕ ದಾಖಲೆಗಳಿವೆ. ಇಲ್ಲಿನ ಹಳೆಯ (ಮೊದಲು ಬಂದಂತಹ) ಬ್ರಾಹ್ಮಣರಾದ ಸ್ಥಾನಿಕರು ಹಾಗು ಶೃಂಗೇರಿ ಪೀಠದ ಪ್ರಭಾವ ಇತ್ಯಾದಿಗಳೆಲ್ಲ ವಾದಿರಾಜರ ಪುಂಡುಗಿರಿಯ ಬಳಿಕ ಕಳೆಗುಂದಲ್ಪಟ್ಟವು. ಹಳೆಯ ಶೈವ ದೇಗುಲಗಳಲ್ಲಿ ಗಟ್ಟಿಯಾಗಿ ಪೂಜೆಗೆ ಕೂತ ವೈಷ್ಣವ ಅರ್ಚಕರು ತಮ್ಮ ಸಾಲಿಗ್ರಾಮ ಹಾಗು ತುಳಸಿಯನ್ನು ಪೂಜೆಯಲ್ಲಿ ಅಳವಡಿಸಿಕೊಂಡರು. ಉಡುಪಿಯೂ ಸೇರಿ ಅನೇಕ ಸ್ಥಳಗಳಲ್ಲಿರುವ ಊರ ಮುಖ್ಯ ದೇವರೆನಿಸಲ್ಪಟ್ಟ ಅನೇಕ ಶೈವ ದೇಗುಲಗಳು ಇದ್ದೂ ಇಲ್ಲದಂತಾದವು. ಬಂಟ್ವಾಳದ ಮಾಣಿ ಬಳಿ ಒಂದು ಊರಿದೆ. ಆ ಊರಿನ ಹೆಸರು 'ಕಡೆ ಶಿವಾಲಯ' ಎಂದು. ಊರಹೆಸರನ್ನು ನಂಬಿ ಅಲ್ಲಿನ ಶಿವಾಲಯಕ್ಕೆಂದು ನೀವು ಹೋದರೆ ನೇತ್ರಾವತಿಯ ಆ ಸುಂದರ ದಡದಲ್ಲಿ ಶಿವಾಲಯ ಮಾಯವಾಗಿ ಮಾಧ್ವರ ನರಸಿಂಹಸ್ವಾಮಿ ದೇವಾಲಯ ಕಾಣಿಸುತ್ತದೆ. ಹೆಸರು ಮಾತ್ರ ಶಿವಾಲಯ. ಅಲ್ಲಿ ಈ ಪರಮಶಿವನನ್ನೇ ಈ ಕಿಲಾಡಿ ಮಾಧ್ವರು 'ಲಯ' ಮಾಡಿ ಗೆದ್ದಿದ್ದರು. ಹೇಗಿದ್ದರೂ ಅನುಕೂಲಕರ ಸ್ಥಳ ಪುರಾಣ ಕಟ್ಟುವುದರಲ್ಲಿ ಹಾಗು ಪೂರಕವಿಲ್ಲದ ಕಥೆಗಳನ್ನು ನಿರ್ಮಾಣ ಮಾಡುವುದರಲ್ಲಿ ಇವರದ್ದು ಎತ್ತಿದ ಕೈ (ಉದಾಹರಣೆ: ಜನವರಿ, 6ರ ಗೌರಿ ಲಂಕೇಶ್‌ನಲ್ಲಿ ರವಿ ಬಿ ಶೆಣವರು ಉಲ್ಲೇಖಿಸಿದ ನಾಗಶ್ರೀ ಹಾಗು ಕಲ್ಲುರ್ಟಿ ಪ್ರತಾಪ ಯಕ್ಷಗಾನವನ್ನು ನಿಲ್ಲಿಸಿದಂತಹ ಪ್ರಕರಣ) ತಾನೆ?

ಹಿಂದಿನ ಸಿಯೆಂಗಳಿಗೆ ಹೋಲಿಸಿದಲ್ಲಿ ಅಂತಹ ಹೇಳುವಂತಹ ಸಮಸ್ಯೆಗಳಿಲ್ಲದೇ ರಾಜ್ಯ ಭಾರ ಮಾಡುತ್ತಿರುವ ಸಿದ್ದರಾಮಯ್ಯನವರ ಕುರಿತು ನಮ್ಮ ಪೇಜಾವರರು ಸಿದ್ದರಾಮಯ್ಯ ಸಮಸ್ಯೆಗಳಲ್ಲೇ ಮುಳುಗಿದ್ದಾರೆ ಎನ್ನುವಂತೆ "ಸಿದ್ದರಾಮಯ್ಯ ಅವತ್ತು ಉಡುಪಿಗೆ ಬಂದಿದ್ದಾಗ ಮಠಕ್ಕೂ ಭೇಟಿ ಕೊಟ್ಟಿದ್ದರೆ ಅವರಿಗೆ ದೇವಕೃಪೆ ಸಿಕ್ಕಿರುತ್ತಿತ್ತು." ಎಂದು ಹೇಳುವ ಮೂಲಕ ತಮ್ಮ ಕೃಪೆ ಇದ್ದಲ್ಲಿ ಮಾತ್ರ ಉದ್ಧಾರ ಎಂಬಂತಹ 'ಅಹಂ' ನ ಮಾತನ್ನಾಡಿದ್ದರು. ರಾಜನಂತೆ ಧಮಕಿ ಶೈಲಿಯಲ್ಲಿ ಮಾತಾಡುವ ಬಗ್ಗಂಚಿ ಮತ್ತು ಹುಚ್ಚುಚ್ಚಾಗಿ ಕನವರಿಸುವ ಪೇಜಾವರರಿಗೆ ಈ ಪೇಜಾವರರ "ಐತಿಹಾಸಿಕ" ಪರ್ಯಾಯ ಸಮಯದಲ್ಲಿ ಹೇಳಿದಂತೆ ಕೇಳುವ ಚಡ್ಡಿ ಸರಕಾರ ಇದ್ದಿಲ್ಲವಲ್ಲ ಎಂಬುದೇ ದೊಡ್ಡ ತಲೆನೋವಿನ ವಿಚಾರವೆನಿಸಿದೆ.

ಮಾಧ್ವರಿಗೂ ಮುನ್ನ ಶಿವನ ಊರು 'ಶಿವಳ್ಳಿ' ಯಾಗಿ ಬಿಂಬಿತವಾಗಿದ್ದ ಉಡುಪಿಯನ್ನು ಕೃಷ್ಣನ ನಾಡನ್ನಾಗಿಸಿದ ಮಾಧ್ವ ಯತಿಗಳು ತಮ್ಮ ಉಳಿವಿಗಾಗಿ ಹಾಗು ಗರಿಮೆಯ ಕುಪ್ರದರ್ಶನಕ್ಕಾಗಿ ಏನನ್ನೂ ಮಾಡಲೂ ಕೂಡ ಹೇಸರೆಂದು ನಾಡಗೀತೆಯ ಮಾಧ್ವವಿವಾದದಲ್ಲೇ ಸಾಬೀತಾಗಿದೆ. (ಸುಬ್ರಹ್ಮಣ್ಯ ದೇಗುಲದ ಗೋಡೆಯಲ್ಲಿ ಹುಗಿದಿಟ್ಟ ಖೊಟ್ಟಿ ತಾಮ್ರಶಾಸನದ ಪ್ರಕರಣದ ಬಗ್ಗೆ ತಾ. 27.9.1887 ರಂದು ಮಂಗಳೂರು ನ್ಯಾಯಾಲಯದ ಸಬ್ ಜಡ್ಜ್ ಗೋಪಾಲನಾಯರ್ ಅವರು ಈ ಕಳ್ಳಯತಿಗಳ ಮೋಸಗಾರಿಕೆಯ ಕುರಿತಾಗಿ ಎಲ್ಲರ ಸಮ್ಮುಖದಲ್ಲೇ ಸರಿಯಾಗಿ ಉಗಿದ ಇತಿಹಾಸವಿದೆ) ಗನ್ ಧಾರಿ ಶಿರೂರು, ದೇಶಬಿಟ್ಟೋಡುವೆ ಎಂದ ಅದಮಾರು, ಸೋಸಲೆಯ 420 ವಿದ್ಯಾಮನೋಹರರಂತಹವರೇ ಮಿನುಗುತ್ತಿರುವ ಮಾಧ್ವ ಯತಿಸಮೂಹಕ್ಕೆ ಕಳಶಪ್ರಾಯರಂತೆ ಕಂಗೊಳಿಸುವವರೆಂದರೆ ಇದೇ ಪೇಜಾವರರು. ಅವರದ್ದೆಲ್ಲ ನೇರಾನೇರ ಡೀಲ್‌ಗಳಾದರೆ, ಇವರ ತಂತ್ರಗಾರಿಕೆಯೇ ಬೇರೆ. ಪೀಠಾರೋಹಣದ ನಿಯಮದಂತೆ ಅವಧಿ ಮುಗಿಯುವವರೆಗೆ ಉಡುಪಿಯ ಮಠ ಬಿಟ್ಟು ಕದಲುವಂತಿಲ್ಲ. ಎರಡು ವರ್ಷ ಸುಮ್ಮನೆ ಕುಳಿತಿರದ ದೆಲ್ಲಿ ಸಿಂಹಾಸನದವರೆಗೆ ಕೈ ಇರುವಂತಹ ಈ ಕುತ್ಸಿತ ಕುಖ್ಯಾತಿಯ ಸ್ವಾಮಿ ಅಲ್ಲೇ ಕುಳಿತು ಮಾಡಬಹುದಾದ ಡೀಲ್ ಹಾಗು ತಂತ್ರಗಾರಿಕೆಯನ್ನು ನೆನೆದರೇ ಭಯವಾಗುತ್ತದೆ.

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಯಾತಕ್ಕಾಗಿ ಮಹಿಳೆಯರಿಗೆ ಶಬರಿಮಲೈ ಪ್ರವೇಶ ?



ಜನವರಿ 11ರಂದು ಸುಪ್ರೀಂಕೋರ್ಟ್‌ನಲ್ಲಿ ನಡೆದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯೊಂದರ ವಿಚಾರಣೆ ದೇಶಾದ್ಯಂತ ವಾದ-ವಿವಾದಗಳ ಸುಳಿಯನ್ನೆಬ್ಬಿಸಿದೆ. ಅದು 'ಇಂಡಿಯನ್ ಯಂಗ್ ಲಾಯರ್ಸ್ ಅಸೋಸಿಯೇಶನ್ (ಭಾರತೀಯ ಯುವ ವಕೀಲರ ಅಸೋಸಿಯೇಶನ್)' ಹಾಗೂ ಐವರು ವಕೀಲೆಯರು ಸೇರಿ ಜಂಟಿಯಾಗಿ ದಾಖಲಿಸಿರುವ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ. ದೇಶದ ಸರ್ವೋಚ್ಚ ನ್ಯಾಯಾಲಯದ ಮುಂದೆ ಇವರ ಬೇಡಿಕೆ ಕೇರಳದ ಶಬರಿಮಲೈ ದೇವಸ್ಥಾನ ಪ್ರವೇಶಕ್ಕೆ 10-50 ವರ್ಷದೊಳಗಿನ ಮಹಿಳೆಯರಿಗೆ ವಿಧಿಸಲಾಗಿರುವ ನಿಷೇಧವನ್ನು ತೆರವುಗೊಳಿಸುವಂತೆ ದೇವಸ್ಥಾನದ ಆಡಳಿತ ಮತ್ತು ಧರ್ಮಾಧಿಕಾರ ಮಂಡಳಿ (ದೇವಸ್ವ ಮಂಡಳಿ)ಗೆ ನಿರ್ದೇಶನ ನೀಡಬೇಕೆಂಬುದು.

ಈ ಪ್ರಕಣದ ನ್ಯಾಯಿಕ ಹಿನ್ನೆಲೆ ಹೀಗಿದೆ:

1991ರಲ್ಲಿ ಕೇರಳ ಹೈಕೋರ್ಟ್ ಇದೇ ವಿಚಾರವಾಗಿ ದಾಖಲಾಗಿದ್ದ ಪ್ರಕರಣವೊಂದನ್ನು ವಜಾ ಮಾಡಿ, ಈಗಿರುವಂತೆಯೇ ಧಾರ್ಮಿಕ ನಿಷೇಧವನ್ನು ಮುಂದುವರೆಸುವಂತೆ ದೇವಸ್ವ ಮಂಡಳಿಗೆ ನಿರ್ದೇಶನ ನೀಡಿರುತ್ತದೆ. ಇದಕ್ಕೆ ಇರುವ ತಾಂತ್ರಿಕ ತಳಹದಿ 1965ರಲ್ಲಿ ಕೇರಳ ಸರ್ಕಾರ ಜಾರಿಮಾಡಿರುವ ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ 'ಕೇರಳ ಹಿಂದೂ ಸಾರ್ವಜನಿಕ ಪೂಜಾ ಸ್ಥಳಗಳ (ಪ್ರವೇಶದ ಅಧಿಕೃತತೆ) ಕಾಯ್ದೆ'. ಆ ಕಾಯ್ದೆಯ ಸೆಕ್ಷನ್ 3(ಬಿ) ಹೇಳುವಂತೆ, 'ಮಹಿಳೆಯರು, ಸಾಮಾಜಿಕ ನಡವಳಿಕೆ ಹಾಗೂ ಆಯಾ ಪೂಜಾ ಸ್ಥಳಗಳ ಧಾರ್ಮಿಕ ಪರಂಪರೆಯ ಅನುಸಾರವಾಗಿ ದೇವಾಲಯದೊಳಕ್ಕೆ ಪ್ರವೇಶಿಸಲು ಅನರ್ಹರಿರುವ ಸಮಯದಲ್ಲಿ ಅವರ ದೇವಸ್ಥಾನ ಪ್ರವೇಶವನ್ನು ನಿರ್ಬಂಧಿಸಬಹುದು'. ಈ ವಿಧಿಯ ಅನ್ವಯ ಕೇರಳ ಹೈಕೋರ್ಟ್ ಪ್ರಕರಣವನ್ನು ವಜಾಗೊಳಿಸಿತ್ತು.

ಆದರೆ, ಇದಾದನಂತರವೂ ಈ ವಿಚಾರವಾಗಿ ಮುಂದುವರೆದ ಚರ್ಚೆಗಳು, 2015ರಲ್ಲಿ ಕೆಲವರು ಹೈಕೋರ್ಟ್‌ನ ತೀರ್ಪನ್ನು ಪ್ರಶ್ನಿಸಿ ಅಪೆಕ್ಸ್ ಮೆಟ್ಟಿಲೇರುವುದರ ಮೂಲಕ ಮತ್ತೆ ಸಾರ್ವಜನಿಕ ವಾಹಿನಿಗೆ ಬಂದವು. ಈ ಸಂದರ್ಭದಲ್ಲಿ ಆಗಷ್ಟೇ ದೇವಸ್ಥಾನದ ದೇವಸ್ವ ಮಂಡಳಿಯ ಮುಖ್ಯಾಧಿಕಾರಿಯಾಗಿ ಅಧಿಕಾರಕ್ಕೇರಿದ್ದ ವ್ಯಕ್ತಿಯೊಬ್ಬರು ನೀಡಿದ ವಿವಾದಾಸ್ಪದ ಹೇಳಿಕೆ ಈ ವಿಚಾರದಲ್ಲಿ ಆಡಳಿತ ಮಂಡಳಿಯ ನಿಲುವಿನ ಮುಂದೆ ಪ್ರಶ್ನಾರ್ಥಕ ಚಿಹ್ನೆಗಳನ್ನೆಬ್ಬಿಸಿತು. ಆತ, ಇದೊಂದು ಧಾರ್ಮಿಕ ಸಂಪ್ರದಾಯವಾದ ಕಾರಣದಿಂದ ಪಾಲಿಸುತ್ತಿದ್ದೇವೆ ಎಂದು ಹೇಳಿದ್ದರೆ ಪ್ರಕರಣ ಬೇರೆಯೇ ತಿರುವು ಪಡೆಯುತ್ತಿತ್ತೇನೋ; ಆದರೆ, ದೇವಸ್ವ ಮಂಡಳಿಯ ಮುಖ್ಯಾಧಿಕಾರಿ "ಇಂದು ಸಂಶೋಧಿತವಾಗಿ ಬಳಕೆಗೆ ಬಂದಿರುವ ಮುಚ್ಚಿಟ್ಟ ಶಸ್ತ್ರಾಸ್ತ್ರಗಳನ್ನು ಪತ್ತೆಹಚ್ಚುವ ವೆಪನ್ ಡಿಟೆಕ್ಟರ್‌ಗಳಂತೆ, ಮಹಿಳೆಯರು ಮುಟ್ಟಾಗಿದ್ದಾರೋ ಇಲ್ಲವೋ ಎಂಬುದನ್ನು ಪತ್ತೆ ಹಚ್ಚುವ ಯಂತ್ರ ಬಂದರೆ, ಆ ನಂತರ ಬೇಕಾದರೆ 10-50 ವರ್ಷದೊಳಗಿನ ಮಹಿಳೆಯರಿಗೆ ದೇವಾಲಯಕ್ಕೆ ಪ್ರವೇಶ ನೀಡುವ ಬಗ್ಗೆ ಆಲೋಚಿಸಬಹುದು" ಎಂದು ಹೇಳಿಕೆ ನೀಡಿದರು.

ಇದು ಚರ್ಚೆಯ ಕಿಡಿಯನ್ನೇ ಹೊತ್ತಿಸಿತು. ನವೆಂಬರ್ 21ರಂದು ಕೇರಳದ ಈ ಪ್ರಕರಣದ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ 'ಹ್ಯಾಪಿ ಟು ಬ್ಲೀಡ್' (ರಕ್ತಸ್ರಾವದ ಬಗ್ಗೆ ಸಂತೋಷವಿದೆ) ಆಂದೋಲನ ಆರಂಭವಾಯಿತು. ಇದಕ್ಕೆ ಚಾಲನೆ ನೀಡಿದ ಯುವತಿಯೊಬ್ಬಳು, "ದೇವಸ್ವ ಮಂಡಳಿಯ ಅಧ್ಯಕ್ಷ ಮತ್ತೆ ಪುನಃ ಭಾರತದ ಪಿತೃಪ್ರಧಾನ ಮುಖವನ್ನು ಹುಸಿಯಾಗಿ ಎತ್ತಿತೋರಿಸಿದ್ದಾನೆ. ಇಂತಹ ಪಿತೃಪ್ರಧಾನತೆಯ ಮೇಲೆ ನಾನು ಸಂತೋಷವಾಗಿ ರಕ್ತಸ್ರಾವವನ್ನು ಹರಿಸುತ್ತೇನೆ" ಎಂಬರ್ಥದ ಹೇಳಿಕೆಯನ್ನು ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದಳು. ಇದನ್ನು ಆರಂಭಿಸಿದ ಯುವತಿಯರ ತಂಡ, ಈ ಹೇಳಿಕೆ ಮತ್ತು ಅದರ ಹಿನ್ನೆಲೆಯಲ್ಲಿರುವ ಪಿತೃಪ್ರಧಾನತೆಯನ್ನು ವಿರೋಧಿಸುವ ಎಲ್ಲಾ ಮಹಿಳೆಯರೂ 'ಹ್ಯಾಪಿ ಟು ಬ್ಲೀಡ್' ಹೇಳಿಕೆಯೊಂದಿಗೆ ತಮ್ಮ ಒಂದು ಫೋಟೋ ತೆಗೆದು ಜಾಲತಾಣದೊಳಕ್ಕೆ ಕಳುಹಿಸಲು ಮನವಿ ಮಾಡಿದರು. ನೂರಾರು ಸಂಖ್ಯೆಯಲ್ಲಿ ಫೋಟೋ ಗಳು ರಾಶಿಯಾದವು. ಆಧುನಿಕತೆಯ ಉಳಿದೆಲ್ಲಾ ಪ್ರಯೋಜನಗಳನ್ನೂ ಧಾರಾಳವಾಗಿ ಪಡೆಯುತ್ತಿರುವ ಭಾರತೀಯರು ಅದೇ ಸಮಯದಲ್ಲಿ ಅತ್ಯಂತ ನೈಸರ್ಗಿಕವೂ, ಸಹಜವೂ ಆದ ಮುಟ್ಟಿನಂತಹ ಪ್ರಕ್ರಿಯೆಯನ್ನು ಈಗಲೂ ತಿರಸ್ಕಾರದಿಂದ ನೋಡುವ ಅವೈಜ್ಞಾನಿಕ ದೃಷ್ಟಿಯನ್ನೂ, ಮುಟ್ಟಾಗುವ ಇಡೀ ಸಮುದಾಯವನ್ನೂ, ಮುಟ್ಟನೊಂದಿಗೆ ಹೆಣೆದುಕೊಂಡಿರುವ ಸ್ಯಾನಿಟರಿ ಪ್ಯಾಡ್‌ನಂತಹ ವಸ್ತುಗಳನ್ನೂ ಸದಾ ಲೇವಡಿ ಮಾಡಲು ಕಾಯುವ ಪುರುಷಪ್ರಧಾನ ಮನಸ್ಥಿತಿಯನ್ನೂ ವಿರೋಧಿಸುತ್ತಾ, 'ಅವೆಲ್ಲವೂ ನಮ್ಮ ಬದುಕಿನ ಅವಿಭಾಜ್ಯ ಅಂಗ ಮತ್ತು ಅದರ ಬಗ್ಗೆ ನಮಗೆ ಸಂತೋಷವಿದೆ' ಎಂಬ ಸಂದೇಶವನ್ನು ಇದರಲ್ಲಿ ಪಾಲ್ಗೊಂಡ ಎಲ್ಲಾ ಹೆಣ್ಣುಮಕ್ಕಳೂ ಸಮಾಜಕ್ಕೆ ನೀಡಿದರು. ಇವರ ಆಂದೋಲನವನ್ನು ಬೆಂಬಲಿಸುವ ಹುಡುಗರು 'ಸ್ಮ್ಯಾಶ್ ಪೇಟ್ರಿಯಾರ್ಕಿ (ಪುರುಷಾಧಿಪತ್ಯವನ್ನು ಧ್ವಂಸಗೊಳಿಸಿ)' ಎಂಬ ಹೆಸರಿನಲ್ಲಿ ತಮ್ಮ ಫೋಟೋಗಳನ್ನು ತೆಗೆದು ಕಳಿಸಿದರು. ಆ ತಿಂಗಳಿಡೀ ಈ ಆಂದೋಲನ ಭಾರತದ ಸಾಮಾಜಿಕ ಜಾಲತಾಣಗಳ ಟ್ರೆಂಡ್ ಆಗಿತ್ತು. ಇದೀಗ ಇದೇ ಪ್ರಕರಣ ಕಾನೂನಾತ್ಮಕ ತಳಹದಿಯೊಂದಿಗೆ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

ಧಾರ್ಮಿಕ ವಿಚಾರವೊಂದು ಹೀಗೆ ನ್ಯಾಯಾಲಯದ ಮೆಟ್ಟಿಲೇರುತ್ತಿರುವುದು ಇದು ಮೊದಲೇನೂ ಅಲ್ಲ. ಆದರೆ, ಗಂಡು-ಹೆಣ್ಣಿನ ತಾರತಮ್ಯದ ನೆಲೆಯಲ್ಲಿ ನಡೆಯುತ್ತಿರುವ ಆಚರಣೆಯೊಂದರ ವಿರುದ್ಧ ಮೊಕದ್ದಮೆ ದಾಖಲಾಗಿರುವುದು, ಅಷ್ಟಕ್ಕೇ ಮುಗಿಯದೆ ಈ ವಿಷಯ ಸಾರ್ವಜನಿಕರ ನಡುವೆ ಬಹುಮುಖ್ಯವಾದ ಚರ್ಚೆಯನ್ನು ಹುಟ್ಟುಹಾಕಿರುವುದು ಅಪರೂಪದ ವಿಷಯ.

ದೇವಸ್ವ ಮಂಡಳಿಯು ಕೋರ್ಟಿಗೆ ನೀಡಿರುವ "ಇದು ಸುಮಾರು ಒಂದೂವರೆ ಶತಮಾನ (1500) ವರ್ಷ ಹಿಂದಿನಿಂದಲೂ ಚಾಲ್ತಿಯಲ್ಲಿರುವ ಸಂಪ್ರದಾಯ" ಎಂಬ ಹೇಳಿಕೆಯ ಸತ್ಯಾಸತ್ಯತೆಯನ್ನು ಮೂರು ಜನ ನ್ಯಾಯಾಧೀಶರಿರುವ ತಂಡ ಪ್ರಶ್ನಿಸಿದೆ! ನ್ಯಾಯಾಧೀಶರ ತಂಡದ ಮುಖ್ಯ ನ್ಯಾಯಾಧೀಶರಾದ ಜಸ್ಟೀಸ್ ದೀಪಕ್ ಮಿಶ್ರಾರವರು "1500 ವರ್ಷಗಳಿಂದಲೂ 10-50 ವರ್ಷದೊಳಗಿನ ಯಾವ ಹೆಣ್ಣುಮಗಳೂ ದೇವಸ್ಥಾನವನ್ನು ಪ್ರವೇಶಿಸಿಲ್ಲ ಹಾಗೂ ಅದನ್ನು ಧಾರ್ಮಿಕವಾಗಿ ಆಗಿನಿಂದಲೂ ನಿಷೇಧಿಸಲಾಗಿತ್ತು ಎಂಬುದಕ್ಕೆ ಸಾಕ್ಷ್ಯಾಧಾರವೇನಿದೆ? ಇದ್ದರೆ ಅದನ್ನು ಕೋರ್ಟಿನ ಮುಂದೆ ಹಾಜರುಪಡಿಸಬೇಕು" ಎಂದು ಹೇಳಿ, ಕೇರಳ ಸರ್ಕಾರ ಹಾಗೂ ದೇವಸ್ವ ಮಂಡಳಿಯನ್ನು ಪೇಚಿಗೆ ಸಿಲುಕಿಸಿದ್ದಾರೆ. ಮುಂದಿನ ಹಿಯರಿಂಗ್‌ನಲ್ಲಿ ಈ ಕುರಿತ ಹೊಸ ಹೇಳಿಕೆಯನ್ನು ಸಲ್ಲಿಸುವಂತೆಯೂ ಆದೇಶಿಸಿದ್ದಾರೆ.

ಈ ಮೊಕದ್ದಮೆಯನ್ನು ದಾಖಲಿಸಿರುವ ವಕೀಲರ ತಂಡವು ನೇರವಾಗಿ ಸಂವಿಧಾನದ ನೆರವು ಪಡೆದಿದೆ. ಸಂವಿಧಾನದ ಆರ್ಟಿಕಲ್ 14 ಹೇಳುವ 'ಕಾನೂನಿನ ಮುಂದೆ ಸಮಾನತೆ'ಯ ತತ್ವ ಹಾಗೂ ಆರ್ಟಿಕಲ್ 25 ಮತ್ತು 26 ಹೇಳುವ 'ಧಾರ್ಮಿಕ ಸ್ವಾತಂತ್ರ್ಯದ ತತ್ವ'ಗಳು ಈ ಆಚರಣೆಯಿಂದ ಉಲ್ಲಂಘನೆಗೊಳ್ಳುತ್ತವೆ ಎಂದು ವಕೀಲರು ವಾದಿಸಿದ್ದಾರೆ. ಜೊತೆಗೆ, ಕನ್ನಡದ ನಟಿ ಜಯಮಾಲಾ 1987ರಲ್ಲಿ ತಾನು ದೇವಾಲಯವನ್ನು ಪ್ರವೇಶಿಸಿದ್ದೆ ಎಂಬ ಹೇಳಿಕೆ ನೀಡಿದ್ದಕ್ಕೆ ಅವರಿಗೆ ಶಿಕ್ಷೆ ನೀಡುವ ಪ್ರಯತ್ನ ಮಾಡಿದ್ದನ್ನು ಹಾಗೂ ದೇವಾಲಯವನ್ನು 'ಶುದ್ಧಗೊಳಿಸಿದ್ದನ್ನು ಉಲ್ಲೇಖಿಸುತ್ತಾ ಇಂತಹ ವಿಚಾರಗಳಲ್ಲಿ ಅನುಸರಿಸಬೇಕಾದ ಖಚಿತ ನಿಯಮಾವಳಿಗಳನ್ನು ರಚಿಸಬೇಕೆಂದು ಸುಪ್ರೀಂ ಕೋರ್ಟ್‌ನ್ನು ಕೋರಿದ್ದಾರೆ.

ಆಶ್ಚರ್ಯಕರ ಸಂಗತಿಯೆಂದರೆ, ಈ ಪ್ರಕರಣ ದಾಖಲಾದ ಸುದ್ದಿ ಮಾಧ್ಯಮಗಳಲ್ಲಿ ಬಂದಕೂಡಲೇ, ಇದರ ವಿರುದ್ಧ ಸಾಕಷ್ಟು ಮಂದಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿ, ದೇವಸ್ವ ಮಂಡಳಿ ಹಾಗೂ ಕೇರಳ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಹೇಳಲಾಗದಿದ್ದಂತಹ ಕೆಲವು ಸಂಗತಿಗಳು, ಈ ಅನಿಸಿಕೆಗಳಲ್ಲಿ ಹೊರಬಿದ್ದಿವೆ! ಅವೆಲ್ಲದರ ಸಾರಾಂಶ ಇಷ್ಟು: "ಯಾವುದೇ ದೇವಾಲಯವಾದರೂ ಶುದ್ಧಿಯನ್ನು ಕಾಪಾಡುವುದು ಅಗತ್ಯ; ಧರ್ಮಶಾಸ್ತ (ಅಯ್ಯಪ್ಪ) ಬ್ರಹ್ಮಚಾರಿಯಾದುದರಿಂದ ಇದು ಇನ್ನೂ ಅಗತ್ಯ. ಆದ್ದರಿಂದ ಮುಟ್ಟಾಗುವ ಹೆಂಗಸರು ಬಂದು ಅದನ್ನು ಅಶುದ್ಧಗೊಳಿಸಲು ಬಿಡಬಾರದು" ಹಾಗೂ "ಶಬರಿಮಲೈಗೆ ಹೋಗುವವರು 41 ದಿನದ ವ್ರತ, ಬ್ರಹ್ಮಚರ್ಯ ಪಾಲನೆ ಮಾಡುವುದು ಕಡ್ಡಾಯ. ಆದ್ದರಿಂದ ಹೀಗೆ ವ್ರತಾಚರಣೆ ಮಾಡಿದಂತಹವರು, ಮಹಿಳೆಯರನ್ನು ಕಂಡಾಗ ಉದ್ರೇಕಗೊಳ್ಳುವ ಸಾಧ್ಯತೆ ಇರುತ್ತದೆ. ಆದ್ದರಿಂದ 10-50 ವರ್ಷದೊಳಗಿನ ಮಹಿಳೆಯರು ತಮ್ಮ ಹಿತಾಸಕ್ತಿಗಾಗಿಯೇ ದೇವಸ್ಥಾನದಿಂದ ದೂರ ಉಳಿಯುವುದೊಳಿತು......"

ಹಾಗಾದರೆ, ವ್ರತ ಮತ್ತು ಶುದ್ಧಿಯ ಆಚರಣೆ, ಮಾನಸಿಕ ನೈತಿಕ ಶುದ್ಧಿಯನ್ನೂ ಒಳಗೊಳ್ಳುವುದಿಲ್ಲವೇ? ಒಂದು ವೇಳೆ ವಾದದ ಕಾರಣಕ್ಕೆ ಮುಟ್ಟು ಅಪವಿತ್ರ ಎಂದೇ ಭಾವಿಸಿದರೂ, ಕೇವಲ 40 ದಿನ ಬ್ರಹ್ಮಚರ್ಯೆ ಪಾಲಿಸಿದ ಕಾರಣಕ್ಕೆ ಯಾವುದೇ ಮಹಿಳೆಯನ್ನು ಕಂಡರೂ ದಾರಿ ತಪ್ಪಬಹುದಾದ ಗಂಡಸು, ಮುಟ್ಟಿಗಿಂತಲೂ ಅಪವಿತ್ರನಲ್ಲವೇ? ಅಂತಹ ಅಪವಿತ್ರನನ್ನು ಸೇರಿಸಿಕೊಳ್ಳುವುದರಿಂದ ಬೆಟ್ಟ ಅಶುದ್ಧಗೊಳ್ಳುವುದಿಲ್ಲವೇ?

ಇಂತಹ ಹಲವು ಪ್ರಶ್ನೆಗಳು ಹುಟ್ಟಿ ನಾವು ಅವನ್ನು ಬಗೆಹರಿಸಿಕೊಳ್ಳುವುದಕ್ಕೂ ಮೊದಲೇ, ನಮಗೆ ಮತ್ತೊಂದು ಆಘಾತ ಕಾದಿದೆ! ಈ ದೇಶದ 'ಸಂಸ್ಕೃತಿ ರಕ್ಷಣೆ' ಮಾಡುವ ಹೊಣೆಯನ್ನು ಸ್ವಯಂಘೋಷಿತವಾಗಿ ಹೊತ್ತುಕೊಂಡ ಸಂಘಟನೆಯೂ ಕೂಡಾ ಇದೇ ಅರ್ಥದ ಹೇಳಿಕೆ ನೀಡುತ್ತದೆಂದರೆ ಆಘಾತವಾಗದೆ? ಕೇರಳದ ವಿಶ್ವ ಹಿಂದೂ ಪರಿಷತ್‌ನ ಘಟಕ "ಮಹಿಳೆಯರನ್ನು ಅಲ್ಲಿಗೆ ಹೋಗದಂತೆ ನಿರ್ಬಂಧಿಸಿರುವುದು ಅವರ ಸುರಕ್ಷತೆಗಾಗಿಯೇ ಎಂಬುದನ್ನು ಸುಪ್ರೀಂ ಕೋರ್ಟ್‌ಗೆ ಮನವರಿಕೆ ಮಾಡಿಕೊಡಲಾಗುವುದು" ಎಂಬ ಹೇಳಿಕೆ ನೀಡುವ ಮೂಲಕ ನೈತಿಕ ಅಧಃಪತನವನ್ನು ಸಮರ್ಥಿಸಿಕೊಂಡಿದೆ!

ಮಹಿಳೆಯರ ದೇವಾಲಯ ಪ್ರವೇಶದ ವಿಷಯ ಬಂದಾಗ, ಇಂತಹದೇ ಮತ್ತೊಂದು ಸನ್ನಿವೇಶ ಭಾರತದ ಚರಿತ್ರೆಯಲ್ಲಿ ದಾಖಲಾಗಿರುವುದನ್ನು ಮರೆಯಲು ಸಾಧ್ಯವಿಲ್ಲ,



ಸ್ವತಃ ಅಂಬೇಡ್ಕರ್‌ರವರು ದಲಿತರ ದೇವಾಲಯ ಪ್ರವೇಶದ ಪ್ರಸಂಗದಲ್ಲಿ ತಳೆದ ನಿಲುವು ಥಟ್ಟನೆ ನೆನಪಾಗುತ್ತದೆ. 1934ರಲ್ಲಿ ಗಾಂಧೀಜಿಯವರು ಡಾ.ಸುಬ್ಬರಾಯನ್ ಎಂಬುವವರು ತರಲು ಉದ್ದೇಶಿಸಿದ್ದ ದಲಿತರಿಗೂ ದೇವಸ್ಥಾನ ಪ್ರವೇಶವನ್ನು ಸಾಧ್ಯವಾಗಿಸುವಂತಹ ಖಾಸಗಿ ಮಸೂದೆಯ ರಚನೆಗೆ ನೆರವಾಗುವಂತೆ ಅಂಬೇಡ್ಕರ್ ಅವರನ್ನು ಕೇಳಿರುತ್ತಾರೆ. ಅದು ಯೆರವಾಡಾ ಜೈಲಿನಲ್ಲಿದ್ದ ಗಾಂಧಿ ಉಪವಾಸದ ಹಟದಿಂದ ಪೂನಾ ಒಪ್ಪಂದಕ್ಕೆ ಅಂಬೇಡ್ಕರರನ್ನು ಒಪ್ಪಿಸಿದ್ದ ಸಂದರ್ಭ. ಗಾಂಧೀಜಿಯವರ ಮನವಿಯನ್ನು ಅಂಬೇಡ್ಕರ್ ಸ್ಪಷ್ಟವಾಗಿ ನಿರಾಕರಿಸುತ್ತಾರೆ. "ದೇವಾಲಯಗಳಿಗೆ ಪ್ರವೇಶಿಸುವುದರಿಂದ ನನ್ನ ಜನರ ವಾಸ್ತವಿಕ ಅಗತ್ಯಗಳಲ್ಲಿ ಯಾವ ಬದಲಾವಣೆ ಬರಬಹುದು?" ಎಂದು ಪ್ರಶ್ನಿಸುತ್ತಾರೆ. ಜೊತೆಗೆ ಖಚಿತವಾದ ಮಾತುಗಳಲ್ಲಿ "ದಲಿತರ ದೇವಾಲಯ ಪ್ರವೇಶದ ಅಗತ್ಯವಿದ್ದರೆ ಅದು ಹಿಂದೂ ಧರ್ಮಕ್ಕಿದೆಯೇ ಹೊರತು ದಲಿತರಿಗಲ್ಲ; ಇಂದು ತಮ್ಮ ವಾಸ್ತವಿಕ ಬದುಕಿನ ಅಗತ್ಯಗಳನ್ನು ಅರಿತಿರುವ ದಲಿತರು ದೇವಸ್ಥಾನ ಪ್ರವೇಶಕ್ಕಾಗಿ ಆಗ್ರಹಿಸಲಾರರು. ಅದರಿಂದ ಅವರ ನೈಜ ಬದುಕಿನಲ್ಲಿ ಬರುವ ಬದಲಾವಣೆಯೇನೂ ಇಲ್ಲ. ಆದರೆ, ಈ ಧರ್ಮ ತಮ್ಮನ್ನು ಹೊರಗಿಟ್ಟಿದೆ ಎಂಬ ಅರಿವು ಖಂಡಿತವಾಗಿ ಅವರಲ್ಲಿ ಬರುತ್ತದೆ ಹಾಗೂ ಭಾರತದ ಇತಿಹಾಸದಲ್ಲಿ ಈ ಹಿಂದೆಯೂ ಆಗಿರುವಂತೆ ಆ ಅರಿವನ್ನು ಹೊತ್ತ ಸಮುದಾಯ ಹಿಂದೂ ಧರ್ಮದಿಂದ ಹೊರನಡೆಯುತ್ತದೆ" ಎಂದು ಎಚ್ಚರಿಸುತ್ತಾರೆ.

ನಂತರದಲ್ಲಿ 1934ರ ಮಾರ್ಚ್‌ನಲ್ಲಿ ನಡೆಯುವ ಕಾಲಾರಾಮ್ ಮಂದಿರ ಪ್ರವೇಶದ ಚಳವಳಿಯ ಸಂದರ್ಭದಲ್ಲೂ ಈ ವಿಚಾರ ಮತ್ತೆ ಪ್ರಸ್ತಾಪವಾಗಿದೆ. ಈ ಹೋರಾಟವನ್ನು ತಾವು ಆರಂಭಿಸಿದ್ದು ಏಕೆ ಎಂಬುದರ ಬಗ್ಗೆ ಅಂಬೇಡ್ಕರ್ ಕಾಲಾರಾಮ್ ಮಂದಿರ ಪ್ರವೇಶ ಹೋರಾಟದ ನೇತಾರರಾಗಿದ್ದ ಭಾವೂರಾವ್‌ರವರಿಗೆ ಹೀಗೆ ಬರೆಯುತ್ತಾರೆ "ನಾನು ಈ ದೇವಾಲಯ ಪ್ರವೇಶದ ಹೋರಾಟ ಆರಂಭಿಸಿದ್ದು ನನ್ನ ಜನರು ಈ ಸಮಾಜದಲ್ಲಿ ತಮ್ಮ ಸ್ಥಾನ ಏನೆಂಬುದರ ಸಂಪೂರ್ಣ ಅರಿವನ್ನು ಪಡೆಯಬೇಕೆಂಬ ಉದ್ದೇಶದಿಂದ. ಈ ಪ್ರಯತ್ನದ ಹಿನ್ನೆಲೆಯಲ್ಲಿ ಎರಡು ಅಂಶಗಳಿವೆ. ಒಂದು ವಾಸ್ತವಿಕ ಬದುಕು ಹಾಗೂ ಮತ್ತೊಂದು ಆಧ್ಯಾತ್ಮಿಕ ಅಗತ್ಯ. ನೈಜ ಬದುಕಿಗೆ ಸಂಬಂಧಿಸಿದಂತೆ ಹೇಳುವುದಾದರೆ, ದಲಿತರು ಬದುಕು ನಡೆಸುವುದಕ್ಕಾಗಿ ದೇವಾಲಯ ಪ್ರವೇಶ ಬೇಕೆಂದೇನೂ ಕೇಳಲಾರರು. ಬ್ರಿಟಿಷರ ಕ್ಲಬ್‌ಗಳ ಮುಂದೆ 'ನಾಯಿಗಳು ಹಾಗೂ ಭಾರತೀಯರಿಗೆ ಪ್ರವೇಶವಿಲ್ಲ' ಎಂಬ ಫಲಕ ನೋಡಿದರೆ, ಹಿಂದೂಗಳೇನೂ ಅಂತಹ ಕ್ಲಬ್‌ಗಳ ಪ್ರವೇಶಕ್ಕೆ ಹೋರಾಡುವುದಿಲ್ಲವಲ್ಲ, ಹಾಗೆಯೇ ಇದು. ಆದರೆ, ಆಧ್ಯಾತ್ಮಿಕ ದೃಷ್ಟಿಯಿಂದ ನೋಡುವುದಾದರೆ ಅವರು ದೇವಾಲಯ ಪ್ರವೇಶದ ಬಯಕೆಯನ್ನು ಹೊಂದಿರಬಹುದು. ಅದನ್ನು ನಮಗೆ ದೊರಕಿಸಲು ಪ್ರಯತ್ನಿಸುತ್ತಿರುವ ಹಿಂದೂಗಳನ್ನು ಬೆಂಬಲಿಸಲು ನಾವು ಒಂದು ಷರತ್ತನ್ನು ಹಾಕಿಕೊಳ್ಳಬೇಕಿದೆ. ಏನೆಂದರೆ, ಅವರ ಪ್ರಯತ್ನ ಕೇವಲ ದೇವಾಲಯ ಪ್ರವೇಶಕ್ಕೇ ಸೀಮಿತವಾದರೆ ನಮಗೆ ಅದರ ಅಗತ್ಯವಿಲ್ಲ, ಒಂದು ವೇಳೆ ಅವರು ಮುಂದುವರೆದು ದೇವಾಲಯ ಪ್ರವೇಶದ ನಂತರ ಹಿಂದೂ ಧರ್ಮದಿಂದ ಅಸ್ಪೃಶ್ಯತೆಯನ್ನೇ ಕಿತ್ತುಹಾಕುವುದಾದರೆ ನಮಗೆ ಅಂತಹ ಆಧ್ಯಾತ್ಮ ಅಗತ್ಯವಿದೆ. ಹಿಂದೂ ಧರ್ಮವು ತಾನು ವಿಶ್ವದ ಇತರೆಲ್ಲಾ ಧರ್ಮಗಳು ಹೊಂದಿರುವಂತೆ, ಬೋಧನೆಯಲ್ಲಾದರೂ ಸಾಮಾಜಿಕ ನ್ಯಾಯ ಹಾಗೂ ಸಮಾನತೆಯನ್ನು ಒಳಗೂಡಿಕೊಳ್ಳಬೇಕಿರುವುದು ಅದರದ್ದೇ ಅಗತ್ಯವೇ ಹೊರತು, ಭಾರತದ ದಲಿತ ಸಮುದಾಯದ ಅಗತ್ಯವಲ್ಲ" ಎಂದು ಅಗಾಧವಾದ ಸ್ಪಷ್ಟತೆಯೊಂದಿಗೆ ವಾದಿಸಿದರು.

ಬಹುಶಃ ಈಗಿನ ಸನ್ನಿವೇಶದಲ್ಲೂ ಈ ಪ್ರಶ್ನೆ ಪ್ರಸ್ತುತ: ಮಹಿಳೆಯರ ಶಬರಿಮಲೈ ಪ್ರವೇಶ ಯಾತಕ್ಕಾಗಿ? ಅದು ಅವರ ನೈಜ ಬದುಕಿನ ಅಗತ್ಯವೇ ಅಥವಾ ಇನ್ನೇನು...?

ಇಂತಹ ಪ್ರಶ್ನೆಗಳು ಬಹಳ ಜಟಿಲವಾದವು! ಏಕೆಂದರೆ, ನೈಜ ಬದುಕಿನ ಅಗತ್ಯ ಎಂಬುದನ್ನು ಎಲ್ಲಿಗೆ ಮಿತಿಗೊಳಿಸಬೇಕು? ಆಧ್ಯಾತ್ಮಿಕತೆ (ಸ್ಪಿರಿಚುವಾಲಿಟಿ ಎಂಬ ಅರ್ಥದಲ್ಲಿ) ಬದುಕಿನ ಅಗತ್ಯ ಹೌದೇ ಅಲ್ಲವೇ? ಇದಕ್ಕೊಂದು ಸಾರ್ವಜನಿಕ ಮಾನದಂಡ ಇರಲು ಸಾಧ್ಯವೇ ಅಥವಾ ಇದು ಪ್ರತೀ ವ್ಯಕ್ತಿಗೂ ಅನನ್ಯವಾದ ಖಾಸಗಿ ನಿರ್ಧಾರವೇ? ದೇವಸ್ಥಾನ ಪ್ರವೇಶ ವಿವಾದವಾದಾಗ ನಟಿ ಜಯಮಾಲಾ ನೀಡಿದ ಹೇಳಿಕೆಯಂತೆ "ಪೂಜೆಯನ್ನೂ ಒಳಗೊಂಡು ಎಲ್ಲವನ್ನೂ ಅತ್ಯಂತ ಶ್ರದ್ಧೆಯಿಂದ ಮಹಿಳೆಯರು ಮಾಡುತ್ತಾರಾದ ಕಾರಣಕ್ಕಾದರೂ ಅವರಿಗೆ ಶಬರಿಮಲೈಗೆ ಪ್ರವೇಶವಿರಬೇಕು" ಎಂಬುದನ್ನು ನಿಯಮ ರಚಿಸುವವರು ಪರಿಗಣಿಸಲು ಸಾಧ್ಯವೇ? ಈ ಎಲ್ಲಾ ಪ್ರಶ್ನೆಗಳ ವಿಚಾರದಲ್ಲಿ ಕೊನೆ ಮೊದಲಿಲ್ಲದಂತೆ ಸಾರ್ವಜನಿಕ ಚರ್ಚೆಗಳು ನಡೆಯಲು ಸಾಧ್ಯವಿದೆ. ಆದರೆ, ಅಂಬೇಡ್ಕರ್‌ರವರು ಪ್ರಸ್ತಾಪಿಸಿದ ಮತ್ತೊಂದು ಆಯಾಮ ದಿಂದ ಈ ವಿಚಾರವನ್ನು ನೋಡಿದರೆ, ದಾರಿ ಸ್ಪಷ್ಟವಾಗುತ್ತದೆ...!

ಇಲ್ಲಿರುವ ಪ್ರಶ್ನೆ ಮಹಿಳೆಯರಿಗೆ ಶಬರಿಮಲೈ ಪ್ರವೇಶ ಅಗತ್ಯವಿದೆಯೇ ಇಲ್ಲವೇ ಎಂಬುದಲ್ಲ, ಭಾರತದ ಸಮಾಜವು ಪ್ರಜಾತಾಂತ್ರೀಕರಣಗೊಳ್ಳುವ ಅಗತ್ಯವಿಲ್ಲವೇ ಎಂಬುದು! ಮಹಿಳೆಯರ ಸಾರ್ವಜನಿಕ ಪಾಲ್ಗೊಳ್ಳುವಿಕೆಯ ಹಕ್ಕೊತ್ತಾಯ ಬಂದಾಗಲೆಲ್ಲಾ-ಅದು ದೇವಸ್ಥಾನ ಪ್ರವೇಶವಿರಲಿ ಅಥವಾ ಲೋಕಸಭೆ ಪ್ರವೇಶವಿರಲಿ- ಮಹಿಳೆಯರು ನಿರ್ಬಲರಾಗಿರುತ್ತಾರೆ ಅಥವಾ ಅವರು ಅಸಮರ್ಥರಾಗಿ ರುತ್ತಾರೆ ಅಥವಾ ಮಹಿಳೆಯರು ಪುರುಷರನ್ನು ಪ್ರಚೋದಿಸುತ್ತಾರೆ ಅಥವಾ ಅವರು ಅಪವಿತ್ರರಾಗಿರುತ್ತಾರೆ ಅಥವಾ ಸಂಪ್ರದಾಯಗಳಲ್ಲಿ ಮಹಿಳೆಗೆ ಕೆಳಗಿನ ಸ್ಥಾನವಿದೆ.......ಇವೇ ಮುಂತಾದ ಕಾರಣಗಳನ್ನೇ ಶತಮಾನಗಳಿಂದಲೂ ಮುಂದಿಡುತ್ತ ಬರಲಾಗಿದೆ.

ಇಂದು ಶಬರಿಮಲೈಗೆ ಮಹಿಳೆಯರಿಗೆ ಪ್ರವೇಶಕ್ಕೆ ಅನುವು ಮಾಡಿಕೊಡುವ ಅಗತ್ಯವಿರುವುದು ಈ ಸಮಾಜಕ್ಕೆ; ತನ್ನನ್ನು ತಾನು 'ನಾಗರಿಕ ಸಮಾಜ' ಎಂದು ಕರೆದುಕೊಳ್ಳುವ ಅರ್ಹತೆ ಗಳಿಸಿಕೊಳ್ಳುವುದಕ್ಕೆ!!


● ಮಲ್ಲಿಗೆ
ಮಹಿಳಾ ಮುನ್ನಡೆ, ಮಂಡ್ಯ


ಪಾಯ್ಸನ್ ಗೋಪಾಲನ ಸೀಕ್ರೆಟ್ ಲಾಕರ್!

ರಾಮನಗರದ ಖತರ್‌ನಾಕ್ ಕಳ್ಳ ಗೋಪಾಲ ಬೆಂಗಳೂರಿಗೆ ಬಂದು ಸುಮಾರು 42 ಮನೆಗಳಲ್ಲಿ ತನ್ನ ಕೈಚಳಕ ಮೆರೆದಿದ್ದ. ಆದರೆ ಈತನಕ ಈತನಿಗೆ ನ್ಯಾಯಾಲಯದಲ್ಲಿ ಶಿಕ್ಷೆಯಾಗಿರಲಿಲ್ಲ! ಏಕೆಂದರೆ ಕಳ್ಳತನದ ಆರೋಪದ ಮೇಲೆ ಈತನನ್ನು ಬಂಧಿಸಿದ ಪೊಲೀಸರಿಗೆ ಈತ ಕದ್ದ ಮಾಲು ಮಾತ್ರ ಸಿಕ್ಕಿರಲೇ ಇಲ್ಲ! ಮಾಲೇ ಜಪ್ತಿಯಾಗದ ಮೇಲೆ ಶಿಕ್ಷೆ ಜಾರಿಗೊಳಿಸುವುದು ಹೇಗೆ? ಐನಾತಿ ಕಳ್ಳ ಗೋಪಾಲ ಜೈಲಿಗೆ ಹೋದಷ್ಟೇ ವೇಗದಲ್ಲಿ ಕೇಸಿನಿಂದ ಖುಲಾಸೆಯಾಗಿ ವಾಪಸ್ ಬರುತ್ತಿದ್ದ! ಹಾಗಾದರೆ ಈತ ಕದ್ದ ಮಾಲುಗಳು ಎಲ್ಲಿರುತ್ತಿದ್ದವು?

ಈತನ ಹೆಸರು ಗೋಪಾಲ. ಇವನು ರಾಮನಗರದವನು. ಮನೆಗಳ್ಳನಾದ ಈತನನ್ನು ಪೊಲೀಸರು ಬಂಧಿಸಲು ಬಂದಕೂಡಲೇ ಫಿನಾಯಿಲ್ ಕುಡಿದು ಬಿಡುತ್ತಿದ್ದ! ಹೀಗಾಗಿ ಈತನಿಗೆ ಪಾಯ್ಸನ್ ಗೋಪಾಲ ಅಂತ ಅಡ್ಡ ಹೆಸರು ಸಿಕ್ಕಿದೆ!


ಇಂತಿಪ್ಪ ಪಾಯ್ಸನ್ ಗೋಪಾಲ ಸ್ವಂತ ಊರಾದ ರಾಮನಗರದಲ್ಲಿ ಒಮ್ಮೆಯೂ ಕಳ್ಳತನ ಮಾಡಿದವನಲ್ಲ. ಬದಲಾಗಿ ಬೆಂಗಳೂರಿಗೆ ಬಂದು ತನ್ನ ಕೈ ಚಳಕ ಮೆರೆಯುತ್ತಿದ್ದ. ಪೊಲೀಸ್ ದಾಖಲೆಗಳ ಪ್ರಕಾರ ಇಲ್ಲಿಯತನಕ ಈತ 42 ಮನೆಗಳನ್ನು ದೋಚಿದ್ದ. ಆದರೆ ಈ ಪೈಕಿ ನ್ಯಾಯಾಲಯದಲ್ಲಿ ಒಂದೇ ಒಂದು ಕೇಸು ನಿಂತಿರಲಿಲ್ಲ! ಎಲ್ಲಾ ಕೇಸುಗಳಿಂದಲೂ ಖುಲಾಸೆಯಾಗಿ ಹೊರಬರುತ್ತಿದ್ದ ಗೋಪಾಲ. ಈ ಪವಾಡ ಹೇಗಪ್ಪಾ ಸಾಧ್ಯವಾಗುತ್ತಿದ್ದೆಂದರೆ... ಕಳ್ಳತನದ ಆರೋಪದ ಮೇಲೆ ಈತನನ್ನು ಬಂಧಿಸುತ್ತಿದ್ದ ಪೊಲೀಸರಿಗೆ ಇಲ್ಲಿಯತನಕ ಈತ ಕದ್ದಿದ್ದ ಮಾಲನ್ನು ಜಪ್ತಿ ಮಾಡಲಾಗಿರಲಿಲ್ಲ! ಕಳ್ಳತನದ ಆರೋಪ ಹೊರಿಸಿದರಷ್ಟೇ ಸಾಲದು, ಈತ ಕದ್ದಿದ್ದಾನೆ ಎನ್ನುವುದಕ್ಕೆ ಮಾಲುಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಬೇಕು. ಆಗ ಮಾತ್ರ ಮಾನ್ಯ ನ್ಯಾಯಾಲಯಕ್ಕೆ ಶಿಕ್ಷೆ ಜಾರಿಗೊಳಿಸಲು ಸಾಧ್ಯ.


ಪಾಯ್ಸನ್ ಗೋಪಾಲ


ಕಮೀಷನರ್ ಮೇಘರಿಕ್

ಪೊಲೀಸರ ಪೇಚು!

ಗೋಪಾಲ ಕಳ್ಳತನವೆಸಗಿ ಪೊಲೀಸರು ತನ್ನನ್ನು ಹುಡುಕಿಕೊಂಡು ಬರುವಷ್ಟರಲ್ಲಿ ಕದ್ದ ಮಾಲನ್ನು ಅದೆಲ್ಲೋ ಬಚ್ಚಿಟ್ಟುಬಿಟ್ಟಿರುತ್ತಿದ್ದ! ಪೊಲೀಸರು ಈತನ ಮನೆಗೆ ಬಂದು ಲಾಠಿ ಝಳಪಿಸಿದ ಕೂಡಲೇ ಫಿನಾಯಿಲ್ ಕುಡಿದು, ತನ್ನ ಹೆಂಡತಿಗೂ ಕುಡಿಸುತ್ತಿದ್ದ! ಗೋಪಾಲನನ್ನು ಬಂಧಿಸಲು ಹೋದ ಪೊಲೀಸರಿಗೆ ಈತನನ್ನು ಹಾಗು ಈತನ ಪತ್ನಿಯನ್ನೂ ಆಸ್ಪತ್ರೆಗೆ ಸೇರಿಸಿ ಕಾವಲು ಕಾಯೋದು ತಪ್ಪುತ್ತಿರಲಿಲ್ಲ! ಆನಂತರ ಗೋಪಾಲನನ್ನು ಕೋರ್ಟ್‌ಗೆ ಕರೆದೊಯ್ದು ಕಟಕಟೆಯಲ್ಲಿ ನಿಲ್ಲಿಸಿದರೆ ಆಸಾಮಿ ಪೊಲೀಸರ ವಿರುದ್ಧವೇ ದೂರುತ್ತಿದ್ದ. "ಸ್ವಾಮೀ, ನಾನು ಕಳ್ಳನಲ್ಲ. ನಿರಪರಾಧಿ ಆದ ನನ್ನನ್ನು ಈ ಕೇಸಿನಲ್ಲಿ ಫಿಕ್ಸ್ ಮಾಡಿ ಕರೆತಂದಿದ್ದಾರೆ. ನಾನೇ ಕಳ್ಳನಾಗಿದ್ದರೆ ನನ್ನ ಮನೆಯಿಂದ ಜಪ್ತಿ ಮಾಡಿರುವ ಮಾಲುಗಳೆಲ್ಲಿ ಅಂತ ಈ ಪೊಲೀಸರನ್ನು ಕೇಳಿ ಸ್ವಾಮೀ.." ಎಂದು ರೋದಿಸುತ್ತಿದ್ದ! ಆಗ ಅಲ್ಲೇ ಮೂಲೆಗೊರಗಿ ನಿಂತಿರುತ್ತಿದ್ದ ಪೊಲೀಸರಿಗೆ ಭಾರೀ ಮುಜುಗರವಾಗುತ್ತಿತ್ತು. ಪಾಯ್ಸನ್ ಗೋಪಾಲ ಕೇಸಿನಿಂದ ಖುಲಾಸೆಯಾಗಿ ನಿರಾಯಾಸವಾಗಿ ಬಿಡುಗಡೆಯಾಗುತ್ತಿದ್ದ! ಇಂತಿಪ್ಪ ಕಿಲಾಡಿಕಳ್ಳ ಪಾಯ್ಸನ್ ಗೋಪಾಲನನ್ನು ಮಾಲು ಸಹಿತ ಹಿಡಿದು, ಈತನ ಸೀಕ್ರೆಟ್ ಲಾಕರ್ ಅನ್ನು ಪತ್ತೆ ಹಚ್ಚಿದ್ದು ಯಾರು ಗೊತ್ತೆ?


ಎಸಿಪಿ ಉಮೇಶ್

ಬೆಂಗಳೂರಿನ ಬಸವೇಶ್ವರನಗರ ಪೊಲೀಸ್ ಸ್ಟೇಷನ್ನಿನ ಪೊಲೀಸ್ ಇನ್ಸ್‌ಪೆಕ್ಟರ್ ಕಲ್ಲಪ್ಪ ಎಸ್ ಖರಾತ!

ಟೆರೇಸ್‌ನಲ್ಲಿ ಮಂಗಾಟ!

ಬಸವೇಶ್ವರನಗರದ ಬಿಇಎಂಎಲ್ ಲೇಔಟ್‌ನಲ್ಲಿ ಇತ್ತೀಚೆಗೆ ಒಂದು ಮನೆಯಲ್ಲಿ ಭಾರೀ ಕಳ್ಳತನ ನಡೆದಿತ್ತು. ಈ ಹಿನ್ನೆಲೆಯಲ್ಲಿ ಪಿ.ಐ. ಕಲ್ಲಪ್ಪ ಒಂದಿಷ್ಟು ಮಂದಿ ಹಳೇ ಕಳ್ಳರನ್ನು ಬಂಧಿಸಿ ವಿಚಾರಣೆಗೊಳಪಡಿಸಿದ್ದರು. ಈ ಪೈಕಿ ಪಾಯ್ಸನ್ ಗೋಪಾಲನ ಬೆರಳಚ್ಚು ಮುದ್ರೆ ಕಳ್ಳತನವಾದ ಮನೆಯ ಬೀರುವಿನ ಲಾಕರ್ ಮೇಲೆ ಬಿದ್ದಿರುವುದು ಪತ್ತೆಯಾಗಿತ್ತು! ಇವನೇ ಕದ್ದಿದ್ದಾನೆ ಎಂಬುದು ಖಾತರಿಯಾಯಿತು. ಆದರೆ ಈತನ ಮನೆಯಲ್ಲಿ ಮಾಲೇ ಪತ್ತೆಯಾಗಿರಲಿಲ್ಲ, ಹಾಗಾದರೆ ಇನ್ನೆಲ್ಲಿ ಇಟ್ಟಿದ್ದೀಯಾ ಬೊಗಳು ಎಂದು ಪ್ರಶ್ನಿಸಿ ಲಾಠಿ ಝಳಪಿಸಿದ್ದೂ ಆಯಿತು. ಅದೆಷ್ಟು ಹೊಡೆದರೂ ಪಾಯ್ಸನ್ ಗೋಪಾಲ ಬಾಯಿ ಬಿಟ್ಟಿರಲಿಲ್ಲ, "ನಾನು ಕದ್ದಿಲ್ಲ" ಎಂದೇ ವಾದಿಸುತ್ತಿದ್ದ. ಈತನ ಹಳೆಯ ವರಸೆಗಳನ್ನು ಚೆನ್ನಾಗಿ ಅರಿತಿದ್ದ ಕಲ್ಲಪ್ಪನವರು, ಈ ಬಾರಿ ಯಾಮಾರಬಾರದೆಂದು ನಿರ್ಧರಿಸಿ, ಗೋಪಾಲನನ್ನು ತಕ್ಷಣ ನ್ಯಾಯಾಲಯಕ್ಕೆ ಹಾಜರುಪಡಿಸಲಿಲ್ಲ. ಇದರ ಬದಲಿಗೆ ಈತನನ್ನು ಬಿಟ್ಟು ಕಳುಹಿಸಿ, ಬೆನ್ನಹಿಂದೆಯೇ ಮಫ್ತಿ ಪೊಲೀಸರನ್ನು ಛೂಬಿಟ್ಟಿದ್ದರು.

ಕಳ್ಳ ಗೋಪಾಲ ಸಾಯಂಕಾಲ ತನ್ನ ಮನೆಗೆ ಬಂದಾಗ ಆಗಾಗ್ಗೆ ಟೆರಸ್‌ಗೆ ಹತ್ತುವುದು, ಆ ಕಡೆ ಈ ಕಡೆ ಇಣುಕುವುದು, ಮತ್ತೆ ಕೆಳಗಿಳಿದು ಬರುವುದು ಗೋಚರಿಸಿತ್ತು. ಈತನನ್ನೇ ವಾಚ್ ಮಾಡುತ್ತಿದ್ದ ಮಫ್ತಿ ಪೊಲೀಸರು ಇವನ ಮನೆಯ ಟೆರಸ್ ಮೇಲೆ ಹತ್ತಿ ಅಲ್ಲೇನಿದೆ ಎಂದು ಹುಡುಕಾಡಿದಾಗ, ಅಲ್ಲೊಂದು ಮೂಲೆಯಲ್ಲಿ ತೆಂಗಿನ ಚಿಪ್ಪು, ಮಟ್ಟೆ ಹಾಗೂ ಇತರೆ ಸೌದೆ ಕಡ್ಡಿಗಳು ಪೇರಿಸಿರುವುದು ಕಾಣಿಸಿತ್ತು, ಅದನ್ನು ಬಿಟ್ಟರೆ ಬೀರು ಅಥವಾ ಸೂಟ್ ಕೇಸ್ ಏನೂ ಇರಲಿಲ್ಲ, ಪೊಲೀಸ್ ಠಾಣೆಗೆ ವಾಪಸ್ಸಾದ ಆ ರಹಸ್ಯ ಪೊಲೀಸರು ಈ ವಿಚಾರವನ್ನು ಕಲ್ಲಪ್ಪನವರಿಗೆ ತಿಳಿಸಿದರು.

ಆ ಸೌದೆ ಗುಡ್ಡೆಯೊಳಗೇ ಏನೋ ಇರಬೇಕು! ಎಂದು ಅನುಮಾನಿಸಿದ ಕಲ್ಲಪ್ಪ ಕೂಡಲೇ ಕಳ್ಳ ಗೋಪಾಲನ ಮನೆಗೆ ತೆರಳಿ, ಟೆರಸ್ ಹತ್ತಿ ಆ ಸೌದೆಗುಡ್ಡೆ ಕೆದಕಿದರೆ.. ಅಲ್ಲಿ ಅರ್ಧ ಕೆ.ಜಿ.ಗೂ ಹೆಚ್ಚಿನ ಚಿನ್ನದ ಆಭರಣಗಳು, 4 ಕೆ.ಜಿ. ಬೆಳ್ಳಿ ಸಾಮಾನು ಹಾಗೂ ಒಂದಿಷ್ಟು ಹಣ ಸಿಕ್ಕಿಬಿಡೋದೆ! ಅಂತೂ ಖತರ್‌ನಾಕ್ ಕಳ್ಳ ಪಾಯ್ಸನ್ ಗೋಪಾಲನ ಸೀಕ್ರೆಟ್ ಲಾಕರ್ ಅನ್ನು ಪತ್ತೆ ಹಚ್ಚಿಬಿಟ್ಟ ಪೊಲೀಸ್ ಇನ್ಸ್‌ಪೆಕ್ಟರ್ ಕಲ್ಲಪ್ಪ ಈ ಸಲ ಮಾಲು ಸಹಿತ ಆತನನ್ನು ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ! ಶಿಕ್ಷೆ ತಪ್ಪಿದ್ದಲ್ಲ!

ಅಂದಹಾಗೆ, ರಾಮನಗರದ ಕಳ್ಳ ಗೋಪಾಲನಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಒಬ್ಬಳ ವಿವಾಹವಾಗಿದೆ. ಇನ್ನೊಬ್ಬಳ ಮದುವೆ ಈಗಷ್ಟೇ ಫಿಕ್ಸ್ ಆಗಿತ್ತಂತೆ! ಬಹುಶಃ ಈ ಕಿರಿಯ ಮಗಳ ಮದುವೆ ಖರ್ಚಿಗೆ ಅಂತ ಬಸವೇಶ್ವರನಗರದ ಮನೆ ದೋಚಿದ್ದ ಅನ್ನಿಸ್ತೆ ಗೋಪಾಲ! "ಬೆಂಗ್ಳೂರ‍್ನಾಗೆ ಕೆಲ್ಸ ಮಾಡ್ತೀವ್ನಿ" ಅಂತ ಹೆಂಡತಿ, ಮಕ್ಕಳಿಗೆ ಹಾಗೂ ನೆರೆಹೊರೆಯವರಿಗೆ ಸುಳ್ಳು ಹೇಳಿ ದಿನಾಲೂ ರೈಲು ಹತ್ತಿ ಬೆಂಗಳೂರಿಗೆ ಬರುತ್ತಿದ್ದ ಗೋಪಾಲನ ಅಸಲೀ ಬಣ್ಣ ಈಗ ಬಟಾ ಬಯಲಾಗಿದೆ. ಈತನ ಮಾನ ಮರ್ಯಾದೆ ಹರಾಜಾಗುವುದರ ಜೊತೆಗೆ ಈತನ ಹೆಂಡತಿ ಮತ್ತು ಮಕ್ಕಳೂ ತಲೆತಗ್ಗಿಸುವಂತಾಗಿದೆ!

ಬೆಂಗಳೂರಿಗೆ ನೌಕರಿ ಮಾಡಲು ಬರಬೇಕೇ ಹೊರತು 'ಕೈ'ಚಳಕ ತೋರಿಸುವುದಕ್ಕಲ್ಲ!

■ ಬಿ.ನಾರಾಯಣ್



ಒಂದು ಚೊಂಬಿಗೆ ಅರವತ್ತು ಲಕ್ಷ!

ಇತ್ತ ರಾಮನಗರದಲ್ಲಿ ಖತರ್‌ನಾಕ್ ಕಳ್ಳ ಪಾಯ್ಸನ್ ಗೋಪಾಲನ ಸೀಕ್ರೆಟ್ ಲಾಕರ್ ಸ್ಟೋರಿ ಬ್ಲಾಸ್ಟ್ ಆದ ದಿನವೇ ಅತ್ತ ಮೈಸೂರಿನಲ್ಲಿ ಇನ್ನೊಂದು 'ಸ್ಪೆಷಲ್' ಕೇಸ್ ಟ್ರೇಸ್ ಔಟ್ ಆಗಿದೆ. ನಿಮಗೆ "ರೈಸ್ ಪುಲ್ಲಿಂಗ್" ವಂಚನೆಯ ಬಗ್ಗೆ ತಿಳಿದಿರಬೇಕು. ಅಂಥಾದ್ದೇ ಒಂದು ವಂಚನಾ ಪುರಾಣವದು!

ಬೆಂಗಳೂರಿನ ಶ್ರೀಮಂತ ವ್ಯಕ್ತಿಯೊಬ್ಬರನ್ನು ಮೈಸೂರಿಗೆ ಕರೆಸಿಕೊಂಡಿದ್ದ ಹತ್ತು ಮಂದಿ ಕಿಲಾಡಿ ಕಳ್ಳರು, ತಮ್ಮ ಬಳಿಯಿದ್ದ ತಾಮ್ರದ ಚೊಂಬೊಂದನ್ನು 60 ಲಕ್ಷ ರೂಪಾಯಿಗೆ ಬಿಕರಿ ಮಾಡಿ ಪೊಲೀಸರಿಗೆ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿದ್ದಾರೆ! ಏನು? ತಾಮ್ರದ ಚೊಂಬಿಗೆ ಅರವತ್ತು ಲಕ್ಷ ರೂಪಾಯಿನಾ! ಎಂದು ಅಚ್ಚರಿ ಪಡುತ್ತೀರಾ? ಅದು ಅಂತಿಂಥಾ ಚೊಂಬಲ್ಲಾ ಸ್ವಾಮೀ.. ನೀವು ಬಯಸಿದ ಐಶ್ವರ್ಯ, ಆರೋಗ್ಯ ಇತ್ಯಾದಿಗಳನ್ನು ತಪತಪನೆ ಉದುರಿಸುವ ಚೊಂಬಂತೆ! ಹೀಗಂತ ನಂಬಿಸಿಯೆ ಬೆಂಗಳೂರಿನ ಉದ್ಯಮಿಯನ್ನು ಸರಿಯಾಗಿ ಯಾಮಾರಿಸಲಾಗಿದೆ! ಯಾಮಾರಿದ ಉದ್ಯಮಿಯ ಹೆಸರು ಸುರೇಂದ್ರ. ಈತ ಬೆಂಗಳೂರಿನಲ್ಲಿ ಖಾಸಗಿ ಕಂಪನಿಯೊಂದರ ಸಿಇಓ. ಈಗ್ಗೆ 15 ದಿನಗಳ ಹಿಂದೆ ಸುರೇಂದ್ರರಿಗೆ ಉಡುಪಿಯವರಾದ ರಮೇಶ್ ರಾವ್ ಮತ್ತು ಪ್ರವೀಣ್ ರಾವ್ ಪರಿಚಯವಾಗಿದ್ದರಂತೆ. ಹದಿನೈದಿಪ್ಪತ್ತು ದಿನಗಳ ಕಾಲ ಬಡಾ ಬಿಸಿನೆಸ್ ಮನ್‌ಗಳ ಥರಾ ವರ್ತಿಸಿ ಸುರೇಂದ್ರರ ಗೆಳೆತನ ಸಂಪಾದಿಸಿದ್ದಾರೆ. ಸುರೇಂದ್ರ ಮಹಾನ್ ದೈವಭಕ್ತ ರಾತ್ರಿ ಹೆಂಡತಿ ಮಗ್ಗುಲಲ್ಲಿರುವಾಗಲೂ ದೇವರ ನಾಮ ಜಪಿಸುತ್ತಾನೆ ಎಂಬುದು ರಮೇಶ್ ರಾವ್ ಮತ್ತು ಪ್ರವೀಣ್ ರಾವ್ ಜೋಡಿಗೆ ಗೊತ್ತಾಯಿತು. ಆಗಲೇ ಅವರು ಸುರೇಂದ್ರರಿಗೆ ಅದೃಷ್ಟವಂತ ಚೊಂಬಿನ ಕತೆ ಪುಂಗಿದ್ದು!



ಮೈಸೂರಿನಲ್ಲಿ ತಮಗೊಬ್ಬ ಸ್ನೇಹಿತರಿದ್ದು, ಅವರ ಬಳಿ ಋಷಿಮುನಿಗಳ ಕಾಲದ ಅದೃಷ್ಟವಂತ ತಾಮ್ರದ ಚೊಂಬೊಂದು ಇದೆ. ಅದರಿಂದ ಸಕಲ ಐಶ್ವರ್ಯಗಳೂ ಲಭಿಸುತ್ತವೆ. ತಾವು ತಮ್ಮ ತಮ್ಮ ಅನೇಕ ಮಿತ್ರರು ಇಂತಹ ತಾಮ್ರದ ಚೊಂಬಿನಿಂದ ಈಗಾಗಲೇ ದುಡ್ಡು ಆರೋಗ್ಯ ಎರಡನ್ನೂ ಹೊಂದಿದ್ದೇವೆ. ಅದನ್ನು ಖರೀದಿಸಿದರೆ ನೀವೂ ಸಹ ನಮ್ಮಂತೆ ಕೋಟ್ಯಾಧೀಶ್ವರರಾಗಬಹುದು ಎಂದು ಹೇಳಿದ್ದಾರೆ. ಈ ಚೊಂಬಿನ ಕತೆ ಕೇಳಿದ ಮಹಾನ್ ದೈವಭಕ್ತ ಸುರೇಂದ್ರ "ಅದರ ಬೆಲೆ ಎಷ್ಟಾಗಬಹುದು?" ಎಂದು ಕುತೂಹಲದಿಂದ ಕೇಳಿದ್ದಕ್ಕೆ ಉಡುಪಿಯ ಐನಾತಿಗಳು "ಅದರ ಬೆಲೆ ಒಂದು ಕೋಟಿ ರೂಪಾಯಿ ಆಗುತ್ತದೆ. ಆದರೆ ನೀವು ನಮ್ಮ ಗೆಳೆಯರು, ಸೋ 60 ಲಕ್ಷಕ್ಕೆ ಕೊಡಿಸುತ್ತೇವೆ" ಎಂದಿದ್ದಾರೆ!

ಸುರೇಂದ್ರ ಇಷ್ಟು ಹಣ ಕೊಟ್ಟು ಆ ತಾಮ್ರದ ಚೊಂಬನ್ನು ಪರ್ಚೇಸ್ ಮಾಡಲು ಒಪ್ಪಿಕೊಂಡಿದ್ದಾರೆ. ಪ್ರವೀಣ್ ಮತ್ತು ರಮೇಶ್ ಕೂಡಲೇ ತಮ್ಮ ಗ್ಯಾಂಗ್ ಸದಸ್ಯರಿಗೆ ಬೋನಿಗೆ ಬಿದ್ದ ಮಿಕದ ಬಗ್ಗೆ ಮಾಹಿತಿ ಕೊಟ್ಟು ಸುರೇಂದ್ರರನ್ನು ಮೈಸೂರಿಗೆ ಕರೆದೊಯ್ದಿದ್ದಾರೆ. ಆಂಧ್ರ ಪ್ರದೇಶದ ಉಮಾಮಹೇಶ್ವರ ನಾಯ್ಡು, ಕೊಳ್ಳೇಗಾಲದ ಹರೀಶ್, ಚಿಕ್ಕಬಳ್ಳಾಪುರದ ವರದರಾಜು, ತಿರುಪತಿಯ ಮದನ ಮೋಹನ್, ಕೇರಳದ ಜಯಕೃಷ್ಣ ಬೆಂಗಳೂರಿನ ಮಹದೇವನಾಯ್ಕ ಮತ್ತು ಶಿವಪ್ಪ ಹಾಗೂ ಮೈಸೂರಿನ ವಿದ್ಯಾರಣ್ಯಪುರದ ನಿವಾಸಿ ಬಾಬುರಾಜ್ ಎಂಬ ಎಂಟು ಮಂದಿ ವಂಚಕರು ಆ ತಂಡದಲ್ಲಿದ್ದು ಇವರೆಲ್ಲರೂ ಸುರೇಂದ್ರರ ಆಗಮನಕ್ಕಾಗಿ ಮೈಸೂರಿನ ಬೋಗಾದಿಯಲ್ಲಿ ಜಮಾಯಿಸಿದ್ದಾರೆ. ಪ್ರವೀಣ್ ಮತ್ತು ರಮೇಶ್ ಸುರೇಂದ್ರರನ್ನು ಅವರ ಇನ್ನೋವಾ ಕಾರ್‌ನಲ್ಲಿ ಮೈಸೂರಿಗೆ ಕರೆದೊಯ್ದು ಬೋಗಾದಿಯ ಎಸ್‌ಬಿಎಂ ಬಡಾವಣೆಯಲ್ಲಿ 'ಡೀಲ್' ಕುದುರಿಸುತ್ತಿದ್ದಾಗ ಸರಸ್ವತಿಪುರಂ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಪೂವಯ್ಯ ಆ ಮಾರ್ಗದಲ್ಲಿ ಸಂಚರಿಸುತ್ತಿದ್ದರು. ಇವರ ಚಲನವಲನದ ಬಗ್ಗೆ ಪೂವಯ್ಯನವರಲ್ಲಿ ಡೌಟ್ ಬಂದು ಅವರೆಲ್ಲರನ್ನು ಪರಿಶೀಲಿಸಿದಾಗ 60 ಲಕ್ಷ ರೂಪಾಯಿಯ ಚೊಂಬಿನ ರಹಸ್ಯ ಬಯಲಾಯಿತು!

ಹಳೇ ಕಾಲದ ಮರದ ಪೆಟ್ಟಿಗೆಯೊಳಗಿದ್ದ ತಾಮ್ರದ ಚೊಂಬನ್ನು ಜಪ್ತಿ ಮಾಡಿ ಹತ್ತು ಮಂದಿ 420ಗಳನ್ನು ಜೈಲಿಗೆ ಕಳುಹಿಸಿದ್ದಾರೆ. ಅಲ್ಲಾ, ಈ ವೈಜ್ಞಾನಿಕ ಯುಗದಲ್ಲೂ ಸುರೇಂದ್ರನಂತಹ ಯಡವಟ್ಟು ಗಿರಾಕಿಗಳಿದ್ದಾರಲ್ಲಾ, ಏನಂಬುದೇ ಸೋಜಿಗ! ■

ಎಚ್‌ಡಿಕೆ-ಹೈಟೆಕ್ ಪ್ರಚಾರದ ಮೊರೆ?!

ದಿನೇದಿನೇ ಕುಸಿಯುತ್ತಿರುವ ತನ್ನ ವೈಯಕ್ತಿಕ ಹಾಗೂ ಪಕ್ಷದ ವರ್ಚಸ್ಸನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕೆಂದು ಕುಮಾರಣ್ಣ ತೀವ್ರ ಚಿಂತೆಯಲ್ಲಿ ಮುಳುಗಿದ್ದಾರಂತೆ. ಎಲ್ಲವನ್ನೂ ಅಳೆದೂ ಸುರಿದು, ಅಂತಿಮವಾಗಿ ಅವರು ಪರಿಹಾರ ಕಂಡುಕೊಳ್ಳಬಯಸಿರುವುದು ಒಬ್ಬ ಪ್ರೈವೇಟ್ ಪೊಲಿಟಿಕಲ್ ಕನ್ಸಲ್ಟೆಂಟ್‌ನಿಂದ!

ಅದೂ ಅಂತಿಂಥಾ ಕನ್ಸಲ್ಟೆಂಟ್ ಅಲ್ಲ; ಕಳೆದ ಲೋಕಸಭಾ ಚುನಾವಣೆಯ ಪೂರ್ವದಲ್ಲಿ ಸಾಕ್ಷಾತ್ ಪ್ರಧಾನಿ ಮೋದಿಯ ಪ್ರಚಾರದ ಉಸ್ತುವಾರಿ ಹೊತ್ತು ಮೋದಿಯನ್ನು ಪ್ರಧಾನಿ ಮಾಡುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದ ಚತುರ ರಾಜಕೀಯ ಪ್ರಚಾರಕ ಪ್ರಶಾಂತ್ ಕಿಶೋರ್! ಇತ್ತೀಚಿನ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಇದೇ ಪ್ರಶಾಂತ್ ಕಿಶೋರ್ ತಂಡ ನಿತೀಶ್‌ಕುಮಾರ್ ಪರವಾಗಿ ಕೆಲಸ ಮಾಡಿದ್ದು ಅವರ ಗೆಲುವನ್ನು ಖಾತ್ರಿಪಡಿಸಿದೆ.

ಕುಮಾರಣ್ಣ ಇಂಥಾ ಕನ್ಸಲ್ಟೆನ್ಸಿ ಮೊರೆಹೋಗಲು ಕೂಡ ಪ್ರಬಲವಾದ ಕಾರಣಗಳಿವೆ. ಅದರಲ್ಲಿ ಪ್ರಮುಖವಾದುದು ಈ ಬಾರಿಯ ಎಂಎಲ್‌ಸಿ ಚುನಾವಣೆಯ ಫಲಿತಾಂಶ. ಈ ಫಲಿತಾಂಶ ದೇವೇಗೌಡರ ಕುಟುಂಬದ ಮಟ್ಟಿಗೆ ಒಂದು ದೊಡ್ಡ ಆಘಾತವೇ ಸರಿ. ಅನಾದಿಯಿಂದಲೂ ಮಾಜಿ ಪ್ರಧಾನಿ ದೇವೇಗೌಡರ ರಾಜಕೀಯ ಭದ್ರಕೋಟೆಯಾಗಿದ್ದ ಹಾಸನದಲ್ಲಿ ಕಾಂಗ್ರೆಸ್‌ನ ಗೋಪಾಲಸ್ವಾಮಿ ಮತ್ತು ಮಾಜಿ ಸಿಎಂ ಕುಮಾರಣ್ಣನ ಭದ್ರನೆಲೆ ರಾಮನಗರ ಕ್ಷೇತ್ರ ಒಳಗೊಳ್ಳುವ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಬಿ.ರವಿ ಗೆಲುವು ಸಾಧಿಸಿ ಜೆಡಿಎಸ್‌ಗೆ ಮರ್ಮಾಘಾತ ಕೊಟ್ಟಿದ್ದಾರೆ.

ಜೆಡಿಎಸ್ ಪಾಳಯದಲ್ಲಿ, ಅಂದರೆ ಗೌಡರ ಕುಟುಂಬ ಹಾಗೂ ಜೆಡಿಎಸ್ ಪಕ್ಷದಲ್ಲಿ ಕಾಣಿಸಿಕೊಂಡಿದ್ದ ಬಿರುಕು, ಅಸಮಾಧಾನಗಳ ಸುಳಿವನ್ನು ಅರಿತ ಎ.ಮಂಜು ಮತ್ತು ಡಿಕೆಶಿ ಜೋಡಿ ಹೆಣೆದ ರಾಜಕೀಯ ಬಲೆಗೆ ಜೆಡಿಎಸ್ ಮುಗ್ಗರಿಸಿ ಮಕಾಡೆ ಬಿದ್ದಿದೆ. ಹೀಗಾಗಿ ಕುಮಾರಣ್ಣ ದಿಕ್ಕೇ ತೋಚದಂತಾಗಿ ಕೊನೆಗೆ ಕನ್ಸಲ್ಟೆನ್ಸಿ ಸರ್ವಿಸ್ ಕಡೆ ಮುಖ ಮಾಡಿದ್ದಾರೆಂದು ಸುದ್ದಿ.

ಇತ್ತೀಚೆಗೆ ಕುಮಾರಣ್ಣ ತನ್ನ ಕುಟುಂಬ ವರ್ಗದವರಿಂದಲೂ, ಪಕ್ಷದ ಧುರೀಣರಿಂದಲೂ ದೂರವಾಗಿ ಒಬ್ಬಂಟಿಯಾಗಿದ್ದಾರೆಂಬ ಸುದ್ದಿಗಳು ಕೇಳಿಬರುತ್ತಿವೆ. ಮನೆಯಲ್ಲಿ ದೊಡ್ಡಗೌಡರನ್ನು ಹೊರತುಪಡಿಸಿ ಬೇರಾರೂ ಎಚ್‌ಡಿಕೆಗೆ ಮುಖ ಕೊಟ್ಟು ಮಾತಾಡುತ್ತಿಲ್ಲವಂತೆ. ರೇವಣ್ಣರ ಪತ್ನಿ ಭವಾನಿ ಈ ಹಿಂದೆ ಲೋಕಸಭೆ, ವಿಧಾನಸಭೆ ಟಿಕೆಟ್‌ಗಾಗಿ ಪ್ರಯತ್ನಿಸಿ ವಿಫಲಳಾಗಿ, ಈ ಬಾರಿ ತಾನು ಕನಿಷ್ಠ ಎಂಎಲ್‌ಸಿಯಾದರೂ ಆಗಲೇಬೇಕೆಂದು ಹಠ ಹಿಡಿದು ನಿಂತಿದ್ದರಂತೆ. ಹಾಸನದ ರಾಜಕೀಯದಲ್ಲಿ ಗಂಡ ಮತ್ತು ಮಾವನ ಜೊತೆಗೆ ಹೆಗಲಿಗೆ ಹೆಗಲಾಗಿ ಭವಾನಿ ದುಡಿದಿದ್ದಾರೆ, ಅವರಿಗೆ ಕುಟುಂಬದಲ್ಲೇ ಅನ್ಯಾಯವಾಗಿದೆ ಎಂಬ ಮಾತು ಹಾಸನ ಕಾರ್ಯಕರ್ತರಿಂದಲೇ ಕೇಳಿಬರುತ್ತಿದೆ. ಯಾವುದೇ ರಾಜಕೀಯ ಅನುಭವವಿಲ್ಲದ ಅನಿತಾ ಕುಮಾರಸ್ವಾಮಿಗೆ ಸಾಲು ಸಾಲು ಅವಕಾಶಗಳನ್ನು ಕೊಟ್ಟು, ತಮಗೆ ಅವಕಾಶಗಳೇ ಇಲ್ಲದಂತೆ ಮಾಡುತ್ತಿರುವ ಕುಮಾರಸ್ವಾಮಿಯ ಬಗ್ಗೆ ಭವಾನಿ ರೇವಣ್ಣನವರು ರೋಸಿ ಹೋಗಿದ್ದರಂತೆ. ತಳಮಟ್ಟದ ರಾಜಕಾರಣದಲ್ಲಿ ಹಿಡಿತ ಹೊಂದಿರುವ ಭವಾನಿಯ ಮುನಿಸು ಹಾಸನದ ಫಲಿತಾಂಶದಲ್ಲಿ ಪ್ರಕಟವಾಗಿದೆ ಎಂಬ ವಿಶ್ಲೇಷಣೆಗಳು ಕೇಳಿಬರುತ್ತಿವೆ.

ಇನ್ನು ಚಲುವರಾಯಸ್ವಾಮಿ, ಬಾಲಕೃಷ್ಣ, ಜಮೀರ್ ಮುಂತಾದ ನಾಯಕರು ಬಹಿರಂಗವಾಗಿಯೇ ಕುಮಾರಣ್ಣನ ವಿರುದ್ಧ ಸಮರ ಸಾರಿದ್ದಾರೆ. ಈ ನಾಯಕರು ತಮ್ಮ ಸ್ವಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡು, ಕುಮಾರಣ್ಣನ ಕ್ಷೇತ್ರದಲ್ಲಿ ಅಸಹಕಾರ ತೋರಿದ್ದಾರೆಂಬ ವಾಸ್ತವವೂ ಇದೆ. ಕುಮಾರಣ್ಣನ 'ದುರ್ವರ್ತನೆ'ಯಿಂದಾಗಿ ಈ ನಾಯಕರು 'ಹಸ್ತ ಲಾಘವ'ಕ್ಕೆ ತಯಾರಿ ನಡೆಸಿದ್ದು ಸದ್ಯಕ್ಕೆ ದೇವೇಗೌಡರ ಮಧ್ಯಸ್ಥಿಕೆಯಿಂದಾಗಿ ಮುಂದೂಡಲ್ಪಟ್ಟಿದೆ.

ಹೀಗೆ ಕುಟುಂಬದಲ್ಲೂ, ಪಕ್ಷದಲ್ಲೂ ಒಂಟಿ ದನಿಯಾಗಿರುವ ಕುಮಾರಣ್ಣನೇ ಈ ಸೋಲಿಗೆ ನೇರ ಹೊಣೆಗಾರ ಎಂಬ ವಾದ ಪ್ರಬಲವಾಗಿ ಕೇಳಿಬರುತ್ತಿದೆ. ಇದನ್ನೆಲ್ಲಾ ಜೀರ್ಣಿಸಿಕೊಂಡು, ಆತ್ಮಾವಲೋಕನ ಮಾಡಿಕೊಂಡು ಸಾವಧಾನವಾಗಿ ಪಕ್ಷವನ್ನು ಮುನ್ನಡೆಸುವ ಪ್ರಬುದ್ಧತೆ ಕುಮಾರಣ್ಣ ತೋರುತ್ತಾರೋ ಎಂಬುದೊಂದು ಯಕ್ಷ ಪ್ರಶ್ನೆ. ಯಾಕೆಂದರೆ ಇಳಿ ವೃದ್ಧಾಪ್ಯದಲ್ಲಿರುವ ದೇವೇಗೌಡರು ತಮ್ಮ ಶಕ್ತಿ ಮೀರಿ ಪ್ರಯತ್ನ ಹಾಕುತ್ತಿದ್ದಾರೆ. ಪಾಪ! ಅವರಿಂದ ಇನ್ನೂ ಹೆಚ್ಚಿನದನ್ನು ನಿರೀಕ್ಷೆ ಮಾಡಲಾಗದು. ದೇವೇಗೌಡರ ಇಳಿಗಾಲ ಜೆಡಿಎಸ್‌ನ ಇಳಿಗಾಲವೂ ಆಗಿ ಪರಿಣಮಿಸಿರುವುದು ಈ ಪಕ್ಷದ ದುರಂತ.

ಆದರೂ ದೇವೇಗೌಡರು ಬಿಂಕ ಬಿಟ್ಟುಕೊಡೋ ಜಾಯಮಾನದವರಲ್ಲ. "ತಾಲ್ಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿ ಎಲೆಕ್ಷನ್‌ನಲ್ಲಿ ಜೆಡಿಎಸ್ ಏನೂ ಅಂತ ತೋರುಸ್ತೀವಿ" ಅಂತ ಸೆಡ್ಡುಹೊಡೆದಿದ್ದಾರಂತೆ. ಆದರೆ ಇಂಥಾ ಮಾತುಗಳಿಂದ ಜೆಡಿಎಸ್ ಕಾರ್ಯಕರ್ತರಲ್ಲೇ ಉತ್ಸಾಹ ಮೂಡುತ್ತಿಲ್ಲ ಎಂಬುದು ಬೇರೆ ಮಾತು.

ಪ್ರಧಾನಿಪಟ್ಟದಿಂದ ಕೆಳಗಿಳಿದು ಬರುವಾಗ "ನಾನು ಫೀನಿಕ್ಸ್ ಪಕ್ಷಿಯಂತೆ ಬೂದಿಯಿಂದ ಮತ್ತೆ ಎದ್ದು ಬರುತ್ತೇನೆ" ಅಂತ ದೇವೇಗೌಡರು ಗುಡುಗಿದ್ದು ಒಂದು ಚರಿತ್ರಾರ್ಹ ಹೇಳಿಕೆಯಾಗಿ ಅಂದು ಸುದ್ದಿ ಮಾಧ್ಯಮಗಳಲ್ಲಿ ಸಂಚಲನ ಮೂಡಿಸಿತ್ತು. ಈ ಮಾತಿನಿಂದ ಪುಳಕಿತಗೊಂಡು ಭಾರೀ ನಿರೀಕ್ಷೆಗಳನ್ನು ಇಟ್ಟುಕೊಂಡ ಪಕ್ಷದ ಕಟ್ಟಾ ಕಾರ್ಯಕರ್ತರು ದಶಕಗಟ್ಟಲೇ ಕಾದಿದ್ದೇ ಬಂತು.

ಈ ಮಧ್ಯೆ ಏನೆಲ್ಲ ಪಂಚರಂಗಿ ತಂತ್ರಗಳನ್ನು ಪ್ರಯೋ[...] ಕೋಮುವಾದಿ ಪಕ್ಷದೊಂದಿಗೆ ಕೂಡಿಕೆ ಮಾಡಿಕೊಂ[...] ಅಲ್ಪ ಅವಧಿಗೆ ಕುಮಾರಣ್ಣ ಸಿಎಂ ಆಗಿದ್ದಷ್ಟೆ ಈ ಎರ[...] ದಶಕಗಳ ಅವರ ದೊಡ್ಡ ಸಾಧನೆ. ಅದೂ ಅಂತಿಮವಾ[...] 'ಹರ್ಪದ ಕೂಳಿಗೆ ಹೋಗಿ ವರುಷದ ಕೂ[...] ಕಳೆದುಕೊಂಡ' ಎಂಬ ಪರಿಸ್ಥಿತಿಯ[...] ಪರ್ಯಾವಸಾನವಾಗಿರೋದು ವಿಪರ್ಯಾಸವೇ ಸರಿ. ಯಾಕೆಂ[...] ಕರ್ನಾಟಕದಲ್ಲಿ ಕಾಂಗ್ರೆಸ್ಸೇತರ, ಬಿಜೆಪಿಯೇತರ ಜಾತ್ಯತೀ[...] ಪರ್ಯಾಯವೊಂದರ ಅಗತ್ಯವಿತ್ತು, ಸ್ವಲ್ಪ ತಾಳ್ಮೆ ಮ[...] ರಾಜಕೀಯ ದೂರದೃಷ್ಟಿ ಇದ್ದಿದ್ದರೆ ತೆನೆಹೊತ್ತ ಮಹಿ[...] ವಿಧಾನಸೌಧದಲ್ಲಿ ಗಟ್ಟಿಯಾಗಿ ನೆಲೆಯೂರುತ್ತಿದ್ದಳು. ಆ[...] ಕುಮಾರಸ್ವಾಮಿ ಅನುಸರಿಸಿದ ಎಡಬಿಡಂಗಿ ನೀತಿಯಿಂದ[...] ಒಂದೆಡೆ ಪರ್ಯಾಯದ ಹುಡುಕಾಟದಲ್ಲಿದ್ದ ರಾಜಕೀ[...] ಶಕ್ತಿಗಳು ಮತ್ತೆ ಕಾಂಗ್ರೆಸ್‌ನತ್ತ ವಲಸೆ ಹೊರಟ[...] ಮತ್ತೊಂದೆಡೆ ಅಲ್ಪಸಂಖ್ಯಾತರು ಶಾಶ್ವತವಾಗಿ ಜೆಡಿಎಸ್‌ನಿ[...] ದೂರವಾಗುವಂತಾಯ್ತು. ಇದ್ದ ಒಬ್ಬನೇ ಒಬ್ಬ ಜಮೀ[...] ಕೂಡ ಈಗ ಕುಮಾರಣ್ಣನ ನಡವಳಿಕೆಗಳಿಂದ ಬೇಸ[...] 'ಹಸ್ತ' ಲಾಘವಕ್ಕೆ ತಯಾರಾಗಿ ನಿಂತಿದ್ದಾರೆ.


ಈ ಪರಿಸ್ಥಿತಿಯ ದುರ್ಲಾಭ ಪಡೆಯಲು ಕಾ[...] ಕುಳಿತಿದ್ದ ಡಿಕೆಶಿ ಪಾಳಯ ವೆಚ್ಚ ಮಾಡಿದ ಹಣ ಮ[...] ಸಮಯಗಳು ಕೇವಲ ಈ ಎಂಎಲ್‌ಸಿ ಚುನಾವಣೆ[...] ಸೋಲು-ಗೆಲುವುಗಳ ಲೆಕ್ಕಾಚಾರಕ್ಕೆ ಮಾತ್ರ ಸೀಮಿತವ[...] ಡಿಕೆಶಿಯ ಈ ಗೆಲುವು ಜೆಡಿಎಸ್‌ನ ಭವಿಷ್ಯದ ಮೇ[...] ದೀರ್ಘಕಾಲೀನ ದುಷ್ಪರಿಣಾಮ ಬೀರುವ ಸಾಧ್ಯತೆ ಇ[...]


ಇಂಥಾ ಸಂದಿಗ್ಧ ಸನ್ನಿವೇಶದಲ್ಲಿ ಎಚ್‌ಡಿಕೆ ಚು[...] ಪ್ರಚಾರಕ ಪ್ರಶಾಂತ್ ಕಿಶೋರ್ ಅವರನ್ನು ಪತ್ತೆಮಾ[...] ತಮ್ಮ ರಾಜಕೀಯ ಭವಿಷ್ಯವನ್ನು ಹಸನು ಮಾಡುವಂ[...] ಕಾರ್ಯತಂತ್ರ ಹೆಣೆಯುವ ಜವಾಬ್ದಾ[...] ವಹಿಸಿಕೊಟ್ಟಿದ್ದಾರೆಂಬ ಗುಲ್ಲು ಹಬ್ಬಿದೆ. ಇದಕ್ಕೆ ದೊಡ್ಡಗೌ[...] ಆಶೀರ್ವಾದವೂ ಇದ್ದಿರಬಹುದು. ಈ ಪ್ರಶಾಂತ್ ಕಿಶೋ[...] ಕಾರ್ಯಾಚರಣೆಯ ವೈಖರಿಯೇ ಸ್ವಲ್ಪ ವಿಚಿತ್ರ. ತನ್ನ ಪ್ರಚಾರ[...] ಅವಧಿಯುದ್ದಕ್ಕೂ ಈತ ಸಂಬಂಧಿಸಿದ ವ್ಯಕ್ತಿಯ ಅತ್ಯ[...] ಸಮೀಪದಲ್ಲೇ ಸೆಟಲ್ ಆಗುತ್ತಾನೆ. ಅತ್ಯಂತ ಹತ್ತಿರದಿಂ[...] ಕ್ಷಣಕ್ಷಣದ ಬೆಳವಣಿಗೆಗಳ ಮೇಲೆ ನಿಗಾ ಇರಿಸಿ, ಶೀಘ್ರವಾ[...] ಪ್ರತಿಕ್ರಿಯಿಸುವುದು ಈತನ ಉದ್ದೇಶ. ಹೀಗಾಗಿ ಲೋಕಸಭಾ[...] ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಮೋದಿಯ[...] ನಿವಾಸದಲ್ಲಿ ಹಾಗೂ ಬಿಹಾರ ಚುನಾವಣೆ ಸಂದರ್ಭದ[...] ನಿತೀಶ್ ಅವರ ಅಧಿಕೃತ ನಿವಾಸದಲ್ಲೇ ಈತ ಠಿಕಾ[...] ಹೂಡಿದ್ದ.


ಈ ಸೂತ್ರವನ್ನು ಎಚ್‌ಡಿಕೆಗೆ ಅಳವಡಿಸಹೊರಟ[...] ಈ ಚತುರನಿಗೆ ಪೀಕಲಾಟಕ್ಕಿಟ್ಟುಕೊಳ್ಳುವುದು ಖಂಡಿ[...] ಎಚ್‌ಡಿಕೆ ಪ್ರಚಾರಕ್ಕಾಗಿ ಅಧಿಕೃತ ಮನೆಯಲ್ಲೋ ಅಥವ[...] ಅನಧಿಕೃತ ನಿವಾಸದಲ್ಲೋ ಎರಡರಲ್ಲಿ ಯಾವುದನ[...] ಕಾರ್ಯಸ್ಥಾನ ಮಾಡಿಕೊಳ್ಳಬೇಕೆಂಬುದು ಅಷ್ಟು ಸುಲಭವಾ[...] ಬಗೆಹರಿಯುತ್ತದೆಯೆ? ಅದು ಏನಾದರೂ ಆಗಲಿ. ಇನ[...] ಮುಂದಿನ ದಿನಗಳಲ್ಲಿ ಕರ್ನಾಟಕ ರಾಜಕೀಯದ ಮೇ[...] ಪ್ರಶಾಂತ ಕಿಶೋರ್ ಪರಿಣಾಮ ಯಾವರೀತಿಯದು[...] ಎಂಬುದು ಸದ್ಯಕ್ಕೆ ಊಹಾಪೋಹದ ವಿಚಾರವಷ್ಟೆ.

ಜೆಡಿಎಸ್ ಗ್ರಹಗತಿ ಸರಿಪಡಿಸಲು ಎಚ್‌ಡಿ[...] ಕೊಳ್ಳೇಗಾಲದ ಮಾಂತ್ರಿಕರನ್ನೋ, ಕೇರಳದ[...] ಜ್ಯೋತಿಷಿಗಳನ್ನೋ ಹುಡುಕಿಕೊಂಡು ಹೋಗಲಿಲ್ಲವಲ್ಲ[...] ಎಂಬುದಷ್ಟೆ ಕಾರ್ಯಕರ್ತರಿಗೆ ಸಮಾಧಾನದ ಸಂಗತಿ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ








ಕೆಲದೊಂದು ವರ್ಷದಿಂದ ಮುಚ್ಚಿರುವ ಮೈಷುಗರ್ ಕಾರ್ಖಾನೆ ಎಂದು ಆರಂಭವಾಗುತ್ತದೋ ಎಂದು ಮಂಡ್ಯದ ರೈತರು ತಲೆ ಮೇಲೆ ಕೈಹೊತ್ತು ಕಾರ್ಖಾನೆಯತ್ತ ಮುಖ ಮಾಡಿಕೊಂಡು ಕಾಯುತ್ತಲೇ ಇದ್ದಾರೆ. ಆದರೆ ಸಕ್ಕರೆ ಸಚಿವ ಮಹದೇವ ಪ್ರಸಾದ್ ಹೇಳಿದಂತೆ ಜನವರಿ 15ರೊಳಗೆ ಮೈಷುಗರ್ ಕಾರ್ಖಾನೆ ಆರಂಭವಾಗುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ. ಈ ಮಧ್ಯೆ ಮೈಷುಗರ್ ಕಾರ್ಖಾನೆಗೆ ಶನಿಯಂತೆ ಹೆಗಲೇರಿದ್ದ ಎಂಡಿ ಎಚ್.ಆರ್. ಮಹದೇವ್‌ನನ್ನು ವರ್ಗಾವಣೆ ಮಾಡಲಾಗಿದೆ. ಅನರ್ಹರಿಗೆ ಕೆಲಸ ಕೊಟ್ಟ ಕಾರಣಕ್ಕಾಗಿ ಈತನ ವಿರುದ್ಧ ಪೂರ್ವ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಅಲ್ಲದೇ ಈತನ ಹೆಸರು ಹಲವಾರು ಅವ್ಯವಹಾರಗಳಲ್ಲೂ ಕೇಳಿಬಂದಿತ್ತು. ಹಾಗಾಗಿ ಆವನನ್ನು ರಕ್ಷಣೆ ಮಾಡುವ ಉದ್ದೇಶದಿಂದಲೇ ಸಕ್ಕರೆ ಸಚಿವರು ವರ್ಗಾವಣೆ ಮಾಡಿ ಆ ಸ್ಥಾನಕ್ಕೆ ಪಿ.ಕೆ.ಗರ್ಗ್ ಎಂಬುವವರನ್ನು ನೇಮಕ ಮಾಡಿದ್ದಾರೆ ಎನ್ನಲಾಗುತ್ತಿದೆ. ಅಷ್ಟಕ್ಕೂ ತಾನು ವರ್ಗಾವಣೆಯಾಗಿ ಹೋಗುವ ಮುನ್ನ ಒಂದಷ್ಟು ಕಾಮಗಾರಿಗಳ ಬಿಲ್‌ಗಳಿಗೆ ಸಹಿ ಹಾಕಿಸಿಕೊಂಡು ಅವ್ಯವಹಾರ ನಡೆಸಿಯೇ ಹೋಗಿದ್ದಾನೆ ಎಂಬ ಮಾತೂ ಕೇಳಿಬರುತ್ತಿದೆ.

ಬಿತ್ತು ಕೇಸು

ಅಸ್ತಿತ್ವದಲ್ಲೇ ಇಲ್ಲದಿರುವ ಕಾಲೇಜೊಂದರಿಂದ ನಕಲಿ ಸರ್ಟಿಫಿಕೇಟ್ ತಂದಿರುವ ಆನಂದ್‌ಬಾಬು ಎಂಬಾತನನ್ನು ವಿಶೇಷ ಮುತುವರ್ಜಿಯಿಂದ ನೇಮಕ ಮಾಡಿಕೊಂಡಿದ್ದ ಎಂಡಿ ಮಹದೇವ್ ಮೇಲೆ ಡಿಸೆಂಬರ್ 30ರಂದು ಪೂರ್ವ ಠಾಣೆಯಲ್ಲಿ ಕೇಸು ದಾಖಲಾಗಿತ್ತು. ಅದೇನು ಡೀಲ್ ಕುದುರಿತ್ತೋ ಗೊತ್ತಿಲ್ಲ, ಅರ್ಹತೆಯಿಲ್ಲದ ಆನಂದಬಾಬು ಕೊಟ್ಟ


ಎಂಡಿ ಮಹದೇವ್

ಗೋಲ್‌ಮಾಲ್ ಸರ್ಟಿಫಿಕೇಟ್ ನೋಡಿಕೊಂಡು ಸಹಾಯಕ ಇಂಜಿನಿಯರ್ (ಮೆಕಾನಿಕಲ್) ಹುದ್ದೆಯನ್ನು ಆತನಿಗೆ ಮಹದೇವ್ ದಯಪಾಲಿಸಿದ್ದ. ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ನಿಯಮಾವಳಿಗಳನ್ನೆಲ್ಲಾ ಗಾಳಿಗೆ ತೂರಲಾಗಿತ್ತು. ಪತ್ರಿಕಾ ಪ್ರಕಟಣೆ, ನೇರಸಂದರ್ಶನದ ಆಹ್ವಾನವನ್ನೂ ಪ್ರಚಾರ ಮಾಡಿರಲಿಲ್ಲ. ಮೀಸಲಾತಿ, ಗರಿಷ್ಠ ಮತ್ತು ಕನಿಷ್ಠ ವೇತನ ಅನುಸರಿಸಿರಲಿಲ್ಲ. ಇದರ ವಿರುದ್ಧ ಜನಪರ ಹೋರಾಟಗಾರ ವರದರಾಜೇಂದ್ರ ಎಂಬುವರು ಪೂರ್ವ ಪೊಲೀಸ್ ಠಾಣೆಯಲ್ಲಿ ಕಂಪ್ಲೆಂಟ್ ಕೊಡಲು ಹೋಗಿದ್ದರು. ಆದರೆ ಪೂರ್ವ ಠಾಣೆಯ ಪೊಲೀಸರು ಎಂಡಿ ಮಹದೇವ್ ಮೇಲೆ ಪ್ರಕರಣ ದಾಖಲಿಸಿಕೊಳ್ಳದೆ ನೀವು ನೀಡಿರುವ ದೂರು ಸಿವಿಲ್ ಪ್ರಕರಣ ಎಂದು ತಿಳಿಸಿ ನ್ಯಾಯಾಲಯದ ಮೂಲಕ ಬಗೆಹರಿಸಿಕೊಳ್ಳಿ ಎಂದು ಸಾಗಹಾಕಿದ್ದರು.

ಹಾಗಾಗಿ ವರದರಾಜೇಂದ್ರ ಮಂಡ್ಯದ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯ ಎಂಡಿ ಮಹದೇವ್ ಹಾಗೂ ಆನಂದ್‌ಬಾಬು ಮೇಲೆ ಪ್ರಕರಣ ದಾಖಲಿಸಿ ಎಫ್‌ಐಆರ್ ಹಾಕುವಂತೆ ನಿರ್ದೇಶನ ನೀಡಿತ್ತು. ಹಾಗಾಗಿ ಪೂರ್ವ ಠಾಣೆ ಪೊಲೀಸರು ಬೇರೆ ದಾರಿಯಿಲ್ಲದೆ ಎಂಡಿ ಮಹದೇವ್ ಹಾಗೂ ಆತನ ಭಂಟ ಆನಂದ್‌ಬಾಬು ಮೇಲೆ ಮೊಕದ್ದಮೆ ಸಂಖ್ಯೆ 249/2015 ಕಲಂ 420, 406, 468,471, 467, 409, ಕೂಡ 34 ಐಪಿಸಿಯಡಿ ಪ್ರಕರಣ ದಾಖಲಿಸಿಕೊಂಡು ಎಫ್‌ಐಆರ್ ಹರಿದಿದ್ದರು.

ಎಂಡಿ ವರ್ಗಾವಣೆ

ಎಂಡಿ ಆಗಿಬಂದ ಸಂದರ್ಭದಲ್ಲಿ ಎಚ್.ಆರ್. ಮಹದೇವ್ ಮೈಷುಗರ್ ಕಾರ್ಖಾನೆಯನ್ನು ಉದ್ಧಾರ ಮಾಡಿಯೇ ಸಿದ್ಧ ಎಂದು ಹೇಳಿದ್ದಷ್ಟೆ ಬಂತು. ಆದರೆ ಅದ್ಯಾವುದನ್ನೂ ಕಾರ್ಯರೂಪಕ್ಕೆ ತರಲಿಲ್ಲ. ಮುಚ್ಚಿಹೋಗುವ ಭೀತಿಯಲ್ಲಿರುವ ಮೈಷುಗರ್ ಕಾರ್ಖಾನೆಯನ್ನು ಉಳಿಸುವುದು ಹೇಗೆ ಎಂಬುದಕ್ಕೆ



ಮಂಡ್ಯ ಮೈಷುಗರ್
ಉಂಡೂ ಹೋದ, ಕೊಂಡೂ ಹೋದ!


ತಲೆಕೆಡಿಸಿಕೊಳ್ಳದ ಮಹದೇವ್ ಅನಗತ್ಯ ವಿಚಾರಗಳಲ್ಲಿ ಮೂಗು ತೂರಿಸುವ ಮೂಲಕ ಕಾರ್ಖಾನೆ ಮುಳುಗಿಸಲು ನಿಂತ. ಕಾರ್ಮಿಕರು ಹಾಗೂ ಆಡಳಿತ ಮಂಡಳಿ ಮಧ್ಯೆ ಸಾಮರಸ್ಯ ಮೂಡಿಸುವ ಕೆಲಸ ಮಾಡಬೇಕಿದ್ದ ಮಹದೇವ್ ಕಾರ್ಮಿಕರ ಮೇಲೆ ಆರೋಪ ಮಾಡಿ ನೋಟಿಸ್ ಕೊಟ್ಟ. ತನಗಾಗದ ಒಂದಷ್ಟು ಕಾರ್ಮಿಕರನ್ನು ವಜಾ ಮಾಡಿದ. ಇದರಿಂದಾಗಿ ಕಾರ್ಮಿಕರು ಹಾಗೂ ಆಡಳಿತ ಮಂಡಳಿ ನಡುವೆ ಸಾಮರಸ್ಯವೇ ಇಲ್ಲದಂತಾಯಿತು.

ದಿನನಿತ್ಯ ಕಾರ್ಮಿಕರ ವಿರುದ್ಧ ಎಂಡಿ ಮಹದೇವ್ ಆರೋಪ ಹೊರಿಸುವುದನ್ನೇ ಪ್ರಮುಖ ಕಾಯಕ ಮಾಡಿಕೊಂಡಿದ್ದ. ಕಾರ್ಖಾನೆಯಲ್ಲಿ ಕೆಟ್ಟು ನಿಂತಿದ್ದ ಬಾಯ್ಲರ್‌ಗಳನ್ನು ಸಕಾಲಕ್ಕೆ ರಿಪೇರಿ ಮಾಡಿಸುವ ಕೆಲಸಕ್ಕೆ ಮುಂದಾಗಲಿಲ್ಲ. ಕಾರ್ಖಾನೆ ಪ್ರಾರಂಭವಾಗದ್ದರಿಂದ ಅತ್ತ ರೈತರು ಪ್ರತಿಭಟನೆ ನಡೆಸಲು ಮುಂದಾದರೆ, ಇತ್ತ ಕಾರ್ಮಿಕರು ಕೂಡ ಮಹದೇವ್ ನೀಡುತ್ತಿದ್ದ ಸರಣಿ ಕಿರುಕುಳದಿಂದ ಬೇಸತ್ತು ಪ್ರತಿಭಟನೆಗಿಳಿದರು.

ಮಂಡ್ಯಕ್ಕೆ ಎಐಸಿಸಿ ಉಪಾಧ್ಯಕ್ಷ ರಾಹುಲ್ ಗಾಂಧಿ ಭೇಟಿ ನೀಡಿದ ಸಂದರ್ಭದಲ್ಲಿ ಕಪ್ಪುಬಾವುಟ ಪ್ರದರ್ಶನ ನಡೆಸಲು ಕಾರ್ಮಿಕರು ಮತ್ತು ರೈತರು ಮುಂದಾಗಿದ್ದರು. ಆದರೆ ಸಕ್ಕರೆ ಸಚಿವ ಮಹದೇವಪ್ರಸಾದ್ ಕಾರ್ಖಾನೆಗೆ ಬಂದು ಕಾರ್ಮಿಕರನ್ನು ಸಮಾಧಾನಪಡಿಸಿಹೋದರು. ಇಷ್ಟಾದರೂ ಎಂಡಿ ಮಹದೇವ್ ತನ್ನ ಕಾರ್ಮಿಕ ವಿರೋಧಿ ನೀತಿ ಬಿಡಲಿಲ್ಲ.

ಯಾವಾಗ ಜನವರಿ 8ರಂದು ಎಂಡಿ ಮಹದೇವ್‌ನನ್ನು ವರ್ಗಾವಣೆ ಮಾಡಿ ಆ ಜಾಗಕ್ಕೆ ಪಿ.ಕೆ.ಗರ್ಗ್‌ರನ್ನು ಸರ್ಕಾರ ನೇಮಿಸಿತೋ ಆಗಿನಿಂದಲೇ ಮಹದೇವ್ ಲೋಕಾಯುಕ್ತ ತನಿಖೆಯ ವ್ಯಾಪ್ತಿಯಲ್ಲಿರುವ ಒಂದಷ್ಟು ಕಾಮಗಾರಿಗಳ ಬಿಲ್ ಮಾಡಲು ಮುಂದಾದ. ಪಿ.ಕೆ.ಗರ್ಗ್ ಅಧಿಕಾರ ವಹಿಸಿಕೊಂಡರೆ ನಮಗೆ ನಷ್ಟ ಎಂದು ಗುತ್ತಿಗೆದಾರರು ಬಾಯಿ ಬಡಿದುಕೊಂಡದ್ದರಿಂದ ಅವರನ್ನು ರಕ್ಷಿಸಲು ಮುಂದಾದ ಮಹದೇವ್ ತರಾತುರಿಯಲ್ಲಿ ಜನವರಿ 9ರಂದು ಬಿಲ್ ಮಾಡುವಂತೆ ಕಾರ್ಖಾನೆಯ ಮುಖ್ಯ ಹಣಕಾಸು ಅಧಿಕಾರಿ ಮಾದಪ್ಪನಿಗೆ ಸೂಚಿಸಿದ್ದ. ಆದರೆ ಮಹದೇವ್ ಹೇಳಿದ ಕಾಮಗಾರಿಗಳ ಬಗ್ಗೆ ಲೋಕಾಯುಕ್ತ ತನಿಖೆ ನಡೆಯುತ್ತಿದ್ದರಿಂದ ಬಿಲ್ ಮಾಡಲು ಮಾದಪ್ಪ ಹಿಂದೇಟು ಹಾಕಿದರು.

ಇದರಿಂದ ಸಿಟ್ಟಿಗೆದ್ದ ಮಹದೇವ್ ಮಾದಪ್ಪನನ್ನೇ ಅಮಾನತ್ತಿನಲ್ಲಿಟ್ಟು, ತನ್ನ ಮಾತು ಕೇಳುವ ಹಣಕಾಸು ನಿರ್ವಾಹಕ ರಂಗನಾಥ ಎಂಬಾತನನ್ನು ತಂದು ಕೂರಿಸಿ ಕಾಮಗಾರಿ ಬಿಲ್‌ಗಳಿಗೆ ಸಹಿ ಹಾಕಿಸಿಕೊಂಡಿದ್ದಾನೆ. ಈ ರಂಗನಾಥನ ಆಯ್ಕೆಯೂ ಪಾರದರ್ಶಕವಾಗಿ ನಡೆದಿಲ್ಲ, ಅಲ್ಲದೆ ಈತ 2 ಕೋಟಿ ಹಗರಣದಲ್ಲಿ ಭಾಗಿಯಾಗಿದ್ದಾನೆ ಎಂಬ ಆರೋಪದ ಮೇಲೆ ಹಿಂದೆ ಎಂಡಿ ಆಗಿದ್ದ ಅಶ್ವಥನಾರಾಯಣರೇ ಟರ್ಮಿನೇಟ್ ಮಾಡಿದ್ದಾರೆ. ಇಂತಹ ವ್ಯಕ್ತಿಯನ್ನು ಮಾದಪ್ಪನ ಜಾಗದಲ್ಲಿ ಕೂಡಿಸಿ ತನಗೆ ಬೇಕಾದ ಗುತ್ತಿಗೆದಾರರು, ಸರಬರಾಜುದಾರರ ಬಿಲ್‌ಗಳಿಗೆ ಮಹದೇವ್ ಸಹಿ ಹಾಕಿಸಿಕೊಂಡಿದ್ದಾನೆ. ಅಲ್ಲದೆ ತಾನಾಗೆ ಕೆಲಸ ಬಿಟ್ಟು ಹೋದ ಹೇಮಂತ್‌ಕುಮಾರ್ ಎಂಬಾತನಿಗೆ 3 ತಿಂಗಳ ವೇತನ ಪಾವತಿಯ ಚೆಕ್ ಸೇರಿದಂತೆ ಒಟ್ಟಾರೆ ಒಂದು ಕೋಟಿ ರೂ.ಗಳಿಗೂ ಹೆಚ್ಚಿನ ಮೊತ್ತದ ಚೆಕ್‌ಗಳಿಗೆ ಮಹದೇವ್ ಸಹಿಹಾಕಿಸಿಕೊಳ್ಳಲು ಓಡಾಡುತ್ತಿದ್ದಾನೆಂಬ ಮಾಹಿತಿ ಕಾರ್ಖಾನೆಯ


ಮಹದೇವ್ ಪ್ರಸಾದ್


ಅಂಗಳದಿಂದಲೇ ಕೇಳಿಬರುತ್ತಿದೆ. ಈ ಅವ್ಯವಹಾರದ ಬಗ್ಗೆ ಸಾಮಾಜಿಕ ಕಾರ್ಯಕರ್ತ ವರದರಾಜೇಂದ್ರ ನೂತನ ಎಂಡಿ ಪಿ.ಕೆ.ಗರ್ಗ್‌ರವರಿಗೂ ಪತ್ರ ಬರೆದು, ಬಿಲ್ ಪಾವತಿ ತಡೆ ಹಿಡಿಯುವಂತೆ ಮನವಿ ಮಾಡಿದ್ದಾರೆ.

ಅಲ್ಲದೇ ತನ್ನದೇ ಗ್ಯಾಂಗಿನ ಸುಷ್ಮಾ ಎಂಬಾಕೆಯನ್ನು ಇಷ್ಟುದಿನ ಅಸ್ತಿತ್ವದಲ್ಲೇ ಇಲ್ಲದ ಸಹಾಯಕ ಸಾಮಗ್ರಿ ನಿರ್ವಾಹಕ ಎಂಬ ಹುದ್ದೆ ತೆರೆದು ಪ್ರತಿಷ್ಠಾಪಿಸಿದ್ದಾನೆ. ಕಾರ್ಖಾನೆಗೆ ಅಗತ್ಯವಸ್ತುಗಳ ಖರೀದಿಯಲ್ಲಿ ನಡೆದಿರುವ ಕಮೀಷನ್ ವ್ಯವಹಾರ ಬಯಲಾಗಿ ಸುಷ್ಮಾ ಸಿಕ್ಕಿಹಾಕಿಕೊಳ್ಳಬಾರದೆಂಬ ಹಿನ್ನೆಲೆಯಲ್ಲಿ ಎಂಡಿ ಮಹದೇವ್ ತನ್ನ ವರ್ಗಾವಣೆಗೂ ಮುನ್ನ ಆಕೆಯನ್ನು ಸಹಾಯಕ ವಾಣಿಜ್ಯ ನಿರ್ವಾಹಕ ಹುದ್ದೆಯಲ್ಲಿ ಕೂರಿಸಿ ಹೋಗಿದ್ದಾನೆ. ಅಂದಹಾಗೆ, ವರ್ಗಾವಣೆಗೊಂಡಿರುವ ಎಚ್.ಆರ್.ಮಹದೇವ್‌ಗೆ ಸರ್ಕಾರ ಇನ್ನೂ ಯಾವುದೇ ಸ್ಥಾನ ಸೂಚಿಸಿಲ್ಲ. ನನಗೆ ಸಕ್ಕರೆ ಸಚಿವ ಮಹದೇವಪ್ರಸಾದ್ ಕೃಪೆ ಇರುವುದರಿಂದ ಸಕ್ಕರೆ ಆಯುಕ್ತ ಹುದ್ದೆಯಲ್ಲಿ ಕೂರುತ್ತೇನೆ ನೋಡ್ತಿರಿ ಎಂದು ಎಚ್.ಆರ್.ಮಹದೇವ್ ಹೇಳಿಕೊಂಡು ತಿರುಗುತ್ತಿದ್ದಾನೆ.

ಸಕ್ಕರೆ ಆಯುಕ್ತರಾಗಿರುವ ಅಯ್ಯಪ್ಪನವರು ಸಹಕಾರಿ ಸಂಘಗಳ ನೋಂದಣಿ ನಿಬಂಧಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಎರಡೆರಡು ಹುದ್ದೆ ಹೊಂದಿರುವ ಅಯ್ಯಪ್ಪನವರಿಂದ ಸಕ್ಕರೆ ಆಯುಕ್ತ ಹುದ್ದೆಯನ್ನು ತೆರವು ಮಾಡಿಸಿ ಅದರಲ್ಲಿ ಎಚ್.ಆರ್. ಮಹದೇವ್‌ರನ್ನು ಪ್ರತಿಷ್ಠಾಪಿಸುವ ಪ್ರಯತ್ನಕ್ಕೆ ಸಚಿವ ಮಹದೇವ್ ಪ್ರಸಾದ್ ಮುಂದಾಗಿದ್ದಾರೆಂಬ ಮಾಹಿತಿಯಿದ್ದು, ಹಾಗೊಂದು ವೇಳೆ ಎಚ್.ಆರ್.ಮಹದೇವ್ ಸಕ್ಕರೆ ಆಯುಕ್ತ ಹುದ್ದೆಯಲ್ಲಿ ಕೂತರೆ ಮತ್ತೆ ಮೈಷುಗರ್ ಕಾರ್ಖಾನೆ ವ್ಯವಹಾರಗಳಲ್ಲಿ ಮೂಗು ತೂರಿಸುವುದರಲ್ಲಿ ಯಾವುದೇ ಅನುಮಾನವಿಲ್ಲ.

ಈ ಕುರಿತು ಕಡೇಪಕ್ಷ ಸಿಎಂ ಸಾಹೇಬರಾದರೂ ಎಚ್ಚರಗೊಳ್ಳದಿದ್ದರೆ ಮೈಷುಗರ್ ಎಂಬ ಗತಕಾಲದ ಆರ್ಥಿಕ ನಾಡಿ ಹಳೆಯುಳಿಕೆಯ ಪುಟ ಸೇರುವುದರಲ್ಲಿ ಅನುಮಾನವೇ ಇಲ್ಲ. ಆ ಕೆಲಸ ಮಾಡಲು ಎಚ್.ಆರ್.ಮಹಾದೇವ್‌ನಂತಹ ಒಬ್ಬ ಭ್ರಷ್ಟ ಸಾಕು! ಮೈಷುಗರ್ ಅಂಗಳದಲ್ಲಿ ಇಷ್ಟೆಲ್ಲಾ ಅಪರಾತಪರಾ ನಡೆಯುತ್ತಿದ್ದರೂ ತನಗೇನೂ ಸಂಬಂಧವೇ ಇಲ್ಲದಂತಿರುವ ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್‌ರನ್ನು ಆಯ್ಕೆ ಮಾಡಿದ ತಪ್ಪಿಗೆ ಮಂಡ್ಯದ ಜನತೆ ತಮ್ಮನ್ನು ತಾವೇ ಶಪಿಸಿಕೊಳ್ಳುವಂತಾಗಿದೆ.

• ವರದಿಗಾರ



(k) ವಿಳಾಸ : . Mandya , Karnataka (l) ಲಿಂಗ : Male

(m) ಫಿರ್ಯಾದುದಾರ ಖುದ್ದಾಗಿ ನೋಡಿದ್ದರೆ ಅಥವಾ ಕೇಳಿಸಿಕೊಂಡಿದ್

6. ಗೊತ್ತಿರುವ / ಅನುಮಾನಿತ/ಅಪರಿಚಿತ ವ್ಯಕ್ತಿಯ ಪೂರ್ತಿ ವಿವರಗಳು

Sl.No.	ಹೆಸರು / ತಂದೆಯ ಹೆಸರು / ಜಾತಿ / ವಿಳಾಸ	ವಿಧ	ವ್ಯಕ್ತಿಯ ವಿಧ	ಲಿಂಗ	ವಯಸ್ಸು	ವೃತ್ತಿ
1	Anandababu H M(A1) / Marigowda H C ,Assistant Engineer,Mysore Sugar Company,Mandya CityMandya, Karnataka	Accused	Common man	Male	32	Engineers
2	Mahadev H R(A2) / Revanna ,Managing Director,,Mysore Sugar Company,Mandya CityMandya, Karnataka	Accused	Common man	Male	54	Govt. official gazetted

7. ನೊಂದವರ ವಿವರಗಳು

Sl. No	ಹೆಸರು	ವಿಳಾಸ	ಗಾಯದ ವಿಧ	ಲಿಂಗ	ವಯಸ್ಸು	ವೃತ್ತಿ
1						

8. ಕಳುವಾಗಿರುವ / ಬಾಗಿಯಾಗಿರುವ ಸ್ವತ್ತುಗಳ ವಿವರಗಳು

Sl.No	Property Type	Item description	Estimated Value (in Rs.)
1			

ಕಳುವಾಗಿರುವ / ಬಾಗಿಯಾಗಿರುವ ಸ್ವತ್ತುಗಳ ಮೌಲ್ಯ :

9. ಪಂಚನಾಮೆ ವರದಿ / ಯು.ಡಿ. ಕೇಸ್ ಸಂಖ್ಯೆ :

10. ಪ್ರಥಮ ವರ್ತಮಾನ ವರದಿಯ ವಿವರಗಳು

ಎಂಡಿ ಮಹದೇವ್ ಮತ್ತು ಆನಂದಬಾಬು ಮೇಲೆ ದಾಖಲಾಗಿರುವ ಎಫ್‌ಐಆರ್


ಲಿಂಗಾಯತರ ಸುತ್ತ ಚೆಡ್ಡಿ ಶರಪಂಜರ!

ಕಾಂಗ್ರೆಸ್ ಅಧಿಕಾರಕ್ಕೆ ಬಂದಮೇಲೆ ಕೀಳು ಜಾತಿಯವರಿಂದ ವೀರಶೈವ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ, ದೌರ್ಜನ್ಯ ಹೆಚ್ಚಾಗಿದೆಯೆ?

ಎಲ್ಲಿ? ಹೇಗೆ? ಯಾವ ಕೀಳು ಜಾತಿಯವರಿಂದ? ಇತ್ಯಾದಿ ಪ್ರಶ್ನೆಗಳನ್ನು ಯಾರೂ ಕೇಳಬಾರದು. ಅದಕ್ಕೆ ಯಾರಿಂದಲೂ ಉತ್ತರ ಸಿಗಲಾರದು!

ಈ ಥರದ ಹಿಟ್ ರನ್ ಕುಚೇಷ್ಟೆಯೊಂದನ್ನು ಹುಟ್ಟುಹಾಕಿದ್ದು ಅಖಿಲ ಭಾರತ ವೀರಶೈವ ಮಹಾಸಭಾ. ಅಂದರೆ ಹಾಲೀ ಕಾಂಗ್ರೆಸ್ ಸರ್ಕಾರದ ಪ್ರತಿಷ್ಠಿತ ಸಚಿವರಾದ ಶಾಮನೂರು ಶಿವಶಂಕರಪ್ಪ ಶಾಸಕ ಈಶ್ವರ್ ಖಂಡ್ರೆ, ಕಾಂಗ್ರೆಸ್ ನಾಯಕರಾದ ಭೀಮಣ್ಣ ಖಂಡ್ರೆ, ಜಾತಿ ಧುರೀಣರಾದ ತಿಪ್ಪಣ್ಣ, ಅಲ್ಲಂ ವೀರಭದ್ರಪ್ಪ, ಯಡಿಯೂರಪ್ಪ, ನಿರಾಣಿ, ಜಗದೀಶ್ ಶೆಟ್ಟರ್, ಪ್ರಮೀಳಾ ನೇಸರ್ಗಿ, ರೇಣುಕಾಚಾರ್ಯ, ಕೊಳದ ಮಠದ ಸ್ವಾಮೀಜಿ, ವಿ. ಸೋಮಣ್ಣ- ಹೀಗೆ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿದಂತೆ ಕರ್ನಾಟಕಾದ್ಯಂತ ವ್ಯಾಪಿಸಿದ ಲಿಂಗಾಯತ ಮಠಗಳು, ಸ್ವಾಮಿಗಳು, ಹಿರಿಯ ಅಧಿಕಾರಿಗಳು, ಶಿಕ್ಷಣ ಉದ್ದಿಮೆದಾರರೆಲ್ಲರನ್ನೂ ಒಳಗೊಂಡ ವೀರಶೈವ ಮಹಾಸಭಾ ಏಕಾಏಕಿ ತಮ್ಮ ಜನಾಂಗದ ಹೆಣ್ಣು ಮಕ್ಕಳನ್ನು ಕೀಳು ಜಾತಿಯವರ ದೌರ್ಜನ್ಯ, ಅತ್ಯಾಚಾರಗಳಿಂದ ಕಾಪಾಡಿ ಕೊಳ್ಳುವ ಅನಿವಾರ್ಯಕ್ಕೆ ಬಿದ್ದಿದೆಯೆ?

ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ಮೇಲೆ ಕೀಳುಜಾತಿಯವರೆಲ್ಲ ಸೇರಿಕೊಂಡು ವೀರಶೈವ ಸಮಾಜದ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯಕ್ಕಿಳಿದಿದ್ದಾರೆಂದು ಯಾವ ಆಧಾರದ ಮೇಲೆ



ಹೇಳುತ್ತಿದ್ದಾರೆ?

ಇಂಥ ಯಾವ ಪ್ರಶ್ನೆಗಳಿಗೂ ವೀರಶೈವ ಮಹಾಸಭಾದ ಪದಾಧಿಕಾರಿಗಳ ಬಳಿ ಉತ್ತರವಿಲ್ಲ. ಯಾರೇ ಕೇಳಲಿ ನಮಗೂ ಅದಕ್ಕೂ ಸಂಬಂಧವಿಲ್ಲ ಎನ್ನುತ್ತಾರೆ. ಅದು ಕಣ್ತಪ್ಪಿನಿಂದಾದ ಪ್ರಮಾದವಷ್ಟೇ ಎನ್ನುತ್ತಿರುವುದು ಮಹಾಸಭಾದ ಪ್ರಧಾನ ಕಾರ್ಯದರ್ಶಿ ಈಶ್ವರ್ ಖಂಡ್ರೆಯವರು ಮಾತ್ರ. ಹಾಗಾದರೆ ಇಂಥಾದ್ದೊಂದು ಆರೋಪ ಬಂದಿದ್ದಾದರೂ ಎಲ್ಲಿಂದ?

ಕೀಳುಜಾತಿ

ಕಳೆದ ವರ್ಷ ಅಂದರೆ 2015ರ ಜನವರಿಯಲ್ಲಿ ಬೆಂಗಳೂರು ಆರ್.ಟಿ. ನಗರದ ತರಳಬಾಳು ಕೇಂದ್ರದಲ್ಲಿ ನಡೆದದ್ದು ನಲವತ್ತನೇ ಅಖಿಲ ಭಾರತ ವೀರಶೈವ ಮಹಾಸಭಾದ ವಾರ್ಷಿಕ ಅಧಿವೇಶನ. ಇದೇ ಶಾಮನೂರು, ಈಶ್ವರ್ ಖಂಡ್ರೆ, ಭೀಮಣ್ಣ ಖಂಡ್ರೆ, ಎಸ್.ಆರ್. ಪಾಟೀಲ್, ಶಂಕರ್ ಬಿದರಿ, ಲೀಲಾದೇವಿ ಆರ್. ಪ್ರಸಾದ್, ಯಡಿಯೂರಪ್ಪ ಪ್ರಮೀಳಾ ನೇಸರ್ಗಿ ಮುಂತಾದವರೆಲ್ಲ ಆ ಅಧಿವೇಶನದಲ್ಲಿ ಭಾಗವಹಿಸಿದ್ದರು. 2015ರ ಜನವರಿ 4ರಂದು ನಡೆದ ಈ ಸಮಾವೇಶದಲ್ಲಿ ತೀರ ವಿಲಕ್ಷಣವೆಂಬಂತೆ ವಿಚಿತ್ರ ಪ್ರಸ್ತಾಪವೊಂದನ್ನು ಎತ್ತಿದ್ದು ಬೆಂಗಳೂರಿನ ಡಾ. ಹಿರೇಗೌಡ ಬಸವರಾಜಪ್ಪ. 'ಅನ್ಯಜಾತಿಯ ಕೀಳು ಜನಾಂಗದವರು ನಮ್ಮ ಲಿಂಗಾಯತರ ಹೆಣ್ಣುಮಕ್ಕಳಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದಾರೆ. ಮದುವೆಗೆ ಬಲಾತ್ಕಾರ ಮಾಡುತ್ತಿದ್ದಾರೆ. ಇದಕ್ಕೆ ಒಪ್ಪದ ನಮ್ಮ ಹೆಣ್ಣುಮಕ್ಕಳನ್ನು ಕೊಲೆ ಮಾಡುತ್ತಿದ್ದಾರೆ. ಇದರ ವಿರುದ್ಧ ನಮ್ಮ ಜನಾಂಗದ ಹೆಣ್ಣುಮಕ್ಕಳ ರಕ್ಷಣೆಗೆಂದೇ ಭಜರಂಗದಳ, ಭೀಮಸೇನೆ, ಶಿವಸೇನೆ ಮಾದರಿಯಲ್ಲಿ ವೀರಬಸವ ಸೇನೆಯನ್ನು ಸ್ಥಾಪಿಸಬೇಕು. ಇದಕ್ಕೆ ಪ್ರಮೀಳಾ ನೇಸರ್ಗಿಯವರನ್ನು ಅಧ್ಯಕ್ಷರನ್ನಾಗಿ ಮಾಡಬೇಕು. ಈ ಸೇನೆಗೆ ಎನ್. ಕೇಶವ ಮೂರ್ತಿ, ರೇಣುಕಾಚಾರ್ಯರಂಥವರು ನಾಯಕರಾಗಬೇಕು.

ಇದು ಅವತ್ತು ಡಾ. ಹಿರೇಗೌಡ ಬಸವರಾಜಪ್ಪನವರು ವೀರಶೈವ ಮುಖಂಡರಲ್ಲಿ ಮಾಡಿಕೊಂಡ ಮನವಿ. ಸಂಘದ ವಾರ್ಷಿಕ ಸಭೆಯಲ್ಲಿ ಜನಾಂಗದ ಹಿತದೃಷ್ಟಿಗೆ ಸಂಬಂಧಪಟ್ಟಂತೆ ಇಂಥ ಅನೇಕ ಕೋರಿಕೆಗಳು, ಸಲಹೆ, ಸೂಚನೆಗಳು ಬರುವುದು ಮಾಮೂಲು. ಈ ಥರದ ಸಲಹೆಗಳೆಲ್ಲವನ್ನೂ ವಾರ್ಷಿಕ ವರದಿಯಲ್ಲಿ ಪ್ರಕಟಿಸಲೇಬೇಕು ಎಂದಾಗಲಿ, ಮುಂದಿನ ವರ್ಷದ ತನಕ ಕಾದಿದ್ದು ಅದಕ್ಕೆ ಈ ಬಾರಿ ಉತ್ತರಿಸಲೇಬೇಕು ಎಂದಾಗಲಿ ನಿಯಮವೇನಿಲ್ಲ.


ಆದರೆ 2015ರ ಜನವರಿಯ ವಾರ್ಷಿಕ ಸಭೆಯಲ್ಲಿ ಹಿರೇಗೌಡ ಬಸವರಾಜಪ್ಪನವರು ಕೇಳಿದ ಈ ಉತ್ಪ್ರೇಕ್ಷಿತ, ಅತಿರಂಜಿತ, ಕಪೋಲಕಲ್ಪಿತ ಪ್ರಸ್ತಾಪವನ್ನು 2016ರ ವಾರ್ಷಿಕ ವರದಿಯಲ್ಲಿ ಪ್ರಕಟಿಸಲಾಗಿದೆ. ಇದಕ್ಕೆ 'ಮಹಾಸಭಾದ ಸಂವಿಧಾನ ಪ್ರಕಾರ ಕಾರ್ಯಸಾಧುವಲ್ಲ...!' ಎಂಬ ಉತ್ತರವನ್ನೂ ಸೇರಿಸಿ ಪ್ರಕಟಿಸಲಾಗಿದೆ. ಸಂವಿಧಾನದ ಪ್ರಕಾರ ಸಾಧ್ಯವೇ ಇಲ್ಲದ, ಮಹಾಸಭಾದ ಸಂವಿಧಾನದ ಇಂಥಾದ್ದೊಂದು ಸಾಧ್ಯತೆಗೆ ಅವಕಾಶವೇ ಇಲ್ಲದ ವಿಷಯವೊಂದನ್ನು ಯಾವ ಕಾರಣಕ್ಕೆಂದು ವಾರ್ಷಿಕ ವರದಿಯಲ್ಲಿ ಮತ್ತೆ ಪ್ರಸ್ತಾಪಿಸಲಾಯಿತು?

ಬಿಜೆಪಿಯ ನೆರಳಲ್ಲಿ


ಇದು ಯಾರಿಗೂ ಅರ್ಥವಾಗದ ಸಂಗತಿ. ಸಂವಿಧಾನ ದಲ್ಲಿ ಅವಕಾಶವೇ ಇಲ್ಲದ ಸಂಗತಿಯೊಂದನ್ನು ಉದ್ದೇಶ ಪೂರ್ವಕವಾಗಿ ವಾರ್ಷಿಕ ವರದಿಯಲ್ಲಿ ಮುದ್ರಿಸಿದ್ದು ಯಾರು?

ಸದ್ಯ ಶಾಮನೂರು ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾದರೆ ಈಶ್ವರ್ ಖಂಡ್ರೆ ಇದರ ರಾಷ್ಟ್ರೀಯ ಕಾರ್ಯದರ್ಶಿ. ರಾಜ್ಯ ಅಧ್ಯಕ್ಷರಾಗಿರುವುದು ಸದ್ಯ ಬಿಜೆಪಿಯಲ್ಲಿ ಗುರುತಿಸಿಕೊಳ್ಳುತ್ತಿರುವ ಎನ್. ತಿಪ್ಪಣ್ಣ. ಈ ಹಿಂದೆ ಜೆಡಿಎಸ್ ರಾಜ್ಯಾಧ್ಯಕ್ಷರಾಗಿದ್ದ ತಿಪ್ಪಣ್ಣ ಕಾಲಕ್ರಮೇಣ ದೇವೇಗೌಡರ ವಿರುದ್ಧ ಮುನಿಸಿಗೆ ಬಿದ್ದು ಬಿಜೆಪಿಗೆ ಬಂದವರು. ಶಾಮನೂರು ಪುತ್ರ ಗಣೇಶ್ ಇದರ ರಾಜ್ಯ ಉಪಾಧ್ಯಕ್ಷರು. ಮಾಜಿ ಮಂತ್ರಿ ವಿ. ಸೋಮಣ್ಣ ಇದಕ್ಕೆ ಉಪಾಧ್ಯಕ್ಷರು. ಪರಮಶಿವಯ್ಯ, ಮಲ್ಲೇಗೌಡ ಎಸ್. ಪಾಟೀಲ್, ಪ್ರಭಾಕರ್ ಕೋರೆ, ಸುಧಾ ಪಾಟೀಲ್, ಮಲ್ಲೇಗೌಡ ಪಾಟೀಲ್, ಚರಂತಿಮಠ್, ದೇವರಾಯ ನಾಡಪಲ್ಲಿ ಮಲ್ಹಾರ್ ಕಾರೆಡ್ಡಿ ಇತ್ಯಾದಿ ರಾಜ್ಯಮಟ್ಟದ ಪದಾಧಿಕಾರಿಗಳ ಪೈಕಿ ಬಹುತೇಕರು ಬಿಜೆಪಿ ಮತ್ತು ವಿಶೇಷವಾಗಿ ಯಡ್ಡಿ ಬಗ್ಗೆ ಒಲವಿಟ್ಟುಕೊಂಡವರೆ.

⏭ 12









ಬಸವಣ್ಣನ ಕಾಳಜಿಗೆ ಬೆಂಕಿಯಿಟ್ಟು ಚಳಿ ಕಾಯಿಸಿಕೊಂಡವರು



ವೀರಶೈವ ಮಹಾಸಭಾದ ಅಧ್ಯಕ್ಷ ಎನ್. ತಿಪ್ಪಣ್ಣರನ್ನು ಈ ಬಗ್ಗೆ ಪ್ರಶ್ನಿಸಿದರೆ 'ಹೌದು ಕಾಂಗ್ರೆಸ್ ಸರ್ಕಾರದಲ್ಲಿ ವೀರಶೈವರಿಗೆ ತುಂಬಾ ಅನ್ಯಾಯವಾಗಿದೆ' ಎನ್ನುತ್ತಾರೆ. 'ಯಾವ ರೀತಿ?' ಎಂದರೆ 'ಬಿಜೆಪಿ ಅಧಿಕಾರದಲ್ಲಿದ್ದಾಗ ಏನೆಲ್ಲಾ ಮಹತ್ವವಿತ್ತೋ ಅಂಥ ಯಾವ ಸ್ಥಾನಮಾನವೂ ಕಾಂಗ್ರೆಸ್ ಸರ್ಕಾರದಲ್ಲಿ ನಮ್ಮ ಜನಾಂಗಕ್ಕೆ ಸಿಕ್ಕಿಲ್ಲ...' ಎನ್ನುತ್ತಾರೆ. ಅಲ್ಲಿಗೆ ಎಂಥವರಿಗೂ ವರಸೆ ಅರ್ಥವಾಗುವಂಥದ್ದೇ.

ಹೋಗಲಿ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಅಂತೀರಲ್ಲ ಅದಕ್ಕೇನಾದರೂ ಉದಾಹರಣೆ ಕೊಡುತ್ತೀರಾ ಎಂದರೆ ಎಲ್ಲವನ್ನೂ ನಾನು ಬಿಡಿಸಿ ಹೇಳಲು ಸಾಧ್ಯವಿಲ್ಲ ಎನ್ನುತ್ತಾರೆ. ಯಾವುದಕ್ಕೂ ಮುಖ ಕೊಡುವುದಿಲ್ಲ, ಸ್ಪಷ್ಟ ಪುರಾವೆಯಿಲ್ಲ, ಇದು ಬಿಜೆಪಿ ಪರ ತಿಪ್ಪಣ್ಣ ಮಾಡುತ್ತಿರುವ ಬ್ಯಾಟಿಂಗ್ ಎಂಬುದನ್ನು ಅವರ ತಿಪ್ಪೆ ಸಾರಿಸುವ ವರಸೆಗಳೇ ಸಾರಿ ಹೇಳುತ್ತವೆ.

ಪ್ರತಿ ವರ್ಷದ ವಾರ್ಷಿಕ ವರದಿಯನ್ನು ಮುದ್ರಣಕ್ಕೆ ಕಳಿಸುವ ಮುನ್ನ ಪರಿಶೀಲಿಸುತ್ತಿದ್ದದ್ದು ಕಾರ್ಯದರ್ಶಿ ಈಶ್ವರ್ ಖಂಡ್ರೆ. ತಿಪ್ಪಣ್ಣ ಕೂಡ ಮುದ್ರಣಕ್ಕೂ ಮುನ್ನ ವರದಿಯನ್ನು ಓದಿದ್ದಾರೆ. ಶಾಮನೂರು ಸಾಹೇಬರ ಆರೋಗ್ಯ ಮತ್ತು ಮಂತ್ರಿಗಿರಿಯ ತರಾತುರಿಯಲ್ಲಿ ಇಂಥದ್ದನ್ನೆಲ್ಲ ಪರಿಶೀಲಿಸಲು ಸಮಯವೂ ಇಲ್ಲ ಸಾಧ್ಯವೂ ಇಲ್ಲ. ಅಂದರೆ ಕಂಡೂಕಂಡೂ ಉದ್ದೇಶಪೂರ್ವಕವಾಗಿಯೇ ಹಿರೇಗೌಡ ಬಸವರಾಜಪ್ಪನವರ ಪ್ರಸ್ತಾಪವನ್ನು ಮುದ್ರಿಸಲಾಗಿದೆ. ಹೇಗೂ ಕಾಂಗ್ರೆಸ್ ಆಳ್ವಿಕೆಯಿದೆಯಲ್ಲ; ಜನಾಂಗದ ಯಾರಿಗಾದರೂ ಇದು ಸರಿಯೆನಿಸಿದರೆ ಅನ್ನಿಸಲಿ ಬಿಡಿ ಎಂಬ ಉಡಾಫೆ ಮತ್ತು ಕುಚೇಷ್ಟೆ.

ಯಾವತ್ತು ಇದು ಲೀಲಾದೇವಿ ಪ್ರಸಾದ್‌ರ ಕಣ್ಣಿಗೆ ಬಿತ್ತೋ ಬಿಸಿ ಮುಟ್ಟಿದೆ. ಲೀಲಾದೇವಿ ಜನತಾ ಪರಿವಾರದಲ್ಲಿ ಮಂತ್ರಿಯಾಗಿದ್ದವರು. ನಿಜ ಶರಣೆ. ಸಂಘಟನೆಯ ವಾರ್ಷಿಕ ವರದಿಯಲ್ಲೇ 'ಕೀಳು ಜಾತಿ' ಎಂಬ ಪದವಿರುವುದನ್ನು ಗಂಭೀರವಾಗಿ ಪರಿಗಣಿಸಿ ಅದನ್ನು ಪ್ರಮೀಳಾ ನೇಸರ್ಗಿಯವರಿಗೂ ತಿಳಿಸಿದ್ದಾರೆ. ಇಬ್ಬರೂ ಸೇರಿಕೊಂಡೇ ಈ ಬಾರಿಯ ವಾರ್ಷಿಕ ಸಭೆಯಲ್ಲಿ 'ಬಸವಣ್ಣನವರ ಆದರ್ಶಕ್ಕೇ ದ್ರೋಹ ಮಾಡ್ತೀರಲ್ಲಾ. ನೀವೇನು ವೀರಶೈವರಾ...?' ಎಂದೆಲ್ಲಾ ಪ್ರತಿಭಟಿಸಿದ್ದಾರೆ. ಪತ್ರಿಕೆಗಳಲ್ಲದು ಸುದ್ದಿಯಾಗಿದ್ದೇ ತಡ ತಿಪ್ಪಣ್ಣನಿಗೆ ಒಳಗೊಳಗೇ ಖುಷಿ. ಬಿಜೆಪಿ ಬೆಂಬಲಿತ ಪದಾಧಿಕಾರಿಗಳಿಗೆ ತಮ್ಮ ಉದ್ದೇಶ ಈಡೇರಿದ ವಿಕಟ ಖುಷಿ. ಈಶ್ವರ್ ಖಂಡ್ರೆಯಂಥವರಿಗೆ ಬಿದ್ದ ಬೆಂಕಿಯಲ್ಲಿ ತನ್ನ ಬೇಳೆ ಬೇಯಿಸಿಕೊಳ್ಳುವ ಸಡಗರ. ಬಸವಣ್ಣನ ಆತ್ಮಕ್ಕೆ ಬೆಂಕಿಬಿದ್ದರೆ ಎಲ್ಲರೂ ಚಳಿ ಕಾಯಿಸಿಕೊಂಡವರೇ...

ವೀರಶೈವ ಓಟ್‌ಬ್ಯಾಂಕ್ ಷಡ್ಯಂತ್ರದ ಹಿಂದೆ...

'ಕೀಳುಜಾತಿಯವರಿಂದ ಜನಾಂಗದ ಹೆಣ್ಣುಮಕ್ಕಳ ಮೇಲೆ ಕೊಲೆ, ಅತ್ಯಾಚಾರ, ಲೈಂಗಿಕ ಕಿರುಕುಳ'ಗಳೆಂಬ ವಾಕ್ಯ ಮತ್ತು ಶಿವಸೇನೆ, ಭಜರಂಗ ದಳದ ಮಾದರಿಯಲ್ಲಿ 'ವೀರ ಬಸವ ಸೇನೆ' ಸ್ಥಾಪನೆಯ ಪ್ರಸ್ತಾಪವನ್ನು ಉದ್ದೇಶಪೂರ್ವಕವಾಗೇ ವಾರ್ಷಿಕ ವರದಿಯಲ್ಲಿ ಮುದ್ರಿಸಲಾಯಿತೆಂಬ ಬಗ್ಗೆ ಬೆಂಗಳೂರಿನ ಕೆಲ ಪದಾಧಿಕಾರಿಗಳೇ ಬಾಯಿ ಬಿಡುತ್ತಾರೆ.



ಅದು ಕಾಂಗ್ರೆಸ್ ಸರ್ಕಾರವೆಂದರೇನೇ ದಲಿತರು, ಮುಸ್ಲಿಮರು, ಕ್ರೈಸ್ತರ ಸರ್ಕಾರವೆಂದು ಬಿಂಬಿಸುವುದು. ವೀರಶೈವರಿಗೆ ಕಾಂಗ್ರೆಸ್ ಆಳ್ವಿಕೆಯಲ್ಲಿ ಯಾವುದೇ ರಕ್ಷಣೆಯಿಲ್ಲ ಎಂಬ ಅವ್ಯಕ್ತ ಭೀತಿಯೊಂದನ್ನು ಹುಟ್ಟುಹಾಕಿ ಕಾಂಗ್ರೆಸ್ ಪಾಲಿನ ಅಳಿದುಳಿದ ಲಿಂಗಾಯತರ ಮತಗಳನ್ನೂ ಬಿಜೆಪಿಗೆ ಸೆಳೆಯುವ ಹುನ್ನಾರ. ಕಳೆದ ವಾರ್ಷಿಕ ಸಭೆಯಲ್ಲಿ ವ್ಯವಸ್ಥಿತವಾಗೇ ಹಿರೇಗೌಡ ಬಸವರಾಜಪ್ಪನವರ ಬಾಯಿಂದ ಇಂಥದ್ದನ್ನೆಲ್ಲ ಹೇಳಿಸಿ ಅದಕ್ಕೆ ಬಹುತೇಕ ಸದಸ್ಯರ ಬೆಂಬಲ ಗಿಟ್ಟಿಸಿಕೊಳ್ಳುವುದು ಒಂದು ಗುಂಪಿನ ಉದ್ದೇಶವಾಗಿತ್ತು. ಆದರೆ ಬಹುತೇಕರು ಹಿರೇಗೌಡರ ಮಾತಿಗೆ ತಿರುಗಿಬಿದ್ದು 'ಯಾರ್ರೀ ಲಿಂಗಾಯತರನ್ನು ಹುಡುಕ್ಕೊಂಡು ಬಂದು ದೌರ್ಜನ್ಯ ಮಾಡ್ತಾರೇನ್ರೀ....?' ಎಂದು ದಬಾಯಿಸಿಬಿಟ್ಟರು. ಅಲ್ಲಿಗೆ ಇಡೀ ಸಭೆಯೇ ಹಿರೇಗೌಡರ ವಿರುದ್ಧ ದನಿಯೆತ್ತಿದಂತಾಗಿತ್ತು ಮತ್ತು ಅವರ ಪ್ರಸ್ತಾಪಕ್ಕೆ ಯಾವ ಮನ್ನಣೆಯೂ ಇಲ್ಲದಂತಾಗಿತ್ತು.

ಇಷ್ಟಾಗ್ಯೂ ಮತ್ತದನ್ನೇ ಮುದ್ರಿಸುತ್ತಾರೆಂದರೆ ಏನರ್ಥ? ಇದು ಕಣ್ಣು ತಪ್ಪಿ ನಡೆದ ಪ್ರಮಾದವೆಂಬ ಈಶ್ವರ ಖಂಡ್ರೆ ಮಾತಿಗೆ ಏನಾದರೂ ಅರ್ಥವಿದೆಯೆ?

ಮೂಡಿಗೆರೆ ಕುಮ್ಮಿಯ

'ಪೋಲಿ' ಟಾಕ್ ಒಳಮರ್ಮ



ಲಟಾಟಿಕೆ ಬಿಜೆಪಿಗಳ 'ಕಾಮ'ಗಾರಿ ಎಕ್ಸ್‌ಪ್ರೆಸ್‌ಗೆ
ಬ್ರೇಕ್ ಬೀಳುವಂತೆ ಕಾಣಿಸುತ್ತಿಲ್ಲ. ರೇಣುಕಾಚಾರಿ
ಶುರುವಾಗಿ, ಹರತಾಳು ಹಾಲಪ್ಪನನ್ನು ಮೊದ
, ಉಡುಪಿಯ ರಘುಪತಿ ಭಟ್ಟನನ್ನು ಹಾದು,
ಬ್ಲೂ ಬಾಯ್ಸ್‌ಗಳನ್ನು ಪಾರು ಮಾಡಿಕೊಂಡು,
ಜ್ ವಿರುದ್ಧದ ಅತ್ಯಾಚಾರದ ಆರೋಪದೊಂದಿಗೆ,
ನ್ನು ಜಸ್ಟ್ ಟಚ್ ಮಾಡಿಕೊಂಡು ಇದೀಗ
ಗೆರೆಯ ಕೇಸರಿಪುತ್ರ ಕುಮಾರಸ್ವಾಮಿಯ ಬುಡಕ್ಕೆ
ನಿಂತಿದೆ. ಮಾತೆತ್ತಿದರೆ ಪರಸ್ತ್ರೀಯರು ತಾಯಿಯ
ಹೆಂಗಸರಿಗೆ ಗೌರವ ಕೊಡುವುದು ನಮಗೆ
ಗೊತ್ತು ಅಂತ ಬಂಡಲ್ ಬಿಡುವ ಬಿಜೆಪಿಗಳು
ಯಲ್ಲಿ ನಡೆಸುವ ಪರಮ ಅಸಹ್ಯ 'ಕಸರತ್ತು'ಗಳ
ಒಂದಾ, ಎರಡಾ...? ಕುಮಾರಸ್ವಾಮಿಯ ಪ್ರೇಮ
ಆ ಸರಣಿಗೆ ಅಂಟಿಕೊಂಡ ಹೊಸ ಚಾಪ್ಟರ್
ಊನೆಯದಂತೂ ಅಲ್ಲವೇ ಅಲ್ಲ!

ದ ಒಂದೆರಡು ದಿನಗಳಿಂದ ಕನ್ನಡದ ಟೀವಿ ಚಾನೆಲ್
ಬಿತ್ತರಿಸುತ್ತಿರುವ ಮಲೆನಾಡಿನ ಎಕ್ಸ್ ಎಂಎಲ್‌ಎ
ಪೋಲಿಟಾಕ್ ಪ್ರಕರಣವನ್ನು ಹೆಚ್ಚೂಕಮ್ಮಿ ಎಲ್ಲರೂ
ಯೇ ಇರುತ್ತಾರೆ. ನೋ ಡೌಟ್, ಆ ಮಲೆನಾಡಿನ
ಎಂಎಲ್‌ಎ ಬೇರಾರೂ ಅಲ್ಲ; ಮೂಡಿಗೆರೆಯ
ಶಾಸಕ ಎಂ.ಪಿ. ಕುಮಾರಸ್ವಾಮಿ! ನಂಬಿಕಸ್ಥ ಆಪ್ತರ
ಅವನೇ ಈ ಬಗ್ಗೆ ತಪ್ಪೊಪ್ಪಿಕೊಂಡಿದ್ದಾನೆ
ಗುತ್ತಿದೆ. ಆ ಸಂಗತಿಗೆ ಆಮೇಲೆ ಬರೋಣ,
ು ಅವನ 'ಪೊಲಿ'ಟಿಕಲ್ ಪ್ರಸಂಗವನ್ನು ಗಮನಿ
ಈತನನ್ನು ಬಿಜೆಪಿಯ ರಾಜಕಾರಣಿ ಎಂದೇಳು
ತ, ವರ್ಗಶಾಹಿ ರಾಜಕಾರಣವು ತಳಸಮುದಾಯದ
ನ್ನ ಹೇಗೆ ದಾಳ ಮಾಡಿಕೊಳ್ಳಬಹುದು ಎನ್ನುವುದಕ್ಕೆ
ಾಡಿಸಿದಂತಹ ಐಕಾನ್ ಎಂದು ಕರೆಯುವುದೇ
ದಲಿತ ಎನ್ನುವುದರ ಹೊರತಾಗಿ ರಾಜಕಾರಣಿ
ವ ಯಾವ ಚಕ್ಯತೆಯೂ ಆತನಿಗಿಲ್ಲ. ಅದರಲ್ಲೂ
ತಿಯನ್ನೇ ತಮ್ಮ ಸಂವಿಧಾನ ಮಾಡಿಕೊಂಡಿರುವ
ೊಳಗೆ ಇಷ್ಟು ದೀರ್ಘಕಾಲ ಉಳಿಯುವುದಕ್ಕೆ
ಅಲ್ಲ. ಖುದ್ದು ಚಿಕ್ಕಮಗಳೂರು ಬಿಜೆಪಿಯಲ್ಲೇ
ಮೂಲೆಗುಂಪು ಮಾಡುವ ಪ್ರಯತ್ನಗಳು ಸಿ.ಟಿ.ರವಿ
ದಲ್ಲಿ ರಾಜಾರೋಷವಾಗಿ ನಡೆಯುತ್ತಿವೆ.
ಸ್ವಾಮಿ 2008 ಮತ್ತು 2013ರಲ್ಲಿ ಸತತ ಎರಡು
ಸೋತದ್ದು ಕೂಡಾ ಬಿಜೆಪಿಗಳ ಒಳಸಂಚಿ
ಯೇ. 2008ರ ಎಲೆಕ್ಷನ್ ಸಮಯದಲ್ಲಿ ಈತನಿಗೆ
ಟಿಕೆಟ್ ದಕ್ಕುವುದೇ ಇಲ್ಲವೆನ್ನುವ ಪರಿಸ್ಥಿತಿ ನಿರ್ಮಾಣ
ಆದರೆ ಮೂಡಿಗೆರೆ ಮೀಸಲು ಕ್ಷೇತ್ರವಾಗಿರು
ದ ಹಾಗೂ ಬಿಜೆಪಿಗೆ ಇಲ್ಲಿ ಮತ್ತಾವ ದಲಿತ
ಮುಖವೂ ಗತಿ ಇಲ್ಲದಿರುವುದರಿಂದ ಆರೆಸ್ಸೆಸ್
ದ್ದಕ್ಕೆ ವಿರುದ್ಧವಾಗಿಯೇ ಈತನಿಗೆ ಟಿಕೆಟ್ ನೀಡಿತ್ತು.
ನ್ನು ಬಿಜೆಪಿ ಉಳಿಸಿಕೊಳ್ಳುವುದೇ ನಮ್ಮೊಳಗೂ
ಾಯಕರಿದ್ದಾರೆ ಅಂತ 'ಜಾಹೀರಾತು' ಪ್ರಕಟಿಸಲೇ
ವರಿಗೆ ಅಧಿಕಾರ ಕೊಟ್ಟು ತಳಸಮುದಾಯವನ್ನು
ಸ ಇರಾದೆಯಿಂದಲ್ಲ. ಇದು ದಶಕಗಳ ಹಿಂದೆಯೇ
ತಾದ ಸತ್ಯ.

04ರ ಚುನಾವಣೆಯೇ ಇವನ ಮೊದಲ
ಯ ಜಂಗೀಕುಸ್ತಿ. ಆಗಿನ್ನು ಕುಮಾರಸ್ವಾಮಿ
ಗೆರೆ ತಾಲೂಗೆ ಅಪರಿಚಿತನಾಗಿದ್ದರೂ ದಲಿತನಾಗಿ
ಮತ್ತು ತನ್ನ ಸುತ್ತ ಯಾವ ಅರ್ಹ ದಲಿತ
ರಿಂದ ಬಿಜೆಪಿ ಈತನಿಗೆ ಟಿಕೆಟ್ ನೀಡಿತ್ತು. ಆ
ಗೆಲ್ಲುವುದಕ್ಕೆ ಅವನ ವರ್ಚಸ್ಸಿಗಿಂತ ಬೇರೆಯದೇ
ಿದ್ದವು. ಒಂದೆ ಶಾಸಕಿಯಾಗಿದ್ದ ಕಾಂಗ್ರೆಸ
[illegible] ವಿರುದ್ಧ ಜನರಿಗಿದ್ದ ಸಿಟ್ಟು, ಬಾಬಾಬುಡನ್
[illegible] ಸಂಘಪರಿವಾರ ಜನರಲ್ಲಿ ಮೂಡಿಸಿದ್ದ
[illegible] ಬಂಗಾರಪ್ಪ ಬಿಜೆಪಿ ಸೇರಿದ್ದು
[illegible] ಗಳು ಒಟ್ಟಾಗಿ [illegible]
[illegible] ಗೆಲ್ಲಿಸಿ ಕೊಟ್ಟಿದ್ದವು.

[illegible] ಕುಮಾರಸ್ವಾಮಿ ಕಟ್ಟರ್ ಹಿಂದೂತ್ವವಾದಿಯಾಗಿರ
[illegible] ಮೇಲುಜಾತಿಯವರಿಗೆ ಮತ್ತು ಅಷ್ಟೇ

ಚೆಡ್ಡಿಗಳಿಗೆ ಈತನನ್ನು ಕಂಡರಾಗುತ್ತಿರಲಿಲ್ಲ. ಇದು ಯಾವ ವೈಪರೀತ್ಯಕ್ಕೆ ಹೋಗಿತ್ತೆಂದರೆ ಸಾರ್ವಜನಿಕ ಸಭೆಯೊಂದರಲ್ಲಿ ಈತನ ಮೇಲೆ ಮೇಲುಜಾತಿಯ ಆರೆಸ್ಸೆಸ್ ನಾಯಕರೇ ಒಮ್ಮೆ ಹಲ್ಲೆ ಮಾಡಿದ್ದರು. ಜೊತೆಗೆ ಬಿಜೆಪಿ ಶಾಸಕನಾಗಿದ್ದೂ ಆರೆಸ್ಸೆಸ್ ಹೇಳಿದಂತೆ ಮಾಡದಿದ್ದುದು ಈತನ ಬಗ್ಗೆ ಚೆಡ್ಡಿಗಳಲ್ಲಿ ಅಸಮಾಧಾನ ಮತ್ತು ಆಕ್ರೋಶವನ್ನು ಬೆಳೆಸಿತ್ತು. 2008ರ ಚುನಾವಣೆಯ ವೇಳೆಗೆ ಈ ಎಲ್ಲಾ ಕಾರಣಗಳಿಂದಾಗಿಯೇ ಕುಮಾರಸ್ವಾಮಿಗೆ ಟಿಕೆಟ್ ನೀಡಬಾರದೆಂದು ಪಕ್ಷದೊಳಗೇ ಅಪಸ್ವರವೆದ್ದಿತ್ತು. ಚಿಕ್ಕಮಗಳೂರಿನ ಶಾಸಕ ಸಿ.ಟಿ.ರವಿಯೇ ಖುದ್ದಾಗಿ ಕುಮಾರಸ್ವಾಮಿಯ ವಿರುದ್ಧ ರಾಜ್ಯ ನಾಯಕರ ಕಿವಿಯೂದಿದ್ದ. ಅಷ್ಟೆಲ್ಲ ಅಪಸ್ವರಗಳ ನಡುವೆ ಟಿಕೆಟ್ ಗಿಟ್ಟಿಸಿಕೊಳ್ಳುವಲ್ಲಿ ಕುಮಾರಸ್ವಾಮಿ ಯಶಸ್ವಿಯಾಗಿದ್ದ. ಸಂಘಪರಿವಾರದ ನಿರ್ದೇಶನದಂತೆ ಸಿ.ಟಿ.ರವಿ, ಮಾಜಿ ಬಿಜೆಪಿ ಜಿಲ್ಲಾಧ್ಯಕ್ಷ ಎಂ.ಕೆ.ಪ್ರಾಣೇಶ್, ಟಿಕೆಟ್ ಆಕಾಂಕ್ಷಿಗಳಾಗಿದ್ದ ಶಾಮಣ್ಣ, ದೀಪಕ್, ದೊಡ್ಡಯ್ಯರಂತವರ ಒಳದ್ರೋಹ ಕುಮಾರಸ್ವಾಮಿ ಯನ್ನು ಮಣಿಸಲು ಎಷ್ಟೆಲ್ಲ ಪ್ರಯತ್ನಪಟ್ಟರೂ ಆ ಸಲ ರಾಜ್ಯಾದ್ಯಂತ ಯಡ್ಡಿಯ ಪರವಾಗಿ ಎದ್ದಿದ್ದ ಸಿಂಪಥಿ ಅಲೆಯ ಪರಿಣಾಮವಾಗಿ ಸತತ ಎರಡನೇ ಬಾರಿಗೆ ಗೆದ್ದು ಬಂದಿದ್ದ.

ಆಮೇಲಾದರೂ ಅವನನ್ನು ಬಲಾಢ್ಯಗೊಳ್ಳಲು ಆರೆಸ್ಸೆಸ್ ಬಿಡಲಿಲ್ಲ. ಸತತ ಎರಡನೇ ಬಾರಿ ಗೆದ್ದಿರುವ ತನ್ನನ್ನು ಎಸ್‌ಸಿ ಕೋಟಾದಡಿ ಮಿನಿಸ್ಟ್ರು ಮಾಡೇ ಮಾಡುತ್ತಾರೆ ಅಂತ ಮೂಡಿಗೆರೆಯ ಕುಮ್ಮಿ ಹೇಳಿಕೊಂಡು ತಿರುಗಾಡಿದ್ದೇ ಬಂತು, ಕಡೇಪಕ್ಷ ನಿಗಮ ಮಂಡಳಿ ಅಧ್ಯಕ್ಷಗಾದಿಗೂ ಆ ಮುಖವನ್ನು ಕೇಸರಿ ಬ್ರಿಗೇಡ್ ಪರಿಗಣಿಸಲಿಲ್ಲ. ಮತ್ತೊಮ್ಮೆ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಂ.ಕೆ. ಪ್ರಾಣೇಶ್ ಮತ್ತು ಕುಮಾರಸ್ವಾಮಿ ನಡುವಿನ ಅಂತರ್ಯುದ್ಧ ಯಾವ ಮಟ್ಟಕ್ಕೆ ತಲುಪಿತ್ತೆಂದರೆ 2012ರಲ್ಲಿ ಕುಮಾರಸ್ವಾಮಿ ತನ್ನ ಶಾಸಕ ಸ್ಥಾನಕ್ಕೇ ರಾಜೀನಾಮೆ ನೀಡಿದ್ದ. ಅದೂ ಸಹ ದಲಿತ ದೌರ್ಜನ್ಯದ ಸ್ಯಾಂಪಲ್ ಎನ್ನುವುದು ಸ್ವಾರಸ್ಯಕರ ಸಂಗತಿ. ಏನಾಗಿತ್ತೆಂದರೆ, ಮೂಡಿಗರೆ ವ್ಯಾಪ್ತಿಗೆ ಬರುವ ಅಲ್ದೂರು ಗ್ರಾಮ ಪಂಚಾಯ್ತಿಗೆ ಕುಮಾರಸ್ವಾಮಿಯ ಪರಮಾಪ್ತ ಕವೀಶ್ ಎಂಬಾತ ಅಧ್ಯಕ್ಷನಾಗಿದ್ದ. ಊರ ಮಧ್ಯದ ವೃತ್ತವೊಂದಕ್ಕೆ ಬಿ.ಆರ್.ಅಂಬೇಡ್ಕರ್‌ರ ಹೆಸರಿಡಬೇಕೆಂದು ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ್ದ ಕವೀಶ, ಅದಕ್ಕೆ ಸಭೆಯ ಸಮ್ಮತಿಯನ್ನೂ ಪಡೆದುಕೊಂಡಿದ್ದ ಅಲ್ಲದೇ ತಾನೇ ಮುಂದೆ ನಿಂತು, ಅಂಬೇಡ್ಕರ್ ವೃತ್ತವೆಂಬ ನಾಮಫಲಕವನ್ನೂ ಉದ್ಘಾಟನೆ ಮಾಡಿದ್ದ. ಆ ಸಂದರ್ಭದಲ್ಲಿ ವೃತ್ತದಲ್ಲಿದ್ದ ಭಜರಂಗದಳದ ಭಾಗವತ್ ಧ್ವಜವನ್ನು ಯಾವುದೋ ಕಾರಣಕ್ಕೆ ಆತ ಬಿಚ್ಚಿಸಿದ್ದ. ಅಂಬೇಡ್ಕರ್ ನಾಮಕರಣದಿಂದಲೇ ಖುದ್ದುಹೋಗಿದ್ದ ಬಿಜೆಪಿ ಜಿಲ್ಲಾಧ್ಯಕ್ಷ ಪ್ರಾಣೇಶ್ ಧ್ವಜ ತೆಗಿಸಿದ್ದನ್ನೇ ನೆಪ ಮಾಡಿಕೊಂಡು ಅವನನ್ನು ಬಿಜೆಪಿಯಿಂದಲೆ ಉಚ್ಚಾಟನೆ ಮಾಡಿದ್ದ. ಅದೂ ಸ್ಥಳೀಯ ಶಾಸಕನಾಗಿದ್ದ ಕುಮಾರಸ್ವಾಮಿಯ ಗಮನಕ್ಕೆ ತರದೆಯೇ. ಇಂತಹ ಅವಮಾನಗಳನ್ನು ಕಾಣುತ್ತಲೇ ಬಂದಿದ್ದ ಮೂಡಿಗೆರೆಯ ಕುಮ್ಮಿ ಆಗಿನ ಸ್ಪೀಕರ್ ಬೋಪಯ್ಯನ ಮಡಿಕೇರಿ ಮನೆಗೇ ಹೋಗಿ ರಾಜೀನಾಮೆ ಕೊಟ್ಟಂತೆ ಸಣ್ಣಗೆ ಪ್ರತಿಭಟಿಸಿದ್ದ. ಆಮೇಲೆ ಯಡ್ಡಿಯ ಮಧ್ಯಸ್ಥಿಕೆಯಲ್ಲಿ ಎಲ್ಲವೂ ಬಗೆಹರಿದಿತ್ತು.

2013ರ ವೇಳೆಗಾಗಲೇ ಬಿಜೆಪಿಯೇ ಒಡೆದು ಹೋಳಾಗಿದ್ದರಿಂದ, ಅಧಿಕಾರ ಉಳಿಸಿಕೊಳ್ಳುವುದಿರಲಿ ಭ್ರಷ್ಟ ವರ್ಚಸ್ಸಿನಿಂದ ಮರ್ಯಾದೆ ಉಳಿಸಿಕೊಳ್ಳುವಷ್ಟು ಸೀಟು ಗೆದ್ದುಕೊಳ್ಳುವುದೇ ದುಸ್ತರ ಎನ್ನುವಂತಹ ವಾತಾವರಣ ನಿರ್ಮಾಣವಾಗಿದ್ದರಿಂದ ಕುಮಾರಸ್ವಾಮಿಗೆ ಟಿಕೆಟ್ ನೀಡಲು ಮತ್ತಾವ ತಕರಾರುಗಳೂ ಕೇಳಿಬರಲಿಲ್ಲ. ಆದರೆ ಮುಳುಗುವ ದೋಣಿ ಯಾನಿಕರನ್ನೂ ತನ್ನೊಟ್ಟಿಗೆ ತಳ ಸೇರಿಸುವಂತೆ ಬಿಜೆಪಿ ಜೊತೆ ಕುಮಾರಸ್ವಾಮಿಯೂ ಮಕಾಡೆ ಮಲಗಿದ್ದ; ಮಾಜಿ ಎಂಬ ಲೇಬಲ್‌ನೊಂದಿಗೆ!

ಬೇಲಿ ಹಾರುವ ಗೂಳಿ

ಇಷ್ಟೆಲ್ಲಾ ಕೇಳಿದ ಮೇಲೆ ಕುಮಾರಸ್ವಾಮಿಯ ಬಗ್ಗೆ ನಿಮ್ಮಲ್ಲಿ 'ಅಯ್ಯೋ, ಪಾಪ' ಎನ್ನುವ ಅಮಾಯಕ ಭಾವ ಮೂಡಿದ್ದರೆ ದಯಮಾಡಿ ಅದನ್ನು ಈಗಲೇ ಪಕ್ಕಕ್ಕೆ ತಳ್ಳಿಬಿಡಿ. ಯಾಕೆಂದರೆ, ರಾಜಕೀಯದಲ್ಲಿ ಈತ ಎಷ್ಟು 'ಪಾಪ'ದ ಆಸಾಮಿ ಎನಿಸುತ್ತಾನೊ, ನಿಜಜೀವನದಲ್ಲಿ ಅಷ್ಟೇ 'ಕಾಮ'ದ ಆಸಾಮಿ. ಬೇಲಿಹಾರಿ ಕಂಡವರ ಗದ್ದೆಯಲ್ಲಿ ಕಂಡಾಪಟ್ಟೆ ಮೇಯುವುದೆಂದರೆ ಈತನಿಗೆ ಎಲ್ಲಿಲ್ಲದ 'ಭಕ್ತಿ' ಅಂತ ಖುದ್ದು ಅವನ ಕ್ಷೇತ್ರದ ಮತದಾರರೇ ಮಾತಾಡಿಕೊಳ್ಳುವಷ್ಟರ ಮಟ್ಟಿಗೆ ಫೇಮಸ್ ಪ್ರಸಂಗಗಳನ್ನು ಸೃಷ್ಟಿಸಿಕೊಂಡಿದ್ದಾನೆ. ಹೆಸರಿನಲ್ಲಿ 'ಸ್ವಾಮಿ' ಇದೆ ಎಂದಮಾತ್ರಕ್ಕೆ ಸನ್ಯಾಸಿ ತರಾ ಇರಬೇಕೆನ್ನುವ ರೂಲ್ಸು ಇಲ್ಲವಲ್ಲಾ?....

ಅಸಲಿಗೆ ರಾಜಕೀಯಕ್ಕೆ ಬರುವುದಕ್ಕೆ ಮುಂಚಿನಿಂದಲೂ ಕುಮಾರಸ್ವಾಮಿಗೆ ಈ ತೆವಲಿತ್ತು, ಆದರೆ ರಾಜಕೀಯಕ್ಕೆ ಬಂದು ಎಂಎಲ್‌ಎ ಆದಮೇಲೆ ಅದು ಜಾಸ್ತಿಯಾಗಿದೆ. ಹಾಗಂತ ಮೂಡಿಗೆರೆ ಕುಮ್ಮಿಯನ್ನು ಪರಮ ಪೋಕರಿ ಅಂತ ಭಾವಿಸುವಂತಿಲ್ಲ. ಬಡತನದ ಕುಟುಂಬದಲ್ಲಿ ಹುಟ್ಟಿದ್ದರೂ ಎಂಎ ಓದಿಕೊಂಡಿದ್ದಾನೆ. ಅದೇ ಕಾರಣಕ್ಕೆ ಹಾಸನದ ಹಗರೆಯ ಪಿಯು ಕಾಲೇಜಿನಲ್ಲಿ ಕೆಲಕಾಲ ಲೆಕ್ಚರರ್ ಆಗಿಯೂ ಕೆಲಸ ಮಾಡಿಕೊಂಡಿದ್ದ. ಯಾವಾಗ ರಾಜಕಾರಣಿಯಾಗಿ ಮೂಡಿಗೆರೆಗೆ ಮರಳಿದನೋ, ಆಗಿಂದ ಅವನ ಲೆಕ್ಚರರ್ ವೃತ್ತಿ ಹಳ್ಳ ಹಿಡಿಯಿತು; ಖಯಾಲಿಗಳು ದಡಾ ಹತ್ತಿದವು!

ಅವನ ಆಪ್ತರ ವಲಯದಲ್ಲೇ ಹರಿದಾಡುವ ಜೋಕುಗಳಂತೆ ಕುಮಾರಸ್ವಾಮಿಗೆ ಊರ ತುಂಬಾ ಪ್ರೇಯಸಿಯರಂತೆ. ಅದೆಷ್ಟು ⏭ 13

ಫೋನ್ ಸಂಭಾಷಣೆಯಲ್ಲಿ ಕೇಳಿಸಿದ್ದೇನು?



ಟಿವಿ ಚಾನೆಲ್‌ಗಳಲ್ಲಿ ಇತ್ತೀಚೆಗೆ ಸುದ್ದಿಯಾಗುತ್ತಿರುವ ಈ ಆಡಿಯೋ ಮೂಡಿಗೆರೆ ಪಾಲಿಗೆ ಹದಿನೈದು ದಿನಕ್ಕೂ ಹಳೆಯದು. ಮೂಡಿಗೆರೆಯ ಜನರ ಮೊಬೈಲ್‌ಗಳ ವ್ಯಾಟ್ಸಪ್‌ಗಳಲ್ಲಿ ಹದಿನೈದು ದಿನಗಳಿಂದ ಸದ್ದು ಮಾಡುತ್ತಲೇ ಇದೆ. ಫೋನ್ ಕರೆಯ ಆರಂಭದಲ್ಲಿ ಗಂಡಸು ಧ್ವನಿ ಮೂರ್ನಾಲ್ಕು ಬಾರಿ ಹಲೋ ಅಂದಮೇಲೆ ಅತ್ತಕಡೆಯಿಂದ ಹೆಣ್ಣು ಧ್ವನಿ ಮಾತು ತೆಗೆಯುತ್ತದೆ. ಎರಡು ದಿನದಿಂದ ಯಾಕೆ ಫೋನ್ ಮಾಡಲಿಲ್ಲ ಎಂಬ ಆಕ್ಷೇಪಣೆ ಬಂದಾಗ ಎಲೆಕ್ಷನ್ ಬಿಸಿ, ರಿಸಲ್ಟ್ ಟೆನ್ಷನ್ನು, ನಮ್ಮ ಪಾರ್ಟಿಯ ಕ್ಯಾಂಡಿಡೇಟು ಗೆದ್ದಿದ್ದಕ್ಕೆ ವಿಜಯೋತ್ಸವದ ಗುಂಗಿನಲ್ಲಿ ಇದ್ದುದಕ್ಕೆ ಫೋನ್ ಮಾಡಲಾಗಲಿಲ್ಲ ಎಂಬ ಸಮಜಾಯಿಷಿಯೂ ಗಂಡುಧ್ವನಿಯಿಂದ ಹೊರಬೀಳುತ್ತೆ. ಆಮೇಲೆ ಒಂದಷ್ಟು ರಾಜಕೀಯ, ಅವರಿಬ್ಬರ ನಡುವಿನ ಹಣದ ವ್ಯವಹಾರಗಳ ಚರ್ಚೆಯಾದ ತರುವಾಯ 'ಅಸಲೀ' ವಿಷಯಕ್ಕೆ ಮಾತು ತಿರುಗುತ್ತವೆ.

ಗಂಡುಧ್ವನಿ: ಹ್ಞಾಂ, ಬೆಳಿಗ್ಗೆ ತಿಂಡಿಗೆ ಬರ್‍ತಾ, ತಿಂಡಿ ಕೊಡ್ತೀಯಾ. ತಿಂಡಿ ಅಂದ್ರೆ 'ಎಲ್ಲಾ' ತಿಂಡಿ..

ಹೆಣ್ಣುಧ್ವನಿ: ಹ್ಞಾಂ, ತಿಂಡಿ ಕೊಡ್ತೀನಿ.

ಗಂಡುಧ್ವನಿ: 'ಎಲ್ಲಾ' ತಿಂಡಿ..

ಹೆಣ್ಣುಧ್ವನಿ: 'ಎಲ್ಲಾ' ಎಲ್ಲಾ ಇಲ್ಲ.

ಗಂಡುಧ್ವನಿ: ಯಾಕೆ?

ಹೆಣ್ಣುಧ್ವನಿ: ಯಾಕ್ ಕೊಡ್ಬೇಕು, ನಿಂಗ್ಯಾಕ್ ಕೊಡ್ಬೇಕು? ನಿಂಗ್ಯಾರೊ ಹೊಸಬ್ರು ಇದಾರಲಾ ಅವ್ರತ್ರನೇ ಹೋಗು (ನಡುವೆ ಗಂಡುಧ್ವನಿ 'ಥೋ' ಅಂತ ರಾಗ ಎಳೆಯುತ್ತೆ) ನಂಗೊತ್ತು ಕಣೊ ನಿಂಗ್ಯಾರ್‍ಯಾರೊ ಹೊಸಹೊಸ ಫ್ರೆಂಡ್ ಆಗಿದಾರೆ, ನೀನ್ ನಾಟ್ಕ ಮಾಡೋದ್ ನಂಗ್ ಗೊತ್ತಾಗಲ್ವ.

ಗಂಡುಧ್ವನಿ: ಏನಾಯ್ತು ಈಗ ಕೊಟ್ರೆ ಎಲ್ಲಾ ಸರಿಯೋಗಲ್ವಾ?

ಹೆಣ್ಣುಧ್ವನಿ: ಹಂಗೆಲ್ಲಾ ಇಲ್ಲಾ, ಹಂಗಿದ್ರೇಲ್ ಯಾಕ್ ಕೊಡ್ಬೇಕು.. ಹಂಗಿದ್ರೇಲ್ ಕೊಡೋದ್ ತಪ್ಪು.

ಗಂಡುಧ್ವನಿ: ಸುಮ್ನೆ, ನೀನು ಕೊಡು...

ಹೆಣ್ಣುಧ್ವನಿ: ಯಾಕ್, ನಾನ್ ಬೇರೆ ಯಾರ್‍ನಾದ್ರೂ ಫ್ರೆಂಡ್ ಮಾಡ್ಕೊಂಡ್ರೆ ನೀನ್ ಸುಮ್ನೇ ಬಿಡ್ತೀಯಾ?

ಗಂಡುಧ್ವನಿ: ತಲೆ ಹೊಡ್ದಾಕ್ಬಿಡ್ತೀನಿ.

ಹೆಣ್ಣುಧ್ವನಿ: ಸರಿ, ತಲೆ ಹೊಡ್ದಾಕ್ತೀನಿ ಅಂತ್ಹೇಳ್ತಿಯ, ನಾನ್ ನಿನ್ನ ಏನ್ ಮಾಡ್ಬೇಕೇಳು?

ಗಂಡುಧ್ವನಿ: ಸುಮ್‌ಸುಮ್ನೆ ಏನ್ ಮಾಡೊಕ್ಕಾಗುತ್ತೆ?

ಹೆಣ್ಣು ಧ್ವನಿ: ಸುಳ್ ಹೇಳ್ಬೇಡ ನೀನು. ಹಂಗಾದ್ರೆ ಬೇರ ಯಾರೂ ಇಲ್ಲಾ ನಿಂಗೆ

ಗಂಡು ಧ್ವನಿ: ನಾನ್ ನಿಂಗೆ ಎಲ್ಲಾನೂ ಮಾಡಿದಿನಿ... ಹಬ್ಬಕ್ಕೆ.....

ಹೆಣ್ಣುಧ್ವನಿ: ಪಾಪ, ಎಲ್ಲಾನು ಮಾಡಿದೀಯಾ, ಸೋಮೇಗೌಡ್ರು ಸಾಲ ತೀರ್‍ಸಿದ್ದಾರು. ನಾನ್ ತಾನೆ, ಅದ್ನ ವಾಪಾಸ್ ಕೊಟ್ಟಾ...

(ಆಮೇಲೆ ಒಂದಷ್ಟು ಸಾಲದ ವ್ಯವಹಾರದ ಕುರಿತು ಮಾತುಕತೆ ಹರಿದಾಡುತ್ತೆ. ನಂತರ...)

ಗಂಡುಧ್ವನಿ: ಅದೆಲ್ಲಾ ಇರ್‍ಲಿ, ಮತ್ತೆ ತೋರುಸ್ಲೇ ಇಲ್ಲ ಬಟ್ಟೇನೆಲ್ಲ..


ಹೆಣ್ಣುಧ್ವನಿ: ಅಯ್ಯೋ, ನಿಂಗೆ ನೋಡೊ ಮನ್ಸಿದ್ರಲ್ವಾ. ನೋಡೊ ನೀನ್ ಯಾವ್‌ಯಾವ್ಯಾಳ್ಗೊ ಲವ್ವರ್‌ಗೆಲ್ಲಾ ಗಿಫ್ಟ್ ಕೊಡ್ಸಿ ಬಂದಿರ್‍ತಿಯಾ, ನಾನ್ಯಾಕ್ ತೋರಿಸ್ಬೇಕು.

ಗಂಡುಧ್ವನಿ: ಈಗ, ನಾಳೆ ಇಲ್ವಾ?

ಹೆಣ್ಣುಧ್ವನಿ: ಇಲ್ಲ.

ಗಂಡುಧ್ವನಿ: ಯಾಕೆ?

ಹೆಣ್ಣುಧ್ವನಿ: ಯಾ.... ಇರ್‍ತಾರಲಾ ಅಮ್ಮಾ ಎಲ್ಲಾ



ಗಂಡುಧ್ವನಿ: ಹೇ...

ಹೆಣ್ಣುಧ್ವನಿ: ಸಂಡೆ.

ಗಂಡುಧ್ವನಿ: ಹಾ?

ಹೆಣ್ಣುಧ್ವನಿ: ಸಂಡೆ.

ಗಂಡುಧ್ವನಿ: ಹಾ?

ಹೆಣ್ಣುಧ್ವನಿ: ಸಂಡೇ...

ಗಂಡುಧ್ವನಿ: ಅದೆಷ್ಟೊತ್ತು

ಹೆಣ್ಣುಧ್ವನಿ: ಸಂಡೆ ಅಂದೆ.

ಗಂಡುಧ್ವನಿ: ಯಾವ್ ಟೈಮು?

ಹೆಣ್ಣುಧ್ವನಿ: ಗೊತ್ತಿಲ್ಲಪ, ಯಾವಾಗ್ ಹೋಗ್ತಾರೊ, ಏನೊ...

ಗಂಡುಧ್ವನಿ: ಓಹ್ ಅದೂ ಕಷ್ಟನೇ...

ಹೆಣ್ಣುಧ್ವನಿ: ಯಾಕೆ?


ಗಂಡುಧ್ವನಿ: ಸಂಡೇನೂ ಕಷ್ಟನೇ. ನೋಡೋಣ.

ಆನಂತರದಲ್ಲಿ ಒಂದಷ್ಟು ವ್ಯವಹಾರದ ಮಾತುಕತೆಗಳು ನಡೆಯುತ್ತವೆ. [illegible] ಇದ್ದಕ್ಕಿದ್ದಂತೆ ಲೈನ್ ಕಟ್ ಆಗುತ್ತೆ. ಬಹುಶಃ ಆ ಹೆಂಗಸು ಇದಿಷ್ಟೂ ಸಂಭಾಷಣೆಯನ್ನು ಬಾತ್‌ರೂಮಿನಲ್ಲಿದ್ದುಕೊಂಡು ನಡೆಸಿರಬೇಕು. ಮಾತುಗಳ ಮಧ್ಯೆ [illegible] ನೀರಿನ [illegible] ಕೇಳಿಸುತ್ತೆ, ಯಾರೋ ಬಂದ ಕಾರಣಕ್ಕಾಗಿ ಫೋನ್ ಕಟ್ ಮಾಡಿರಬಹುದು.

ಪಠಾಣ್‌ಕೋಟ್ ದಾಳಿ ಎತ್ತುವ ಪ್ರಶ್ನೆಗಳು

ಇದೇ ಜನವರಿ ತಿಂಗಳ ಮೊದಲ ವಾರದಲ್ಲಿ ಪಠಾಣ್‌ಕೋಟ್‌ನ ವಾಯುಸೇನಾ ನೆಲೆಯ ಮೇಲೆ ಪಾಕಿಸ್ತಾನಿ ಮೂಲದವರೆನ್ನಲಾದ ಐದಾರು ಉಗ್ರರು ನಡೆಸಿದ ದಾಳಿಯನ್ನು ಅಂತೂಇಂತೂ ನಾಲ್ಕು ದಿನಗಳ ನಂತರ ಹಿಮ್ಮೆಟ್ಟಿಸಲಾಯಿತಾದರೂ ಇಡೀ ಕಾರ್ಯಾಚರಣೆಯಲ್ಲೆಲ್ಲೋ ಕಾರ್ಯಕ್ಷಮತೆಯ ಕೊರತೆ ಇರುವಂತೆ ತೋರುತ್ತದೆ. ನಾವು ಶೀಘ್ರವಾಗಿ, ನಿರ್ಣಾಯಕವಾಗಿ, ಸೇನಾಪಡೆಗಳ ಮೂಲಕ ಪ್ರತಿಕ್ರಿಯೆ ನೀಡಿದ್ದರೆ ಪ್ರಾಯಶಃ ಇಷ್ಟೊಂದು ಪ್ರಾಣಹಾನಿಯನ್ನು ತಪ್ಪಿಸಬಹುದಿತ್ತೆಂಬುದು ಅನೇಕ ವಿಶ್ಲೇಷಕರ ಅನಿಸಿಕೆ. ಹಾಗಾಗಿ ಮೃತ ಯೋಧರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ಮೋದಿ ಸರ್ಕಾರಕ್ಕೆ ಕೆಲವೊಂದು ಅನಾನುಕೂಲಕರ ಪ್ರಶ್ನೆಗಳನ್ನೂ ಹಾಕಬೇಕಾಗಿದೆ.

ಸಂಭಾವ್ಯ ದಾಳಿಯ ಕುರಿತು ಗುಪ್ತಚರ ವರದಿಗಳು ಬೇರೊಂದು ದೇಶದಿಂದ ಸುಮಾರು ಎರಡು ವಾರಗಳಷ್ಟು




ಹಿಂದೆಯೆ ಲಭ್ಯವಾಗಿವೆ. ಇದಲ್ಲದೆ ಕಳೆದ ಜುಲೈ ತಿಂಗಳಲ್ಲಿ ಪಠಾಣ್‌ಕೋಟ್‌ನಿಂದ ಕೇವಲ 25 ಕಿಮೀ ಅಂತರದಲ್ಲಿರುವ ಗುರುದಾಸಪುರ ಪೊಲೀಸ್ ಠಾಣೆಯ ಮೇಲೆ ನಡೆದಿದ್ದ ಉಗ್ರರ ದಾಳಿಯ ನೆನಪುಗಳು ಕೂಡ ಇನ್ನೂ ಹಸಿಯಾಗಿವೆ. ಇಷ್ಟೆಲ್ಲ ಸುಳಿವು ಸೂಚನೆಗಳಿದ್ದರೂ ಸರ್ಕಾರವೇಕೆ ಯಾವುದೇ ರೀತಿಯ ಸಿದ್ಧತೆಗಳನ್ನು ಮಾಡಿರಲಿಲ್ಲ, ಹೆಚ್ಚುವರಿ ಭದ್ರತಾ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲವೆಂದು ಪ್ರಶ್ನಿಸಬೇಕಾಗಿದೆ. ನಂಬಲರ್ಹ ಮೂಲಗಳ ಪ್ರಕಾರ ಗುರುದಾಸಪುರ ದಾಳಿಯ ಸಂದರ್ಭದಲ್ಲಿ ಉಗ್ರರು ಬಳಸಿದ್ದ ಅದೇ ಸುರಂಗ ಮಾರ್ಗವನ್ನು ಈ ಬಾರಿಯೂ ಬಳಸಲಾಗಿದೆ. ನಮ್ಮ ಭದ್ರತಾ ವೈಫಲ್ಯವನ್ನು ಸಾರಿ ಹೇಳಲು ಇದಕ್ಕಿಂತ ಹೆಚ್ಚಿನ ಪುರಾವೆ ಇನ್ನೇನು ಬೇಕು?

ಉಗ್ರರ ತಂಡ ಡಿಸೆಂಬರ್ 31ರ ತಡರಾತ್ರಿ ಗುರುದಾಸಪುರದ ಪೊಲೀಸ್ ಸೂಪರಿಂಟೆಂಡೆಂಟ್‌ನ ವಾಹನವನ್ನು ಅಪಹರಿಸಿರುವ ವಿಷಯ ಮುಂಜಾವದ ಹೊತ್ತಿನೊಳಗಾಗಿ ತಿಳಿದುಬಂದಿದೆ. ವಾಹನದೊಳಗೆ ಇಂಗ್ಲಿಷ್‌ನಲ್ಲಿ ಜೈಶ್-ಎ-ಮೊಹಮ್ಮದ್ ಎಂಬುದಾಗಿ ಬರೆದಿರುವ ಚೀಟಿ ಪತ್ತೆಯಾಗಿದೆ ಎನ್ನಲಾಗಿದೆ. ಇದರೊಂದಿಗೆ ಎಸ್‌ಪಿ ಮತ್ತಾತನ ಮಿತ್ರ ರಾಜೇಶ್‌ವರ್ಮ ನೀಡಿರುವ ಹೇಳಿಕೆಗಳನ್ನು ಪರಿಗಣಿಸಿದಾಗ ಒಟ್ಟಿನಲ್ಲಿ ಕಾಗಕ್ಕ ಗುಬ್ಬಕ್ಕನ ಕಥೆಯನ್ನು ಜ್ಞಾಪಿಸುತ್ತವೆ. ಎಸ್‌ಪಿಯನ್ನೀಗ ಇನ್ನಷ್ಟು ವಿಚಾರಣೆಗೆ ಒಳಪಡಿಸಲಾಗುತ್ತಿದೆಯಂತೆ. ಇರಲಿ. ಎಸ್‌ಪಿ ವಾಹನ ವಾಯು ಸೇನಾ ನೆಲೆಗೆ 500 ಮೀಟರ್ ಸಮೀಪದಲ್ಲಿ ಪತ್ತೆಯಾಗಿರುವುದರ ಜೊತೆಗೆ ಉಗ್ರರು ನುಸುಳಿರುವ ವಿಷಯವೂ ಖಚಿತವಾಗಿ ತಿಳಿದುಬಂದಿತ್ತು. ಇಷ್ಟೆಲ್ಲ ಸೂಚನೆಗಳಿದ್ದರೂ ತಕ್ಷಣ ಸೂಕ್ತ ಪ್ರತಿಕ್ರಿಯೆ ನೀಡುವಲ್ಲಿ ಆಗಿರುವ ವೈಫಲ್ಯಕ್ಕೆ ಮೋದಿ ಸರ್ಕಾರದ ಸರ್ವಾಧಿಕಾರಿ ನಡೆ ಮತ್ತು ಏಕಪಕ್ಷೀಯ ತೀರ್ಮಾನಗಳೇ ಕಾರಣವಲ್ಲವೇ? ಇಡೀ ಕಾರ್ಯಾಚರಣೆಯ ನೇತೃತ್ವವನ್ನು ಅನುಭವಿ ಸೇನಾಪಡೆಗಳಿಗೆ ವಹಿಸದೆ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ 'ನೇತೃತ್ವದ ರಾಷ್ಟ್ರೀಯ ಭದ್ರತಾ ಪಡೆಗೆ ವಹಿಸಿರುವುದೇ ಇದಕ್ಕೆ ಸಾಕ್ಷಿ. ಪಠಾಣ್‌ಕೋಟ್ ಕಾರ್ಯಾಚರಣೆಗೆ ಸೇನಾಪಡೆಗಳ ಬದಲು ಕೇವಲ ಕೆಲವು ಡಜನ್ ರಾಷ್ಟ್ರೀಯ ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಿರುವುದು, ಉಗ್ರರನ್ನೆಲ್ಲ ಮಟ್ಟಹಾಕುವ ಕೆಲಸ ಇನ್ನೂ ಪೂರ್ಣಗೊಳ್ಳದಿದ್ದರೂ ಯಶಸ್ವಿಯಾಯಿತೆಂಬ ತಪ್ಪು ವರದಿಗಳನ್ನು (ಇದರ ನಂತರ ಇನ್ನಿಬ್ಬರು ಉಗ್ರರು ಪತ್ತೆಯಾದರು. ಇವರನ್ನು ಮಟ್ಟಹಾಕಲು ಮತ್ತೂ ಎರಡು ದಿನಗಳು ಬೇಕಾದವು) ಸರ್ಕಾರದ ಪ್ರಮುಖರಿಗೆ ರವಾನಿಸಿರುವುದು, ಒಂದು ದಿನದೊಳಗಾಗಿ ಮಾಡಿ ಮುಗಿಸಬೇಕಾಗಿದ್ದುದಕ್ಕೆ ನಾಲ್ಕು ದಿನಗಳನ್ನು ವ್ಯಯಿಸಿರುವುದಲ್ಲದೆ ಏಳು ಅಮೂಲ್ಯ ಜೀವಗಳನ್ನೂ ಕಳೆದುಕೊಂಡಿರುವುದು -ಇವೆಲ್ಲವೂ ಕಾರ್ಯಕ್ಷಮತೆಯ ಕೊರತೆಯನ್ನು ತೋರಿಸುತ್ತಿಲ್ಲವೇ?

ನಿಜಹೇಳಬೇಕೆಂದರೆ ಈ ದೋವಲ್ ಸಂಘ ಪರಿವಾರಕ್ಕೆ ಬಹಳ ಹತ್ತಿರದವನು. ಮೋದಿಗಂತೂ ಈತ ಬಲಗೈ ಇದ್ದಂತೆ. ಸಂಘ ಪರಿವಾರದ ವಿವೇಕಾನಂದ ಇಂಟರ್‌ನ್ಯಾಷನಲ್ ಫೌಂಡೇಷನ್ ಎಂಬ ಚಿಂತನಾಕೂಟದ ಮುಖ್ಯಸ್ಥನಾದ ಈತನಿಗೆ ಆರೆಸ್ಸೆಸ್ ಘಟಾನುಘಟಿಗಳ ಸಂಪೂರ್ಣ ಬೆಂಬಲವಿದೆ. ಇನ್ನು ದೋವಲ್ ಪುತ್ರನ ಇಂಡಿಯಾ ಫೌಂಡೇಷನ್ ಸಂಸ್ಥೆಯ ಜೊತೆ ಹಲವಾರು ಬಿಜೆಪಿಗರು ಸಂಬಂಧ ಇಟ್ಟುಕೊಂಡಿದ್ದಾರೆ. ಮೋದಿ ಬಂಟ ದೋವಲ್‌ನನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರನಾಗಿ ನೇಮಿಸಿದ ಕೂಡಲೆ ಆತನದೆನ್ನಲಾದ ನಾನಾ ಸಾಹಸ ಕೃತ್ಯಗಳನ್ನು ಹೊಗಳುಭಟ ಮಾಧ್ಯಮಗಳ ಮೂಲಕ ಪ್ರಚುರಪಡಿಸಿ ಆತನೋರ್ವ 'ಜೇಮ್ಸ್ ಬಾಂಡ್' ಎಂಬಂತೆ ಬಿಂಬಿಸಲಾಗಿತ್ತು. ದೋವಲ್‌ಗೆ ವಿಪರೀತ ಪ್ರಚಾರದ ತೆವಲು ಎಂದಾತನ ಮಾಜಿ ಸಹೋದ್ಯೋಗಿಗಳೂ ಹೇಳುತ್ತಾರೆ. ಅವರ ಹೇಳಿಕೆಯನ್ನು ತಳ್ಳಿಹಾಕುವಂತಿಲ್ಲ ಏಕೆಂದರೆ ಈತನ ಅಭಿಮಾನಿಗಳೆನ್ನಲಾದವರು ಈತನಿಗೋಸ್ಕರ ಒಂದು ಪ್ರತ್ಯೇಕ ಫೇಸ್‌ಬುಕ್ ಖಾತೆಯನ್ನೆ ತೆರೆದಿರುವ ಉದಾಹರಣೆ ನಮ್ಮೆದುರಿಗಿದೆ. ಈಗಾಗಲೆ ಈತನ ಪಹರೆಯಲ್ಲಿ ಭಾರತ-ಪಾಕ್ ಗಡಿಯಲ್ಲಿ ಹೆಚ್ಚಿದ ಸಂಘರ್ಷ, ವಿಶ್ವಸಂಸ್ಥೆಯ ಸೇನಾ ವೀಕ್ಷಕ ತಂಡವನ್ನು ದೆಹಲಿಯಿಂದ ಒದ್ದೋಡಿಸುವ ಪ್ರಯತ್ನ, ಪಾಕಿಸ್ತಾನಿ ಮೀನುಗಾರಿಕಾ ದೋಣಿಯ ಸ್ಫೋಟ, ವಿಫಲ ನಾಗಾ ಒಪ್ಪಂದ, ಬರ್ಮಾ ದೇಶದೊಳಗೆ ನುಗ್ಗಿ ನಾಗಾಕ್ಯಾಂಪ್‌ಗಳ ಮೇಲೆ ದಾಳಿ, ನೇಪಾಳದಲ್ಲಿ ಅನಗತ್ಯ ಹಸ್ತಕ್ಷೇಪ ಇವೇ ಮುಂತಾದ ಭಾರತದ ಮಾನವನ್ನು ಬೀದಿಗೆಳೆಯುವ ಘಟನೆಗಳು ನಡೆದಿದ್ದು, ಇತ್ತೀಚಿನ ಪಠಾಣ್‌ಕೋಟ್ ಪ್ರಸಂಗವೂ ಇದೇ ಸಾಲಿಗೆ ಸೇರುತ್ತದೆ. ಪಠಾಣ್‌ಕೋಟ್ ಪ್ರಸಂಗದಲ್ಲಿ ಮೊದಲೆರಡು ದಿನ ದೋವಲ್‌ನನ್ನು ಹೊಗಳಿದ ಸ್ತುತಿಪಾಠಕ ಮಾಧ್ಯಮಗಳು ಬಳಿಕ ಆತನ ವೈಫಲ್ಯವನ್ನು ಮುಚ್ಚಿಹಾಕಲು ನಡೆಸಿದ ಕಸರತ್ತುಗಳು ತುಂಬಾ ಮನರಂಜನೀಯವಾಗಿದ್ದವು. ಅಂದಹಾಗೆ ಭಾರಿ ಸುದ್ದಿ ಮಾಡಿದ ಮೋದಿಯ ಪಾಕಿಸ್ತಾನ ಭೇಟಿಯ ಹಿಂದೆ ಇದೇ ದೋವಲ್ ಕೈವಾಡವಿತ್ತು ಎನ್ನಲಾಗಿದೆ. ಇದರ ಹಿಂದಿನ ಲೆಕ್ಕಾಚಾರಗಳೇನೆಂದು ಯಾರಿಗೂ ತಿಳಿಯದು.

ವಾಸ್ತವವಾಗಿ ಉಗ್ರರ ದಾಳಿಗಳು ನಡೆದಾಗ ಯಾವ ರೀತಿ ಪ್ರತಿಕ್ರಿಯಿಸಬೇಕು, ಏನೆಲ್ಲ ಕ್ರಮಗಳನ್ನು ಕೈಗೊಳ್ಳಬೇಕು ಎಂಬಿತ್ಯಾದಿ ವಿಷಯಗಳಲ್ಲಿ ಸಂಪೂರ್ಣ ತರಬೇತಿ ಪಡೆದಂತಹ ಸುಮಾರು 50,000 ನುರಿತ ಸೈನಿಕರು ಪಠಾಣ್‌ಕೋಟ್‌ನಲ್ಲಿ ಮತ್ತು ಸಮೀಪದ ನಾಗ್ರೋತಾ, ಜಮ್ಮು, ಅಂಬಾಲಾ, ಅಮೃತಸರ, ಯೋಲ್, ಜಲಂಧರುಗಳಲ್ಲಿ ಲಭ್ಯರಿದ್ದರು. ಹೀಗಿದ್ದರೂ ಸುಮಾರು 24 ಚದರ ಕಿಮೀಗಳಷ್ಟು ಬೃಹತ್ತಾದ ಪಠಾಣ್‌ಕೋಟ್ ನೆಲೆಯ ರಕ್ಷಣೆಗೆ ಹಾಗೂ ಉಗ್ರರ ವಿರುದ್ಧದ ಕಾಳಗಕ್ಕೆ ನಿಯೋಜಿಸಿದ್ದು ಸೈನಿಕರನ್ನಲ್ಲ, ರಾಷ್ಟ್ರೀಯ ಭದ್ರತಾ ಪಡೆಯ ಬರೀ 168 ಅನನುಭವಿ 'ಸಿಬ್ಬಂದಿಗಳನ್ನು. ಅದೂ ದೆಹಲಿಯಿಂದ ಕರೆಸಿಕೊಂಡು. ಇವರೆಲ್ಲ ತಲುಪುವುದಕ್ಕೆ ಎಷ್ಟೋ ಗಂಟೆಗಳ ಮೊದಲೆ ಉಗ್ರರು ವಾಯುಸೇನೆಯ ನೆಲೆಯೊಳಗೆ ನುಸುಳಿ ಆಗಿತ್ತು, ಉಗ್ರರ ದಾಳಿ ಪ್ರಾರಂಭವಾಗುವುದಕ್ಕೆ ಸುಮಾರು 8-10 ಗಂಟೆ ಮುಂಚಿತವಾಗಿ ಸ್ಥಳದಲ್ಲಿದ್ದ ರಾಷ್ಟ್ರೀಯ ಭದ್ರತಾ ಪಡೆಗಳಿಂದ ಉಗ್ರರನ್ನು ಹಿಮ್ಮೆಟ್ಟಿಸ
ಸಾಧ್ಯವಾಗಿಲ್ಲ, ಸಹಜವಾಗಿ ಇಲ್ಲಿ ಕೆಲವು ಪ್ರಶ್ನೆಗಳ
ಇಡೀ ಕಾರ್ಯಾಚರಣೆಯ ನೇತೃತ್ವವನ್ನು ಸೇ
ವಹಿಸದಿರಲು ಕಾರಣವೇನು? ಸೇನೆಯಿಂದ ಕೆಲವೇ ಕೆ
ಯೋಧರನ್ನಷ್ಟೆ ಕರೆಸಿಕೊಳ್ಳಲು ಕಾರಣವೇನು?



ಇನ್ನು ಗಡಿ ಭದ್ರತಾ ಪಡೆಗಳ (ಬಿಎಸ್‌ಎಫ್) ಪಾತ್ರ
ಪ್ರಶ್ನಾರ್ಹವಾಗಿದೆ. ಇವರ ಅನಾಚಾರಗಳ ಕುರಿ
ಸಾರ್ವಜನಿಕರಿಂದ, ಮಾನವಹಕ್ಕು ಸಂಘಟನೆಗಳ
ಬಹಳಷ್ಟು ದೂರುಗಳು ಸಾಕಷ್ಟು ಸಮಯದಿಂದ
ಕೇಳಿಬರುತ್ತಿವೆ. ಕೇಂದ್ರದಲ್ಲಿ ಮೋದಿ ಸರ್ಕಾರ ಅಧಿಕ
ವಹಿಸಿಕೊಂಡ ನಂತರವಂತೂ ಗಡಿ ಭದ್ರತಾ ಪಡೆ
ಹೆಚ್ಚಿನ ಗಮನವೆಲ್ಲ 'ಪವಿತ್ರ ಗೋವು'ಗಳ ಸಾಗಾಟ
ಮೇಲೆ ಕೇಂದ್ರೀಕೃತವಾಗಿರುವಂತಿದೆ. ಹೀಗಿರುವಾಗ ಇವ
ಉಗ್ರರ ಚಲನವಲನಗಳ ಮೇಲೆ ನಿಗಾ ಇರಿಸ
ಸಮಯವಾದರೂ ಎಲ್ಲಿದೆಯೆಂದು ಜನ ಕೇಳುತ್ತಿದ್ದಾ

'ಇದು ಸೇನೆ ಮತ್ತು ರಾಷ್ಟ್ರೀಯ ಭದ್ರತಾ ಪಡೆ
ಜಂಟಿ ಕಾರ್ಯಾಚರಣೆಯಾಗಿತ್ತು, ಸೊತ್ತುಗಳ ಸಂರಕ್ಷ
ಸಕಲ ಕ್ರಮ ಕೈಗೊಳ್ಳಲಾಗಿತ್ತು, ಯುದ್ಧ ವಿಮಾನಗಳ
ಅಲ್ಲಿಂದ ಬೇರೊಂದು ಸುರಕ್ಷಿತ ಜಾಗಕ್ಕೆ ಸಾಗಿಸಲಾಗಿ
ಹೆಲಿಕಾಪ್ಟರ್‌ಗಳ ಮೂಲಕ ಉಗ್ರರ ಮೇಲೆ ರಾಕೆ
ದಾಳಿ ನಡೆಸಲಾಗಿತ್ತು' ಎಂಬ ಮೋದಿ ಸರ್ಕಾರದ ಸಮರ್ಥ
ಹೇಳಿಕೆಗಳೆಲ್ಲವೂ ಸುಳ್ಳಿನ ಕಂತೆಗಳೆಂದು ತಿಳಿದುಬಂದಿ
ಅತ್ತ ಉಗ್ರರ ದಾಳಿ ನಡೆಯುತ್ತಿದ್ದರೆ ಮೋದಿಯಂ
ತನ್ನ 'ಮನ್ ಕಿ ಬಾತ್'ನಲ್ಲಿ ಯೋಗದ ಬಗ್ಗೆ ಅದೇನ
ಭಾಷಣ ಬಿಗಿಯುತ್ತಾ ಇದ್ದ ಆದರೆ ಮತದಾರರ ಗಮನ
"56 ಇಂಚಿನ ಎದೆ"ಯ ಹುಡುಕಾಟದಲ್ಲಿ ಮುಳುಗಿ

ಕೊನೆಯ ಪ್ರಶ್ನೆ: ಪ್ರಸಕ್ತ ದಾಳಿಯ ಹಿಂದೆ ತ
ಪಾತ್ರವಿಲ್ಲವೆಂದು ಪಾಕಿಸ್ತಾನಿ ಸರ್ಕಾರ ಮತ್ತು ಐಎಸ್
ಹೇಳುತ್ತಿರುವುದು ನಿಜವಿದ್ದಲ್ಲಿ ಉಗ್ರರ ಸಂಘಟನೆಗೆ ಆರ್ಥಿ
ನೆರವು ನೀಡಿದವರು ಯಾರು? ಯಾಕೆ?

ಲಿಂಗಾಯತರ ಸುತ್ತ

10 ⏮

ಮಹಾರಾಷ್ಟ್ರ, ಆಂಧ್ರ, ತೆಲಂಗಾಣ, ತಮಿಳುನಾಡು, ಕೇರಳ ಘಟಕಗಳಿವೆಯಾದರೂ ಅವು ನಾಮಕಾವಸ್ಥೆಗಷ್ಟೆ. ಹೆಸರಿಗೆ ವೀರಶೈವ ಮಹಾಸಭಾ ಆದರೂ ಪಂಚಮಸಾಲಿ, ಸಾದರ ಮತ್ತು ಬಣಜಿಗ ಉಪಪಂಗಡದ ರಾಜಕಾರಣಿಗಳೇ ಇದರ ಸೂತ್ರಧಾರರು ನಿಯಂತ್ರಕರು ಎಲ್ಲವೂ ಹೌದು.

ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪಕರಲ್ಲೊಬ್ಬರಾದ ಪುಟ್ಟಣ್ಣಶೆಟ್ಟಿ, ಶಿಕ್ಷಣ ತಜ್ಞ ಬಸವನಾಳರು, ಲಿಂಗರಾಜ ದೇಸಾಯಿ, ಹಾನಗಲ್ ಕುಮಾರಸ್ವಾಮಿಗಳಷ್ಟೇ ಏಕೆ ಗುಲಬರ್ಗದ ಶರಣಬಸಪ್ಪ ಅಪ್ಪ, ಸಿದ್ಧಗಂಗೆಯ ಶಿವಕುಮಾರ ಸ್ವಾಮಿಗಳಂಥ ಮಹನೀಯರೂ ಈ ವೀರಶೈವ ಮಹಾಸಭಾದ ಅಧ್ಯಕ್ಷರಾಗಿದ್ದವರೆ. ಮೊದಮೊದಲು ಬಸವಣ್ಣನ ಸಿದ್ಧಾಂತ, ಶಿವಶರಣರ ವಚನಗಳು, ಆಧ್ಯಾತ್ಮ, ಮಾನವೀಯತೆಯ ಉದ್ದೇಶಕ್ಕೆಂದು ಸ್ಥಾಪನೆಗೊಂಡ ಈ ಸಂಘಟನೆ ಬರುಬರುತ್ತ ಜಾತಿ ಸಂಘಟನೆಯಾಗಿ ರೂಪಗೊಂಡಿದ್ದು ಬಸವತತ್ವಕ್ಕಾದ ದೊಡ್ಡ ನಷ್ಟ ಮತ್ತು ಸಾಂಸ್ಕೃತಿಕ ದುರಂತ ಕೂಡ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಕಾಂಗ್ರೆಸ್, ಬಿಜೆಪಿ ಅಧಿಕಾರಕ್ಕೆ ಬಂದರೆ ಬಿಜೆಪಿ ಮತ್ತು ಜೆಡಿಎಸ್ ಸರ್ಕಾರ ರಚಿಸಿದಾಗ ಜೆಡಿಎಸ್‌ಗಳ ಮೂಗಿನ ನೇರಕ್ಕೆ ವೀರಶೈವ ಮಹಾಸಭಾ ಬಳಕೆಯಾಗುತ್ತದೆ.

ಆದರೆ ವಾಸ್ತವವಾಗಿ ರಾಜ್ಯದ ಬಹುತೇಕ ಲಿಂಗಾಯತರೆಲ್ಲ ಬಿಜೆಪಿ ತೆಕ್ಕೆಯಲ್ಲಿರುವುದೂ ಗುಟ್ಟಾಗೇನೂ ಉಳಿದಿಲ್ಲ, ರಾಜ್ಯದ ಅತೀ ದೊಡ್ಡ ಬಹುಸಂಖ್ಯಾತ, ಬಲಾಢ್ಯ ಜನಾಂಗವಾದ ವೀರಶೈವರಿಗೆ ಬಿಜೆಪಿ ಅಧಿಕಾರಕ್ಕೆ ಬಂದನಂತರ ಐದು ವರ್ಷಗಳ ಕಾಲ ತಮ್ಮದೇ ಮುಖ್ಯಮಂತ್ರಿಯಿದ್ದೂ (ಮಧ್ಯೆ ಸದಾನಂದಗೌಡ ಸಿಎಂಯಾದರೂ ಸೂತ್ರವಿದ್ದದ್ದು ಯಡ್ಡಿ ಕೈಯಲ್ಲಿಯೇ) ರಾಜ್ಯದ ಸಮಸ್ತ ಅಧಿಕಾರ, ಪೊಲೀಸ್, ಹಣಕಾಸು, ಸಂಪತ್ತು ಎಲ್ಲದರ ಮೇಲೂ ಹಿಡಿತ ಸಾಧಿಸಿದ ನಂತರವೂ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಒಂದೇ ವರ್ಷಕ್ಕೆ ಅಂದರೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ಕೇವಲ ವರ್ಷದ ಅವಧಿಯಲ್ಲಿ ತಮ್ಮ ಮೇಲೆ ದೌರ್ಜನ್ಯಗಳಾಗುತ್ತಿವೆಯೆಂಬ 'ವಾಸ್ತವದ' (?) ಅರಿವಾಯಿತೆ?

ಶೋಷಿತರೆಂದರೆ....!

ಹಾಗೊಮ್ಮೆ ತಮ್ಮ ಜನಾಂಗದ ಹೆಣ್ಣು ಮಕ್ಕಳ ಮೇಲೆ 'ಕೀಳು ಜಾತಿಯವರು' ದೌರ್ಜನ್ಯವೆಸಗುತ್ತಿರುವುದು ನಿಜವೇ ಆಗಿದ್ದರೆ ಈ ಬಗ್ಗೆ ಒಂದಾದರೂ ಉದಾಹರಣೆಯಿರಬೇಕಿತ್ತು, ಕೇವಲ ವೀರಶೈವರೆಂಬ ಒಂದೇ ಕಾರಣಕ್ಕೆ ಯಾವ 'ಕೀಳುಜಾತಿ'ಯವರು ಹುಡುಕಿಹುಡುಕಿ ದೌರ್ಜನ್ಯವೆಸಗುತ್ತಿದ್ದಾರೆ? ಈ ಥರದ ಎಷ್ಟು ಪ್ರಕರಣಗಳಿವೆ? ಕೇವಲ ಕೀಳು ಜಾತಿಯವರಷ್ಟೇ ದೌರ್ಜನ್ಯವೆಸಗಬಾರದೆಂದರೆ ಮೇಲ್ಜಾತಿಯವರಿಗೆ ಮೌನ ಸಮ್ಮತಿಯೇ? ವೀರಶೈವರ ಪಾಲಿಗೆ ಮೇಲ್ಜಾತಿಯವರೆಂದರೆ ಬ್ರಾಹ್ಮಣರು ಅಥವಾ ಮಾರ್ವಾಡಿಗಳು. ಅವರು ದೌರ್ಜನ್ಯವೆಸಗುತ್ತಿಲ್ಲ, ಏಕೆಂದರೆ ಅವರ ಪಾಲಿಗಿವರು 'ಕೀಳು'. 'ಕೀಳು' ಜಾತಿಯವರು ಮಾಡುತ್ತಿದ್ದಾರೇಕೆಂದರೆ ಅವರ ಲೆಕ್ಕಕ್ಕಿವರು ಮೇಲು?

ಇಂಥಾ ಹುಚ್ಚು ಪರಿಕಲ್ಪನೆಗೇನಾದರೂ ತಲೆಬುಡ ವಿದ್ದೀತೆ? ಯಾರೋ ತಲೆಕೆಟ್ಟವನೊಬ್ಬ ವಾರ್ಷಿಕ ಅಧಿವೇಶನ ದಲ್ಲಿ ಪ್ರಸ್ತಾಪಿಸಿ ಹುಚ್ಚಾಟ ನಡೆಸಿದ್ದನ್ನೇ ಸಂವಿಧಾನದಲ್ಲಿ ಅವಕಾಶವಿಲ್ಲವೆಂದು ಗೊತ್ತಿದ್ದೂ ವಾರ್ಷಿಕ ವರದಿಯಲ್ಲಿ ಇದನ್ನು ಪ್ರಕಟಿಸುತ್ತಾರೆಂದರೆ ಅದಕ್ಕೊಂದು ಕಾರಣವಂತೂ ಇರಲೇಬೇಕಲ್ಲವೆ?

ಸದ್ಯ ಕಾಂಗ್ರೆಸ್ ಸರ್ಕಾರದ ಮಟ್ಟಿಗೆ ವೀರಶೈವರ ರೂವಾರಿಯೆಂದರೆ ಅದು ಶಾಮನೂರು. ಮಿಕ್ಕಂತೆ ಎಂ.ಬಿ. ಪಾಟೀಲ್, ಎಸ್. ಪಾಟೀಲ್, ಶರಣ ಪ್ರಕಾಶ್ ಪಾಟೀಲ್, ವಿನಯ್ ಕುಲಕರ್ಣಿ ಸೇರಿದಂತೆ ಐವರು ಮಂತ್ರಿಗಳಿದ್ದಾರೆ. ವಿಧಾನ ಪರಿಷತ್ ಸಭಾ ನಾಯಕ ಎಸ್.ಆರ್. ಪಾಟೀಲ್, ರಾಜ್ಯದ ದೆಹಲಿ ಪ್ರತಿನಿಧಿ ನಾಡಗೌಡ, ವಿಧಾನಸಭೆಯ ಚೀಫ್ ವಿಪ್ ಪಿ.ಎಂ. ಅಶೋಕ್, ಕಾಂಗ್ರೆಸ್‌ನ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಎಂ.ವಿ. ರಾಜಶೇಖರನ್ ಸೇರಿದಂತೆ ಪಕ್ಷ ಮತ್ತು ಸರ್ಕಾರದ ಮಟ್ಟದಲ್ಲಿ ಲಿಂಗಾಯತರ ಪಾಲೇನೂ ಕಮ್ಮಿಯಿಲ್ಲ, ಎಚ್.ಕೆ. ಪಾಟೀಲರು ಲಿಂಗಧಾರಿಯಾದರೂ ಅವರನ್ನು ತಮ್ಮವರನ್ನಾಗಿ ಅಪ್ಪಿಕೊಳ್ಳುವಷ್ಟು 'ದೊಡ್ಡಸ್ತಿಕೆ' ಆ ಜನಾಂಗದ ನಾಯಕರಿಗಿಲ್ಲ.


ಪರಮೇಶ್ವರ್ ಕೆಪಿಸಿಸಿ ಅಧ್ಯಕ್ಷಗಿರಿಯಿಂದ
ತೆರವಾದರೆ ಅದಕ್ಕೊಬ್ಬ ಲಿಂಗಾಯತರನ್ನು ತರಬೇಕೆಂ
ಸಿದ್ದು ದೂರದೃಷ್ಟಿಗೆ ಕಾಂಗ್ರೆಸ್ಸಿನ ವೀರಶೈವರಿಂದಲೇ
ಪ್ರೋತ್ಸಾಹ, ಉತ್ಸಾಹ ವ್ಯಕ್ತವಾಗಲಿಲ್ಲ, ಇದರರ್ಥ
ವೀರಶೈವ ಸಮೂಹದ್ದು ಕಾಂಗ್ರೆಸ್ ವಿಷಯದಲ್ಲಿ
ಅರೆಮನಸ್ಸು.

ಮತ್ತೊಂದೆಡೆ ಬಿಜೆಪಿಯಲ್ಲಿ ಮತ್ತೆ ಯಡ್ಡಿಯನ್ನು
ಅಧ್ಯಕ್ಷಗಾದಿಗೆ ತರುವ ಸರ್ಕಸ್ ಶುರುವಾಗಿದೆ. ಆ
ಮೂಲಕ ಯಡ್ಡಿಯೇ ಮುಖ್ಯಮಂತ್ರಿ ಅಭ್ಯರ್ಥಿಯನ್ನಾ
ಬಿಂಬಿಸುವುದು ಬಿಜೆಪಿಯ ಲಿಂಗಾಯತ ನಾಯಕರ
ಹುನ್ನಾರ. ವಿಶೇಷವಾಗಿ ಸೋಮಣ್ಣ, ನಿರಾಣಿ,
ರೇಣುಕಾಚಾರ್ಯ ಉದಾಸಿ ಥರದವರು ಇಂಥಾದ್ದೊಂದು
'ಕಸರತ್ತು' ಶುರುವಿಟ್ಟಾಗಿದೆ. ಶತಗತಾಯ ಮತ್ತೊಮ್ಮೆ
ಯಡ್ಡಿಯನ್ನು ಮುಖ್ಯಮಂತ್ರಿ ಮಾಡಲೇಬೇಕೆಂಬ ಈ
ಷಡ್ಯಂತ್ರಕ್ಕೆ ಪೂರಕ ವಾತಾವರಣ ಸೃಷ್ಟಿಯಾಗಬೇಕೆಂದು
ಲಿಂಗಾಯತ ಮತಗಳ ಧ್ರುವೀಕರಣವಾಗಲೇಬೇಕು.
ನಿಟ್ಟಿನಲ್ಲಿ ಮತ್ತೆ ವೀರಶೈವರಿಗೆ ಅಧಿಕಾರ ಹಿಡಿಯುವ
ಏಕೈಕ ಅವಕಾಶವೆಂದರೆ ಜನಾಂಗದ ಮತಗಳ
ಕನ್‌ಸಾಲಿಡೇಷನ್ ಮತ್ತು ಕಾಂಗ್ರೆಸ್‌ಗೆ ಕೆಳಜಾತಿಗಳ
ಪಕ್ಷವೆಂಬ ಹಣೆಪಟ್ಟಿ ಅಂಟಿಸುವುದು! ಅದಕ್ಕೆ ಈ
'ಕೀಳುಜಾತಿ'ಯ ಪ್ರಲಾಪ !

■ ರಾ. ಸೋಮನಾಥ

ಬೂದಿಯಾಗದ ಕೆಂಡ: ದಲಿತರ ಆತ್ಮಕಥನ

ಪುಸ್ತಕ ಪರಿಚಯ



ಅಂಬೇಡ್ಕರರು ದೇವಾಲಯ ಪ್ರವೇಶ ಕುರಿತಂತೆ "ಸಭ್ಯತೆಗಿಂತ ಹಿಂದೂವಾಗಿ ಉಳಿಯುವುದೇ ಮುಖ್ಯವಾದಲ್ಲಿ ನಿಮ್ಮ ದೇವಾಲಯಗಳ ಬಾಗಿಲು ಹಾಕಿಕೊಳ್ಳಿ, ನಮಗೆ ಒಳಬರಬೇಕಾದ ತುರ್ತು ಇಲ್ಲ" ಎಂಬ ಮಾತಿನೊಂದಿಗೆ ನಮ್ಮೆದೆಗಿಳಿಯುವ ವಿಜಯಕುಮಾರ್ ಸಿಗರನಹಳ್ಳಿಯವರ ಈ ಪುಸ್ತಕ ದಲಿತರ ಆತ್ಮಕಥನವೇ ಸರಿ. ಇದನ್ನು ಓದಿದ ಪ್ರತಿಯೊಬ್ಬ ದಲಿತನಿಗೂ ನನ್ನದೇ ಕಥೆ ಎನಿಸುವುದರಲ್ಲಿ ಸಂಶಯವಿಲ್ಲ. ಪ್ರತಿಯೊಬ್ಬ ಕರ್ಮಠ ಸವರ್ಣೀಯನಿಗೂ ನನ್ನದೇ ದೌರ್ಜನ್ಯ ಎನಿಸುವುದರಲ್ಲಿಯೂ ಸಂಶಯವಿಲ್ಲ. ಒಟ್ಟು ಹದಿನಾಲ್ಕು ಅನುಭವ ಕಥನಗಳನ್ನೊಳಗೊಂಡಿರುವ ಈ ಪುಸ್ತಕ ಶೈನಿಂಗ್ ಮತ್ತು ಡಿಜಿಟಲ್ ಇಂಡಿಯಾದೊಳಗಿನ ಡಿಪ್ರೆಸ್ಡ್ ಇಂಡಿಯಾವನ್ನು ಮುಖಕ್ಕೆ ರಾಚಿಸುತ್ತದೆ. ಬೂದಿ ಜವರಪ್ಪ, ಕಾಳ, ಕರಿಯ, ಮಡಿಕೆ ಮಹೇಶ ಇತ್ಯಾದಿ ಹೆಸರುಗಳು ದಲಿತ ಪರಂಪರೆಯನ್ನು ಬಿಚ್ಚಿಡುತ್ತಾ ಹೋಗುತ್ತವೆ. ಅನ್ನದಿಂದ ಆರಂಭವಾಗುವ ಕಥನ ನೀರಿನಿಂದ ಕೊನೆಯಾಗಿರುವುದು 'ಇದು ಹೊಲೆಮಾದಿಗರ ಹಾಡು' ಎಂಬ ಅಡಿ ಬರಹಕ್ಕೆ ನ್ಯಾಯ ಸಲ್ಲಿಸುತ್ತಲೇ ಎರಡನೇ ತಲೆಮಾರಿನ ವಿದ್ಯಾವಂತ ದಲಿತನೊಬ್ಬನ ಸ್ವಾಭಿಮಾನವನ್ನು, ರೋಷವನ್ನು, ಅಸಹಾಯಕತೆಯನ್ನು ಬಿಚ್ಚಿಡುತ್ತಾ ಹೋಗುತ್ತದೆ.

ಆರಂಭದಲ್ಲಿಯೇ ಲೇಖಕ ಬಾಲ್ಯದಲ್ಲಿ ಅನ್ನಕ್ಕಾಗಿ ಪರಿತಪಿಸುವ ಪ್ರಸಂಗ ದಲಿತ ಭಾರತವನ್ನು ಪರಿಚಯಿಸುತ್ತದೆ. ಬೆಳಗಿನ ಜಾವ 4 ಗಂಟೆಯವರೆಗೆ ಹಸಿದುಕೊಂಡು ಮೇಲ್ಜಾತಿಯವರು ತಿಂದು ಉಳಿಸಿದ ಅನ್ನಕ್ಕೆ ಎದುರು ನೋಡುತ್ತಾ ಮಲಗಿದ್ದಲ್ಲೇ ಒದ್ದಾಡುತ್ತಿದ್ದ ಲೇಖಕನಿಗೆ 'ಗೌಡ'ನ ಕರೆ ಜೀವ ತರಿಸಿದಂತಾಗಿ ಕೇರಿಯವರು ಗೌಡರ ಕೊಟಿಗೆಗೆ ಹೋದಾಗ ಅನ್ನವೇ ಖಾಲಿಯಾಗಿರುತ್ತದೆ. ಪಾತ್ರೆಗೆ ಮೆತ್ತಿಕೊಂಡಿದ್ದ ಅರೆಬರೆ ಅನ್ನವನ್ನೇ ಮೃಷ್ಟಾನ್ನದಂತೆ ಮಕ್ಕಳು ತಿಂದು ಬರುತ್ತಾರೆ. ಕೇರಿಯ ಮನೆಗಳಲ್ಲಿ 'ಮೂರು ಮಡಿಕೆ' ಒಲೆ ಮೇಲೆ ಕುಂತಿದ್ದವೆಂದರೆ ಅಲ್ಲಿ ಅನ್ನವಿದೆ ಎಂಬುದು ಖಾತ್ರಿ. ಒಂದು ಮುದ್ದೆಯದ್ದು, ಇನ್ನೊಂದು ಸಾರು, ಮಗದೊಂದು ಅನ್ನ. ಕೇರಿಯ ಮಕ್ಕಳಿಗೆ ಅಂದು ಅನ್ನ ಸಂತರ್ಪಣೆ.

ಹೀಗೆ ಎರಡು ತಿಂಗಳಿಗೋ ಮೂರು ತಿಂಗಳಿಗೋ ಅನ್ನ ಕಾಣುವ ಕೇರಿಯಲ್ಲಿ ಹುಟ್ಟಿದ ಲೇಖಕನ ಅನುಭವಕತೆ ಮುಂದುವರೆಯುತ್ತದೆ. ಮನೆ ಬಾಡಿಗೆಗೆ ನೀಡಿ ಜಾತಿ ಗೊತ್ತಾಗಿ ನಿಂತಲ್ಲಿಯೇ ಮನೆ ಖಾಲಿ ಮಾಡಿಸುವುದಂತೂ ಅಮಾನವೀಯ. ದಲಿತ ಗುಂಡಯ್ಯನ ಮನೆ ಕಾರ್ಯದಲ್ಲಿ ಮೇಲ್ಜಾತಿಗೆ ಸೇರಿದ ಇಬ್ಬರು ಹುಡುಗರು ಊಟ ಮಾಡಿದ್ದಕ್ಕೆ ಪಂಚಾಯತಿ ಸೇರಿಸಿ ದಲಿತರಿಗೆ 1000 ರೂಪಾಯಿ ದಂಡ ವಿಧಿಸಲಾಗುತ್ತದೆ. ಊಟಕ್ಕೇ ಒದ್ದಾಡುವ ಜನ ಹಣ ಎಲ್ಲಿ ಕಟ್ಟುತ್ತಾರೆ? ಅಲ್ಲೇ ಇದ್ದ ಭೂಮಾಲೀಕರ ಕಾಲಿಗೆ ಬಿದ್ದು ಜೀತಕ್ಕೂ ಬೀಳುತ್ತಾರೆ. ದಲಿತರ ದಂಡದ ಹಣ ಮೇಲ್ಜಾತಿ ಹುಡುಗರು ಮೈಲಿಗೆ ಕಳೆದುಕೊಳ್ಳಲು ಧರ್ಮಸ್ಥಳಕ್ಕೆ ಹೋಗುತ್ತದೆ. ನೋಡಿ ಅನ್ನ ನೀಡಿದ ತಪ್ಪಿಗೆ ದಂಡ ಮತ್ತು ಜೀತಗಾರಿಕೆ ಬಹುಮಾನ! ಇದು ಎಚ್ಚೆತ್ತ ದಲಿತನೊಬ್ಬನಿಂದ ಜಿಲ್ಲಾಧಿಕಾರಿಗಳ ಗಮನ ಸೆಳೆದು ಪೊಲೀಸ್ ಸ್ಟೇಷನ್ ಮೆಟ್ಟಿಲು ಹತ್ತಿದೊಡನೆ ಅಲ್ಲಿನ ಸಚಿವನ ಎಂಟ್ರಿಯಾಗಿ 'ನೀವು ಕೂಡ ಎಚ್ಚರಿಕೆಯಿಂದ ಬಾಳಬೇಕು. ಸಣ್ಣ ಕಲ್ಲಿನ ಮೇಲೆ ದೊಡ್ಡ ಕಲ್ಲು ಬಿದ್ದರೆ ಏನಾಗುತ್ತದೆ ಗೊತ್ತೇ' ಎಂದು ದಲಿತರಿಗೆ ತಣ್ಣಗೆ ಧಮಕಿ ಹಾಕುವುದರ ಮೂಲಕ ಆಳುವ ವರ್ಗ ದಲಿತರ ಪರವಲ್ಲವೆಂಬುದು ಸಾಬೀತಾಗುತ್ತದೆ. ಜನಪ್ರತಿನಿಧಿಯಿಂದಲೇ ಪ್ರಜಾಪ್ರಭುತ್ವಕ್ಕೆ ತಿಲಾಂಜಲಿ ಇಟ್ಟಂತಾಗುತ್ತದೆ. ಇದು ಭಾರತದಲ್ಲಿ ಮಾತ್ರ ಸಾಧ್ಯ.

ಹಳಸಿದ ಅನ್ನವನ್ನು ಬಿಸಿನೀರಿನಲ್ಲಿ ಕುದಿಸಿ ಹಿಂಡಿ ತಿನ್ನಬಹುದು. ಹಾಲಿಲ್ಲದ ಕಾರಣ ಮಗುವಿಗೆ ಮುದ್ದೆಯನ್ನೂ ತಿನ್ನಿಸಿ ಬದುಕಿಸಿಕೊಳ್ಳಬಹುದು ಎಂಬಂಶಗಳು ಸ್ಪೃಶ್ಯ ಸಮಾಜಕ್ಕೆ ಸಂಶೋಧನೆಯಂತೆ ಕಂಡರೂ ಅಚ್ಚರಿ ಇಲ್ಲ.

ದಲಿತರಿಲ್ಲದೆ ಜಾತ್ರೆಗಳಿಲ್ಲ, ಆದರೆ ಅವರು ತೇರು ಎಳೆಯುವಂತಿಲ್ಲ, ಎಳೆಯಲು ಮುಂದಾದರೆ? ಗಲಾಟೆ, ದಾಂಧಲೆ ಜೊತೆಗೆ ಪುಂಡರು ಎಂಬ ಹಣೆಪಟ್ಟಿ. ಅಂತಹ ಪ್ರಸಂಗವೊಂದು ಲೇಖನದಲ್ಲಿ ಪ್ರಸ್ತಾಪವಾಗಿ ಎಚ್ಚೆತ್ತ ದಲಿತ ಪ್ರಜ್ಞೆಯ ತೊಳಲಾಟವನ್ನು ಓದಲೇಬೇಕು. ಇನ್ನು ದಲಿತರು ಸಿಡಿ ಏರುವುದರ ಹಿಂದಿರುವ ಕತೆ ರೋಚಕ ಮತ್ತು ಅಷ್ಟೇ ಹಾಸ್ಯಾಸ್ಪದ. ಹಿಂದೆ ಎಂದೋ ಭತ್ತ ಕದ್ದಿದ್ದಕ್ಕೆ ಅದರಿಂದಾಗುತ್ತಿದ್ದ ಆಪತ್ತನ್ನು ಉಡಸಲಮ್ಮ ಕಾಪಾಡಿದ್ದಕ್ಕೆ ದಲಿತರು ಇಂದಿಗೂ ಸಿಡಿ ಏರುತ್ತಿದ್ದಾರೆ. ಈ ಕತೆಯಲ್ಲಿ ಪೊಲೀಸರ ಪಾತ್ರವೂ ಬಂದು ಹೋಗುವುದು ದಲಿತರನ್ನು ಎಷ್ಟು ಸುಲಭವಾಗಿ ಮೋಸಗೊಳಿಸಬಹುದೆಂಬುದನ್ನು ತಿಳಿಸುತ್ತದೆ. ಸರ್ಕಾರ ನಿರ್ಮಿಸಿದ ಸಮುದಾಯ ಭವನದಲ್ಲಿ ದಲಿತರ ದಾಸಪ್ಪನ ತಿಥಿ ಕಾರ್ಯವನ್ನು ನೆರವೇರಿಸಲಾಗಿ ತಿಳಿದೋ ತಿಳಿಯದೆಯೋ ಮೇಲ್ಜಾತಿ ಮಕ್ಕಳು ತಿಂದುಂಡು ತೇಗಿದ್ದಕ್ಕೆ ಅದು ಇಂದು ಒಕ್ಕಲಿಗರ ಸಮುದಾಯ ಭವನವಾಗಿದೆ. ಅಲ್ಲಿನ ಶಾಸಕನಿಗೆ ಬೆಳ್ಗೆ ಬೆಳಗ್ಗೆಯೇ ದಲಿತರ ಮುಖ ನೋಡುವುದು ಅಪಶಕುನವಂತೆ. 'ಹೊಲೇರ ಮನೆ ಕಾರ್ಯದಲ್ಲಿ ಮೇಲ್ಜಾತಿಗಳಿಗೆ ಊಟ ಹಾಕಿಸುವುದು ತಪ್ಪಲ್ಲವೆ?' ಎಂದು ತೀರ್ಪು ನೀಡುವ ಶಾಸಕ! ಇಂತಹವರಿರುವಾಗ ನಮ್ಮ ದೇಶ ಉದ್ಧಾರವಾಗುವುದಾದರೂ ಹೇಗೆ? ಅದೂ ಮಾಜಿ ಪ್ರಧಾನಿ ದೇವೇಗೌಡರ ಹಾಸನದಲ್ಲಿ.

ಅಂದಿನಿಂದ ದಲಿತರು ಮದುವೆ ಮಾಡಿದರೆ ಮೇಲ್ಜಾತಿಗಳಿಗೆ ಹೋಟೆಲ್ಲಿನಲ್ಲಿ ಊಟ ಹಾಕಿಸ್ಬೇಕು. ಇನ್ನೊಂದು ಆಶ್ಚರ್ಯ. ಹಾಸನದ ಕಾಗಿನಹರೆಯ ಚೌಡಮ್ಮ ದೇವಿಗೆ ದಲಿತರನ್ನು, ಮುಸಲ್ಮಾನರನ್ನು ಕಂಡರೆ ಆಗದು. ದಲಿತರು ಅವಳ ಹೆಸರನ್ನೂ ಹೇಳುವಂತಿಲ್ಲ! ಆ ಇಡೀ ಊರಿನಲ್ಲಿಯೇ ಒಂದೂ ದಲಿತ ಕುಟುಂಬ ವಾಸವಿಲ್ಲ. ಹೀಗೆ ಹದಿನಾಲ್ಕು ಅನುಭವ ಕಥನಗಳು ಒಂದನ್ನೊಂದು ಮೀರಿಸುತ್ತಾ ಸಾಗುತ್ತವೆ. ಈ ನೆಲದ ಸಂಪ್ರದಾಯ, ಸವರ್ಣೀಯರೊಳಗೆ ನೆಲೆಸಿರುವ ಕ್ರೌರ್ಯವನ್ನು ಬಿಚ್ಚಿಡುತ್ತಾ ಹೋಗುತ್ತದೆ. ಇಲ್ಲಿ ಗರ್ಭಿಣಿ ಹೆಂಗಸನ್ನು ಮನೆಯೊಳಗೆ ಬೀಳುತ್ತಿರುವ ಕಲ್ಲುಗಳಿಂದ ರಕ್ಷಿಸಲು ರೇಡಿಯೋ ಸ್ಟ್ಯಾಂಡ್ ಕೆಳಗೆ ಮಲಗಿಸಲಾಗುತ್ತದೆ. ದಲಿತ ಯುವಕನ ಕೆಲಸದ ಅರ್ಜಿಯನ್ನು ಅವನೆದುರೇ ಹರಿದು ಬಿಸಾಕಿದ ಶಾಸಕನಿದ್ದಾನೆ. ಮಗಳ ಮದುವೆಗೆ ಜೀತಕ್ಕೆ ಬೀಳುವ ಅಪ್ಪನಿದ್ದಾನೆ. ಈ ತಾರತಮ್ಯವನ್ನು ಧಿಕ್ಕರಿಸಲು ಹಪಹಪಿಸುವ ಯುವಕನಿದ್ದಾನೆ. ಆ ಯುವಪಡೆ ದೊಡ್ಡ ಸಾಗರವಾದರೆ ಆಹಾ! ಅದೆಷ್ಟು ಚೆನ್ನ.

ಒಟ್ಟಾರೆ ವಿದ್ಯಾವಂತ ದಲಿತನ ತುಮುಲಗಳನ್ನು ತಿಳಿದುಕೊಳ್ಳಲು, ಸಿಡಿದೇಳುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಲು, ಹಾಗೇ ಸುಮ್ಮನೆ ಕಣ್ತೇವವಾಗಿಸಿಕೊಳ್ಳಲು, ನಿಮ್ಮೆದೆಯೊಳಗೆ ಆರಿಹೋಗುತ್ತಿರುವ ಬೆಂಕಿಯ ಕಿಡಿಯನ್ನು ಕೆಂಡವಾಗಿಸಿಕೊಳ್ಳಲು ಈ ಪುಸ್ತಕವನ್ನು ಓದಲೇಬೇಕು.

- ವಿಕಾಸ ಆರ್ ಮೌರ್ಯ, ಬೆಂಗಳೂರು

11 ⏮ 'ಪೋಲಿ' ಕಾಲ್

ನಿಜವೋ ಸುಳ್ಳೋ ಗೊತ್ತಿಲ್ಲ, ಆದರೆ ಮೂಡಿಗೆರೆಯ ಸುಮತಿ (ಹೆಸರು ಬದಲಿಸಲಾಗಿದೆ) ಎಂಬಾಕೆಯ ಜೊತೆಗೆ ಕುಮಾರಸ್ವಾಮಿಯ ಹೆಸರು ಭರ್ಜರಿಯಾಗೇ ಥಳುಕು ಹಾಕಿಕೊಂಡಿತ್ತು. ಚಿಕ್ಕವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡಿದ್ದ ಆಕೆ ಕುಮಾರಸ್ವಾಮಿಯ ಅತ್ಯಾಪ್ತ ವಲಯದಲ್ಲಿ ಸ್ಥಾನ ದಕ್ಕಿಸಿಕೊಂಡಿದ್ದಳಂತೆ. ಅದೇನಾಯಿತೋ ಏನೊ, ಈತ ಎರಡನೇ ಸಲ ಚುನಾವಣೆಗೆ ಸ್ಪರ್ಧಿಸುವ ವೇಳೆಗಾಗಲೆ ಇಬ್ಬರ ನಡುವಿನ ಸಂಬಂಧ ಮುರಿದುಬಿದ್ದಿತ್ತು. ಆಗ ಇದೇ ಸುಮತಿ 'ನಾವಿಬ್ಬರೂ ಒಟ್ಟಿಗೇ ಇರುವ ವೀಡಿಯೋ ನನ್ನ ಬಳಿ ಇದ್ದು, ಅದನ್ನು ಟೀವಿ ಚಾನೆಲ್‌ಗಳಿಗೆ ಕೊಟ್ಟು ಮಾನ ಹರಾಜು ಹಾಕ್ತೀನಿ, ನೀನು ಸೋಲುವಂತೆ ಮಾಡ್ತೀನಿ' ಅಂತ ಬೆದರಿಕೆ ಹಾಕಿದ್ದಳು ಮತ್ತು ಅದರಿಂದ ಬಚಾವಾದರೆ ಸಾಕು ಅಂತ ಕುಮಾರಸ್ವಾಮಿ ಆಕೆಗೆ ಕಾರ್ ಗಿಫ್ಟು ಕೊಟ್ಟು ಲೆಕ್ಕ ಚುಕ್ತಾ ಮಾಡಿಕೊಂಡಿದ್ದ ಎನ್ನಲಾಗುತ್ತಿದೆ.

ಕುಮಾರಸ್ವಾಮಿಯ ಹತ್ತಿರದವರೇ ಅವನೆಷ್ಟು ಪರಸಂಗ ಪ್ರಿಯ ಅನ್ನೋದನ್ನು ಹೇಳಿಕೊಂಡು ಓಡಾಡುತ್ತಿದ್ದಾರೆ. ಅಷ್ಟೇ ಏಕೆ, ಈಗ ಹೊರಬಂದಿರುವ 'ಪೋಲಿಟಾಕ್' ಆಡಿಯೋದಲ್ಲಿ ಮಾತಾಡಿರುವ ಆ ಹೆಂಗುಸು ಸಹ 'ಹೋಗೋ, ನಿನಗೆ ಯಾವ್ಯಾವಳಿದಾಳೊ, ಯಾವ್ಯಾವಳ್ ಜೊತೀಗಿ ಹೋಗ್ತಿಯೋ, ಏನೊ. ಪ್ರಮಾಣ ಮಾಡಿಹೇಳೊ, ನೀನು ಬೇರೆ ಯಾರ್ ಜೊತೆಗೂ ಸೇರಿಲ್ವಾ' ಅಂತ ಪದೇಪದೇ ಕೇಳೋದು, 'ನೀನು ಹಶ್‌ಹಶ್ ಮುದ್ಕ ಆಗ್ಬೇಕು, ಅವಾಗ್ ಸರಿಹೋಗ್ತೀಯಾ' ಅಂತ ಚುಡಾಯ್ಸೋದು ಇವೆಲ್ಲಾ ಆ ಖಯಾಲಿಯನ್ನೇ ಸಾಬೀತು ಮಾಡುತ್ತವೆ.

ಸಂಘಿಗಳ ಷರತ್ತು ಮತ್ತು ಅಮ್ಮಾವ್ರ ಗಂಡ

ಇಂತಿಪ್ಪ ಸ್ತ್ರೀಲೋಲ ಕುಮಾರಸ್ವಾಮಿ ಮದುವೆಯಾದದ್ದೇ ತೀರಾ ಇತ್ತೀಚೆಗೆ; ಅದೂ ತಾನು ಎರಡನೇ ಸಲ ಎಂಎಲ್‌ಎ ಆಗಿ ಗೆದ್ದ ನಂತರ! ಅಷ್ಟರಲ್ಲಾಗಲೆ ಆತನ ವಯಸ್ಸು ಮೂವತ್ತೈದರ ಗಡಿ ದಾಟತ್ತು, ಮದುವೆಯಾದರೆ ಎಲ್ಲಿ ತನ್ನ ಪೋಲಿಮೇಯುವ ಖಯಾಲಿಗೆ ಅಡ್ಡಿಯಾಗುತ್ತೆ ಅಂತಲೋ, ಏನೊ ಕುಮಾರಸ್ವಾಮಿ ಮದುವೆಯನ್ನೇ ಆಗಿರಲಿಲ್ಲ, ಆದರೆ ಇವನ ಸ್ತ್ರೀಲೋಲತೆಯನ್ನು ಕಂಡು ಚಿಂತೆಗೀಡಾಗಿದ್ದ ಸಂಘಪರಿವಾರ 2007ರಲ್ಲೇ ಮುಂದಿನ ಎಲೆಕ್ಷನ್‌ಗೆ ಟಿಕೆಟ್ ಸಿಡಬೇಕೆಂದರೆ ನೀನು ಇವನ್ನು ಪೂರೈಸಲೇಬೇಕು ಅಂತ ಹತ್ತು ಷರತ್ತುಗಳನ್ನು ಮುಂದಿಟ್ಟಿತ್ತಂತೆ. ಅವುಗಳಲ್ಲಿ ಮೊದಲನೆಯದ್ದೇ, ಆದಷ್ಟು ಬೇಗ ಮದುವೆಯಾಗಬೇಕು; ಎರಡನೆಯದ್ದು, ಹುಡುಗೀರ ಹಿಂದೆ ತಿರುಗುವ ಖಯಾಲಿಯನ್ನು ಬಿಡಬೇಕು ಎನ್ನುವವು ಆಗಿದ್ದವಂತೆ!

ಹಾಗಾಗಿ ಮದುವೆಯಾಗುವುದು ಕುಮಾರಸ್ವಾಮಿಗೆ ಅನಿವಾರ್ಯ ಆಯ್ಕೆಯಾಗಿತ್ತು. ಇಷ್ಟುದಿನ ಬಿಟ್ಟು ಮಧ್ಯವಯಸ್ಸು ದಾಟಿದ ಮೇಲೆ ಈ ಕುಮಾರಸ್ವಾಮಿ ಯಾಕೆ ಮದುವೆಯಾಗುತ್ತಿದ್ದಾನೆ ಎನ್ನುವ ಅನುಮಾನ ಜನರಲ್ಲಿ ಮೂಡಬಹುದೆಂದು 2007ರಲ್ಲಿ ಜೆಡಿಎಸ್ ಕುಮಾರಸ್ವಾಮಿ ಯಡ್ಡಿಗೆ ಸಿಎಂ ಗಾದಿ ಹಸ್ತಾಂತರಿಸದೆ ದ್ರೋಹ ಬಗೆದಾಗ 'ನನ್ನ ರಾಜಕೀಯ ಗುರು ಯಡಿಯೂರಪ್ಪ ಸಿಎಂ ಆಗುವವರೆಗೂ ನಾನು ಮದುವೆಯಾಗಲ್ಲ' ಅಂತ ಮೂಡಿಗೆರೆ ಕುಮಾರಸ್ವಾಮಿ ಪ್ರತಿಜ್ಞೆಗೈದಿದ್ದ. ಆಗಿದ್ದ ಪರಿಸ್ಥಿತಿಯಲ್ಲಿ ಚುನಾವಣೆಗೆ ಹೋದರೂ ಬಿಜೆಪಿ ಗೆದ್ದೇಗೆಲ್ಲುತ್ತೆ, ಯಡ್ಡಿ ಸಿಎಂ ಆಗಿಯೇ ಆಗುತ್ತಾನೆ, ನನ್ನ ಮದುವೆಗೂ ಒಂದು ಕಾರಣ ಸಿಕ್ಕಂತಾಗುತ್ತೆ ಎನ್ನುವ ಲೆಕ್ಕಾಚಾರ ಇದ್ದರೂ ಇರಬಹುದೇನೊ. ಅದರಂತೆ 2008ರಲ್ಲಿ ಯಡ್ಡಿ ನಿಜಕ್ಕೂ ಸಿಎಂ ಆಗಿ ಅವತರಿಸಿಯೇಬಿಟ್ಟ.

ಸಂಘಪರಿವಾರದ ಷರತ್ತಿನಂತೆ ಮತ್ತು ತಾನೇ ಗೈದಿದ್ದ ಪ್ರತಿಜ್ಞೆಯಂತೆ ಮೈಸೂರಿನ ಒಬ್ಬಾಕೆಯನ್ನು 2008ರ ಅಕ್ಟೋಬರ್ 9ರ ವಿಜಯದಶಮಿ ದಿನದಂದು ಮೈಸೂರಿನಲ್ಲೇ ವಿವಾಹವಾಗಿದ್ದ. ಮೂಡಿಗೆರೆ ಕುಮ್ಮಿಯ ಹೆಂಡತಿಯು ಸಣ್ಣ ನೀರಾವರಿ ಇಲಾಖೆಯಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡಿಕೊಂಡಿದ್ದಾಳೆ. ಈಕೆಯ ತಂದೆ ಸಂಪತ್‌ಕುಮಾರ್ ಎಂಬುವವರು ಈ ಹಿಂದೆ ಮೂಡಿಗೆರೆ ತಾಲ್ಲೂಕು ಪಂಚಾಯ್ತಿಯಲ್ಲಿ ಕಾರ್ಯ ನಿರ್ವಹಣಾ ಅಧಿಕಾರಿಯಾಗಿ ಕೆಲಸ ಮಾಡಿದ್ದರು. ಆಗಿನ ಪರಿಚಯದಿಂದಾಗಿ ಸಂಬಂಧ ಕುದುರಿತ್ತು. ಆರಂಭದಿಂದಲೂ ಇವರಿಬ್ಬರ ವೈವಾಹಿಕ ಬದುಕು ನೆಟ್ಟಗೆ ಸಾಗಲೇ ಇಲ್ಲ. ಮದುವೆಯಾದ ಒಂದು ವರ್ಷಕ್ಕೇ ವೈಮನಸ್ಸು ಮನೆಮಾಡಿತ್ತು. ಅದಕ್ಕೆ ಕುಮಾರಸ್ವಾಮಿಯ ಹಳೇ ಖಯಾಲಿಗಳೇ ಕಾರಣ ಎನ್ನುವುದನ್ನು ಬಿಡಿಸಿಹೇಳುವ ಅಗತ್ಯವಿಲ್ಲ. ಗಂಡನ ಬುದ್ಧಿ ತಿಳಿದಿದ್ದ ಆಕೆ ಹದ್ದುಬಸ್ತಿನಲ್ಲಿಡಲು ಸಾಕಷ್ಟು ಕಸರತ್ತನ್ನೇ ಮಾಡಿದ್ದಳು.

ಈತನ ಕಾರ್ಯಕ್ಷೇತ್ರ ಮೂಡಿಗೆರೆಯಾದರೂ ಆಕೆ ಮೈಸೂರಿನಲ್ಲೇ ಇರುತ್ತಿದ್ದಳು. ಮೂಡಿಗೆರೆಯಲ್ಲಿ ಇವನ ಪ್ರತಾಪ ಕೇಳಿಕಂಡಿದ್ದ ಆಕೆ ಚಿಕ್ಕಮಗಳೂರಿನಲ್ಲಿ ಒಂದು ಮನೆ ಮಾಡಿಸಿದ್ದಳು. ಕುಮಾರಸ್ವಾಮಿ ಮೂಡಿಗೆರೆಯಲ್ಲಿ ಎಷ್ಟೊತ್ತೇ ಕಳೆದರೂ ರಾತ್ರಿ ಸೀದಾ ಚಿಕ್ಕಮಗಳೂರಿನ ಮನೆಗೆ ವಾಪಸ್ಸಾಗಿ ಅಲ್ಲಿರುವ ಲ್ಯಾಂಡ್‌ಲೈನ್‌ನಿಂದ ಫೋನ್ ಮಾಡಬೇಕೆನ್ನುವ ನಿಯಮವನ್ನು ಹೆಂಡತಿ ಮಾಡಿದ್ದಳಂತೆ! ಗಂಡನ ಮೇಲೆ ಅದಿನ್ನೆಂತ ನಂಬಿಕೆಯಿರಬೇಡ. ಮೊದಲಿನಿಂದಲೂ ಮದುವೆಯೆಂದರೆ ತಲೆ ಒದರುತ್ತಿದ್ದ ಕುಮಾರಸ್ವಾಮಿಗೆ ಇದೆಲ್ಲ ಅತಿಯಾಯಿತು ಅನ್ನಿಸಿರಬೇಕು. ಅದಕ್ಕೇ ಡೈವೋರ್ಸ್ ತೆಗೆದುಕೊಳ್ಳಲು ಇಬ್ಬರೂ ನಿರ್ಧರಿಸಿದ್ದಾನಂತೆ. ಇನ್ನು ಕೆಲವೇ ದಿನಗಳಲ್ಲಿ ವಿಚ್ಛೇದನವೂ ದೊರೆಯಲಿದೆಯಂತೆ.

ಅಸಲಿಗೆ ಈಗ ಲೀಕ್ ಆಗಿರುವ ಆಡಿಯೋ ಸಂಭಾಷಣೆ ಹೊರಬಿದ್ದಿರುವುದೂ ಕುಮಾರಸ್ವಾಮಿ ಹೆಂಡತಿಯ ಅಚಾತುರ್ಯದಿಂದ ಈತನ ಏಲಾಟಗಳ ಮೇಲೆ ಕಣ್ಣಿಡುವುದಕ್ಕಾಗಿ ಹೆಂಡತಿಯೇ ಅವನ ಮೊಬೈಲ್‌ನಲ್ಲಿ ಕಾಲ್ ರೆಕಾರ್ಡಿಂಗ್ ಆಯ್ಕೆಯನ್ನು ಆನ್ ಮಾಡಿಟ್ಟಿದ್ದಳಂತೆ. ಮನೆಗೆ ಬಂದಾಗ, ಅವನಿಗೇ ಗೊತ್ತಿಲ್ಲದಂತೆ ಆತ ಮಾತಾಡಿದ ಕಾಲ್‌ಗಳನ್ನೆಲ್ಲ ಚೆಕ್ ಮಾಡುವ ಜಾಸೂಸಿ ಉದ್ದೇಶ ಆಕೆಗಿತ್ತು. ಅಂತಹ ಒಂದು ಕಾಲ್‌ಗಳಲ್ಲಿ ಇದೂ ಒಂದು. ಈ ಸಂಭಾಷಣೆ ಆಕೆಗೆ ಸಿಕ್ಕ ನಂತರ ಅದನ್ನು ಸ್ಥಳೀಯ ಬಿಜೆಪಿ ಮುಖಂಡ ಗಡ್ಡ ಸೋಮ ಎಂಬಾತನ ಕೈಗಿತ್ತು 'ದಯವಿಟ್ಟು ದೊಡ್ಡವರಿಂದ ಬುದ್ಧಿ ಹೇಳಿಸಿ ಇವನನ್ನ ಸರಿ ಮಾಡಿ' ಅಂತ ಬೇಡಿಕೊಂಡಿದ್ದಳು ಎನ್ನಲಾಗಿದೆ. ಆ ಆಡಿಯೋ ಗಡ್ಡ ಸೋಮನಿಂದ ಮತ್ತೊಬ್ಬ ಬಿಜೆಪಿ ಮುಖಂಡ ದೀಪಕ್ ದೊಡ್ಡಯ್ಯ ಕೈ ಸೇರಿತ್ತು. ಹೇಳಿಕೇಳಿ ಈ ದೊಡ್ಡಯ್ಯ ಕುಮಾರಸ್ವಾಮಿಯ ಪ್ರತಿಸ್ಪರ್ಧಿ. ಕಳೆದ ಎರಡು ವಿಧಾನಸಭಾ ಎಲೆಕ್ಷನ್‌ಗಳಲ್ಲಿ ಮೂಡಿಗೆರೆಯ ಬಿಜೆಪಿ ಟಿಕೆಟು ತನಗೇ ದಕ್ಕಬೇಕೆಂದು ಪೈಪೋಟಿಗಿಳಿದಿದ್ದ. ಈ ಸಂದರ್ಭವನ್ನು ಬಳಸಿಕೊಳ್ಳುವ ಸಲುವಾಗಿ ಆತನೇ ಜನರ ಮೊಬೈಲ್‌ಗಳಿಗೆ ತಲುಪುವಂತೆ ಕೆಲ ದಿನಗಳ ಹಿಂದೆಯೇ ಲೀಕ್ ಮಾಡಿಸಿದ್ದ ಎನ್ನಲಾಗುತ್ತಿದೆ.

ಆದರೆ ಟೀವಿ ಚಾನೆಲ್‌ಗಳಿಗೆ ಇದು ತಲುಪಿದ್ದು ರಾಘವೇಂದ್ರ ಎಂಬ ಲೋಕಲ್ ಬೋಗಸ್ ಪತ್ರಕರ್ತನೊಬ್ಬನಿಂದ ಎನ್ನುವ ಗುಮಾನಿ ಕುಮಾರಸ್ವಾಮಿಗಿದೆ. ಈ ರಾಘವೇಂದ್ರ ಕೆಲದಿನಗಳ ಹಿಂದೆ ಕುಮ್ಮಿಗೆ ಫೋನಾಯಿಸಿ ಹಣ ಕೊಡುವಂತೆ ಬೇಡಿಕೆ ಇಟ್ಟಿದ್ದನಂತೆ. ಆದರೆ ಕುಮ್ಮಿ ಕ್ಯಾರೇ ಅಂದಿರಲಿಲ್ಲ. ಹಾಗಾಗಿ ಅವನೇ ಟೀವಿಯವರಿಗೆ ತಲುಪಿಸಿದ್ದಾನೆ. ಅವನನ್ನು ನಾನು ಸುಮ್ಮನೇ ಬಿಡುವುದಿಲ್ಲ ಅಂತ ಕುಮ್ಮಿ ಆಪ್ತರ ಮುಂದೆ ಗುಟುರು ಹಾಕುತ್ತಿದ್ದಾನಂತೆ.

ಅಂದಹಾಗೆ, ಆ ಸಂಭಾಷಣೆಯಲ್ಲಿ ಕುಮಾರಸ್ವಾಮಿಯ ಜೊತೆ ಮಾತಾಡಿರ್ರೋದು ಹಾಸನ ಮೂಲದ ಹೊಸ ಗೆಳತಿಯಂತೆ. ಮದುವೆಯಾಗಿ ಗೃಹಿಣಿಯಾಗಿರುವ ಆಕೆಯ ಗಂಡ ಭಾರೀ ರೊಕ್ಕಸ್ಥನಂತೆ. ಆ ಹಣದ ಮೇಲೆ ಕಣ್ಣಿಟ್ಟೇ ಕುಮಾರಸ್ವಾಮಿ ಆಕೆಯನ್ನು ಬುಟ್ಟಿಗೆ ಬೀಳಿಸಿಕೊಂಡಿರಬಹುದು. ಫೋನ್ ಸಂಭಾಷಣೆಯಲ್ಲಿ ಅವರೇ ಮಾತಾಡುವಂತೆ ಕುಮಾರಸ್ವಾಮಿಯ ಯಾವುದೋ ಸಾಲವನ್ನು ಆ ಹೆಂಗಸೇ ತೀರಿಸಿದ್ದು, ಅದನ್ನು ವಾಪಾಸ್ ಕೊಡ್ತೀನಿ ಅಂತ ತಲೆಸವರುತ್ತಿರುವ ಮಾತುಗಳೂ ತೂರಿಬರುತ್ತಿವೆ.


ಅದೇನೇ ಇರಲಿ, ಚಡ್ಡಿ ಪಾಳಯದ ಮತ್ತೊಬ್ಬ ಪೋಲಿ ಪುಂಡ ಈಗ ಸಿಕ್ಕಿಬಿದ್ದಿದ್ದಾನೆ. ಬಿಜೆಪಿ ತರಲೆಗಳ ಕಾಮ ಕಾಟದಿಂದ ರಾಜ್ಯಕ್ಕೆ ಬಿಡುಗಡೆ ಇಲ್ಲದಂತಾಗಿದೆ.

■ ಗಿರೀಶ್ ತಾಳಿಕಟ್ಟೆ

ಬಸವಣ್ಣನವರ ಸಪ್ತಶೀಲ ಮತ್ತು ಲೋಹಿಯಾರ ಸಪ್ತಕ್ರಾಂತಿ

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗಶುದ್ಧಿ ಇದೇ ಬಹಿರಂಗಶುದ್ಧಿ,
ನಮ್ಮ ಕೂಡಲಸಂಗಮದೇವರನೊಲಿಸುವ ಪರಿ.

– ಬಸವಣ್ಣ



ಬಸವಣ್ಣನವರ ಈ ವಚನ ಶರಣಧರ್ಮದ ಪ್ರಣಾಳಿಕೆಯಾಗಿದೆ. ಶರಣರು ನವಸಮಾಜದ ನಿರ್ಮಾಪಕರು. ಜಾತಿ, ಕುಲ, ವರ್ಗ ಮತ್ತು ಲಿಂಗಭೇದಗಳನ್ನು ಮೀರಿ ನಿಂತವರು. ಇಂಥ ಭೇದಗಳ ನಾಶಕ್ಕಾಗಿ ಹೋರಾಡಿದವರು. ಮಾನವನನ್ನು ಇಂಥ ಸಂಕೋಲೆಗಳಿಂದ ಬಿಡಿಸಿ ತಮ್ಮಂತೆ ಸ್ವತಂತ್ರಧೀರರನ್ನಾಗಿಸಲು ಶ್ರಮಿಸಿದವರು. ಅರಿವು-ಆಚಾರದ ದರ್ಶನದ ಮೂಲಕ ನಡೆನುಡಿ ಸಿದ್ಧಾಂತವನ್ನು ರೂಪಿಸಿದವರು. ಲೌಕಿಕ ಅನುಭವದ ಮೂಲಕ ಅಲೌಕಿಕ ಅನುಭಾವದ ಆನಂದವನ್ನು ಸವಿದವರು.

ಇವರಿಗೆ ಬಸವಣ್ಣನವರು ತಿಳಿಸಿದ ಮರ್ತ್ಯಲೋಕವೇ ಕರ್ತಾರನ ಕಮ್ಮಟವಾಯಿತು. ಶರಣರು ನಡೆನುಡಿ ಒಂದಾಗಿಸಿ ಅಯ್ಯಾ ಎನ್ನುವ ಮೂಲಕ ತಮ್ಮೊಳಗೇ ಸ್ವರ್ಗದ ಸುಖವನ್ನು ಅನುಭವಿಸಿದರು. ನುಡಿ ಲೇಸಾಗಿ ನಡೆ ಅಧಮವಾಗಿ ಎಲವೋ ಎನ್ನುವ ಮೂಲಕ ತಮ್ಮೊಳಗೇ ನರಕ ಸೃಷ್ಟಿಸಿಕೊಳ್ಳುವವರನ್ನು ವ್ಯಕ್ತಿತ್ವ ವಿಕಸನದ ಮೂಲಕ ಮೇಲಕ್ಕೆತ್ತಲು ಯತ್ನಿಸಿದರು.

ಸಾಮಾಜಿಕ ಅನ್ಯಾಯಗಳ ವಿರುದ್ಧ ಹೋರಾಡಲು ನೈತಿಕಶಕ್ತಿಯನ್ನು ಬೆಳೆಸಿಕೊಳ್ಳಬೇಕಾಗುತ್ತದೆ. 'ತಾನು ಜಗತ್ತಿನೊಳಗೆ, ತನ್ನೊಳಗೆ ಜಗತ್ತು' ಎಂಬ ಭಾವ ಮೂಡಿಸಿಕೊಳ್ಳಬೇಕಾಗುತ್ತದೆ. ನಂತರ ಅದು ಸತ್ಯ ಎಂಬುದನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾಗುತ್ತದೆ. ಅಂದಾಗ ಮಾತ್ರ ಸಕಲ ಜೀವಾತ್ಮರಿಗೆ ಲೇಸಾಗುವಂಥ ಕ್ರಿಯೆಗಳಲ್ಲಿ ತೊಡಗಲು ಸಾಧ್ಯವಾಗುವುದು. ಹೆಣ್ಣು ಗಂಡು ಜಾತಿಮತ ಪಂಥ ದೇಶ ಮತ್ತು ಭಾಷೆಗಳಿಗೆ ಸಂಬಂಧಿಸಿದ ಸಂಕುಚಿತ ಮನಸ್ಥಿತಿಯಿಂದ ಹೊರಬಂದು ವಿಶ್ವಮಾನವತೆಯೆಡೆಗೆ ಸಾಗುವುದಕ್ಕೆ ಮೊದಲು ಅದಕ್ಕೆ ತಕ್ಕಂತೆ ನಮ್ಮೊಳಗೇ ಬದಲಾವಣೆಗಳಾಗಬೇಕಾಗುತ್ತದೆ. ಬಸವಣ್ಣನವರು ಮೇಲೆ ಹೇಳಿದ ಸಪ್ತಶೀಲಗಳನ್ನು ಆಚರಿಸಲು ಸಾಧ್ಯವಾದಾಗ ಮಾತ್ರ ಪರಿಪೂರ್ಣ ಮಾನವನಾಗಲು ಸಾಧ್ಯ. ಅಂಥ ಮಾನವ ಮಾತ್ರ ತಾನು ಜಗತ್ತಿನೊಳಗೆ ಒಂದಾಗಿ ಆ ಜಗತ್ತನ್ನು ತನ್ನೊಳಗೆ ಇಟ್ಟುಕೊಳ್ಳುತ್ತ ಅದರ ದುಃಖ ನಿವಾರಣೆಗೆ ನಿರಂತರ ಹೋರಾಟದಲ್ಲಿ ತೊಡಗುತ್ತಾನೆ. ಸಹಜವಾಗಿಯೆ ವಿಶ್ವಮಾನವನಾಗುತ್ತಾನೆ.

ಕಳ್ಳರು, ಕೊಲೆಗಡುಕರು, ಸುಳ್ಳುಗಾರರು, ಕೋಪಿಷ್ಠರು, ಅನ್ಯರನ್ನು ಕೀಳಾಗಿ ಕಾಣುವವರು, ತಮ್ಮ ಗುಣಗಾನವನ್ನು ತಾವೇ ಮಾಡುವವರು, ಯಾರಾದರೂ ತಪ್ಪು ಎತ್ತಿ ತೋರಿಸಿದರೆ ಪ್ರತಿಯಾಗಿ ಬೈಯ್ಯುವವರು ಅಂತರಂಗ ಶುದ್ಧಿಯನ್ನಾಗಲಿ, ಬಹಿರಂಗ ಶುದ್ಧಿಯನ್ನಾಗಲಿ ಹೊಂದುವುದಿಲ್ಲ, ಆದ್ದರಿಂದ ಅವರು ದೇವರ ಪ್ರೀತಿಗೆ ಪಾತ್ರರಾಗಲು ಸಾಧ್ಯವಿಲ್ಲ. ಈ ಸಪ್ತ ಅನಿಷ್ಟಗಳನ್ನು ಬಿಟ್ಟ ಮಾನವ ಮಾತ್ರ ಅಂತರಂಗ ಮತ್ತು ಬಹಿರಂಗ ಶುದ್ಧಿಯನ್ನು ಹೊಂದುವನು. ದೇವರನ್ನು ಒಲಿಸುವುದಕ್ಕಾಗಿ ಈ ಸಪ್ತಶೀಲಗಳನ್ನು ಆಚರಿಸುವುದೊಂದೇ ಮಾರ್ಗವಾಗಿದೆ. ಈ ಸಪ್ತಶೀಲಗಳನ್ನು ಹೊಂದಲು ಮಾಡಬೇಕಾದುದು ಏನೂ ಇಲ್ಲ, ಈ ಎಲ್ಲವನ್ನೂ ಮಾಡದೆ ಇರುವುದರ ಮೂಲಕ ಸಾಧಿಸಬೇಕಾಗುತ್ತದೆ. ಅಂತೆಯೆ ಬಸವಣ್ಣನವರು ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ ಎಂದು ತಿಳಿಸಿದ್ದಾರೆ. ಈ ಏಳು 'ಬೇಡ'ಗಳನ್ನು ಸಾಧಿಸಿದಾಗ ಮಾತ್ರ ಮಾನವನು ನಿಜಮಾನವನಾಗುವನು. ಆತನೇ ಶರಣ, ಆತನೇ ವಿಶ್ವಮಾನವ.

ಈ ವಚನದಲ್ಲಿ ಮೂರು ಹಂತಗಳಿವೆ. ಮೊದಲನೆಯ ಹಂತದಲ್ಲಿ ಏಳು ಕ್ರಿಯೆಗಳನ್ನು ಮಾಡದೆ ಇರುವುದನ್ನು ಸಾಧಿಸುವುದು. ಹಾಗೆ ಸಾಧನೆ ಮಾಡಿದ ನಂತರ ಎರಡನೆಯ ಹಂತದಲ್ಲಿ ಅಂತರಂಗ ಮತ್ತು ಬಹಿರಂಗ ಶುದ್ಧಿಯಾಗುವುದು. ಈ ಶುದ್ಧಿಯ ನಂತರ ಮೂರನೆಯ ಹಂತದಲ್ಲಿ ನಮ್ಮೊಳಗೆ ಅಂತಃಸಾಕ್ಷಿಯ ರೂಪದಲ್ಲಿರುವ ದೇವರು ಒಲಿಯುತ್ತಾನೆ. ಹೀಗೆ ದೇವರನ್ನು ಒಲಿಸಲು ಮೇಲೆ ಹೇಳಿದ ಏಳು ಕ್ರಿಯೆಗಳನ್ನು ಮಾಡದೆ ಇರುವುದೊಂದೇ ಮಾರ್ಗವಾಗಿದೆ. ಗುರು, ಲಿಂಗ, ಜಂಗಮ, ಪಾದೋದಕ (ಜ್ಞಾನೋದಕ) ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರಗಳೆಂಬ ಅಷ್ಟಾವರಣಗಳು; ಭಕ್ತ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಷಟ್‌ಸ್ಥಲಗಳು ಮತ್ತು ಲಿಂಗಾಚಾರ, ಶಿವಾಚಾರ, ಸದಾಚಾರ, ಗಣಾಚಾರ, ಭೃತ್ಯಾಚಾರಗಳೆಂಬ ಪಂಚಾಚಾರಗಳು ಆ ಏಳು ಕ್ರಿಯೆಗಳನ್ನು ಮಾಡದೆ ಇರುವುದರ ಮೂಲಕ ಸಪ್ತಶೀಲಗಳನ್ನು ಪಡೆದುಕೊಳ್ಳುವುದಕ್ಕೆ ಸಹಾಯಕವಾಗಿವೆ.

ಅಷ್ಟಾವರಣಗಳು ಮಾನವನನ್ನು ಐಹಿಕ ಆಸೆಗಳಿಂದ ರಕ್ಷಿಸುತ್ತವೆ. ಷಟ್‌ಸ್ಥಲಗಳು ಆ ಏಳು ಕ್ರಿಯೆಗಳನ್ನು ಮಾಡದೆ ಇರುವಂಥ ಶಕ್ತಿಯನ್ನು ಸಂಪಾದಿಸುವುದಕ್ಕಾಗಿ ಬೇಕಾದ ಮಾನಸಿಕ ಅಭ್ಯುದಯಕ್ಕಾಗಿ ಇವೆ. ಪಂಚಾಚಾರಗಳು ಆ ಸಪ್ತಶೀಲಗಳ ಅರಿವನ್ನು ಆಚರಣೆಯಲ್ಲಿ ತಂದು ಮಾನವ ನಿಜಮಾನವನಾಗಿದ್ದನ್ನು ದೃಢೀಕರಿಸುತ್ತವೆ. ಇಂಥ ನಿಜಮಾನವರಿಂದ ಮಾತ್ರ ಜಗತ್ತು ಸರ್ವೋದಯದ ಕಡೆಗೆ ಸಾಗಬಲ್ಲುದು ಇಲ್ಲದಿದ್ದರೆ ಅಭಿವೃದ್ಧಿಯ ಹೆಸರಿನಲ್ಲಿ ವಿನಾಶದ ಕಡೆ ಸಾಗುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ.

ಈ ಸಪ್ತಶೀಲಗಳು ರಾಮ್ ಮನೋಹರ್ ಲೋಹಿಯಾ ಅವರ ಸಪ್ತಕ್ರಾಂತಿಗೆ ಪೂರಕವಾಗಿವೆ. ಲೋಹಿಯಾ ಅವರು ಈ ಸಪ್ತಶೀಲಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಐಹಿಕ ಆಸೆಗಳಿಂದ ಮುಕ್ತವಾಗಿದ್ದರು. ಆದರೆ ಬಸವಣ್ಣನವರಂತೆ 'ಸಕಲ ಜೀವಾತ್ಮರು ಐಹಿಕ ಜಗತ್ತಿನ ಪಾಲುದಾರರು' ಎಂದು ಪ್ರತಿಪಾದಿಸಿದರು. ಅಂತೆಯೆ ಅವರಿಗೆ 'ಸಪ್ತಕ್ರಾಂತಿ' ಕುರಿತು ಮಾತನಾಡಲು ಸಾಧ್ಯವಾಯಿತು. 'ಎಲ್ಲ ನನ್ನದು ಅನ್ನುವುದನ್ನು ಬಿಟ್ಟು, ಎಲ್ಲ ನಮ್ಮದು' ಎನ್ನುವುದೇ ಸಪ್ತಕ್ರಾಂತಿಯ ಮೂಲೋದ್ದೇಶವಾಗಿದೆ. ಇದನ್ನು ಸಾಧಿಸುವುದಕ್ಕಾಗಿ ಸಪ್ತಶೀಲಗಳ ಮೂಲಕ ಅಂತರಂಗ ಮತ್ತು ಬಹಿರಂಗದ ಶುದ್ಧಿಯಾಗಬೇಕು. ತದನಂತರ ಲೋಹಿಯಾರ ಸಪ್ತಕ್ರಾಂತಿಗೆ ಸಿದ್ಧರಾಗಬೇಕು. ಇಂಥ ಸಾಧನೆಗಾಗಿ ಹೋರಾಡುವಲ್ಲಿ ಬಸವಣ್ಣನವರು ಹೇಳಿದ ಹಾಗೆ 'ಮರಣವೇ ಮಹಾನವಮಿ'ಯಾಗುತ್ತದೆ. ಸಮತೆಯ ಬದುಕಿಗಾಗಿ ಎಲ್ಲವನ್ನು ಎದುರಿಸುತ್ತ ಸಾಗುವಾತ ಮಾತ್ರ ಬಸವಣ್ಣನವರ ಶರಣನಾಗಬಲ್ಲ ಮತ್ತು ಲೋಹಿಯಾರ ಕ್ರಾಂತಿಕಾರಿ ಯಾಗಬಲ್ಲ.

ಸಪ್ತಕ್ರಾಂತಿ

1. ಸ್ತ್ರೀ–ಪುರುಷರ ನಡುವೆ ಸಮಾನತೆ.
2. ವರ್ಣಭೇದವನ್ನು ಅನುಸರಿಸುವ ಅಸಮಾನತೆಯ ನಾಶ.
3. ಹುಟ್ಟಿನ ಆಧಾರವನ್ನು ಅನುಸರಿಸುವ ಅಸಮಾನತೆ ನಿವಾರಣೆ.
4. ವಿದೇಶಿ ದಬ್ಬಾಳಿಕೆಯ ಅಂತ್ಯವಾಗಿ ವಿಶ್ವ ಸರ್ಕಾರ ಸ್ಥಾಪನೆ.
5. ವ್ಯಕ್ತಿಗತ ಸಂಪತ್ತಿನಿಂದ ಉದ್ಭವಿಸುವ ಆರ್ಥಿಕ ಅಸಮಾನತೆ ನಾಶ ಹಾಗೂ ಸಮಾನತೆಯ ಸಾಧನೆ.
6. ಶಸ್ತ್ರಾಸ್ತ್ರಗಳ ಬಯಕೆಯ ಮೇಲಿನ ಹತೋಟಿ ಮತ್ತು ಸಾರ್ವಜನಿಕ ಕಾನೂನುಭಂಗ ತತ್ತ್ವದ ಪ್ರತಿಷ್ಠಾಪನೆ.
7. ವೈಯಕ್ತಿಕ ಸ್ವಾತಂತ್ರ್ಯದ ಮೇಲೆ ಆಗುವ ಅತಿಕ್ರಮಣದ ವಿರುದ್ಧ ಹೋರಾಟ.

20ನೇ ಶತಮಾನದ ಲೋಹಿಯಾ ಅವರು ಹೇಳಿದ ಈ ಸಪ್ತಕ್ರಾಂತಿಯ ಎಲ್ಲ ಅಂಶಗಳು 12ನೇ ಬಸವಣ್ಣನವರ ಚಳವಳಿಯಲ್ಲಿ ಅಡಕವಾಗಿವೆ. ಬಸವಣ್ಣ ಮತ್ತು ಲೋಹಿಯಾ ಅವರ ಮಧ್ಯೆ 8 ಶತಮಾನಗಳ ಅಂತರವಿದೆ. ಆದರೆ ಸಾಮಾಜಿಕ ಪರಿಸ್ಥಿತಿಯಲ್ಲಿ ಅವರಿಬ್ಬರ ಮಧ್ಯೆ ಅಂತರ ಕಂಡುಬರುತ್ತಿಲ್ಲ, ಮನುವಾದಿ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯು ಅವರಿಬ್ಬರ ಮಧ್ಯದ ಎಂಟುನೂರು ವರ್ಷಗಳನ್ನು ನುಂಗಿಹಾಕಿದೆ. ಹೀಗಾಗಿ ಅವರಿಬ್ಬರ ಮಧ್ಯೆ ಕಾಲದ ಅಂತರವಿದ್ದರೂ ಪರಿಸ್ಥಿತಿಯ ಅಂತರವಿಲ್ಲ. ಅವರಿಬ್ಬರೂ ನಮಗೆ ತೀರ ಹತ್ತಿರದವರಾಗುತ್ತಾರೆ ಏಕೆಂದರೆ ಅವರ ಮತ್ತು ನಮ್ಮ ಮಧ್ಯದ ಪರಿಸ್ಥಿತಿಯಲ್ಲೂ ಹೇಳಿಕೊಳ್ಳುವಂಥ ಅಂತರವಿಲ್ಲ. ಮನುವಾದದಿಂದಾಗಿ ಅನೇಕ ಸಹಸ್ರವರ್ಷಗಳಿಂದ ಭಾರತೀಯ ಸಮಾಜ ಸ್ಥಗಿತಗೊಂಡು ಅಸಹಿಷ್ಣುತೆಯ ದುರ್ವಾಸನೆಯಿಂದಾಗಿ ಅಸಹನೀಯವಾಗುತ್ತಿದೆ. ಕರ್ಮಸಿದ್ಧಾಂತದಿಂದಾಗಿ ಬಹುಪಾಲು ಭಾರತೀಯ ಆತ್ಮಗಳು ಜಾತಿಕತ್ತಲೆಯಲ್ಲಿ ಮುದುಡಿ ಹೋಗಿವೆ. ಈ ಆತ್ಮಗಳನ್ನು ಅರಳಿಸಲು ಜಗಜ್ಯೋತಿ ಬಸವೇಶ್ವರರ ಮತ್ತು ಸಮಾಜವಾದಿ ಜ್ಯೋತಿ ಲೋಹಿಯಾ ಅವರ ಚಿಂತನೆಯ ಬೆಳಕಿನ ಅವಶ್ಯಕತೆ ಇದೆ. ಬಸವಣ್ಣನವರ ಚಿಂತನೆಗಳು ಅನುಭವ ಮತ್ತು ಅನುಭಾವದ ಲೋಕಗಳಿಗೆ ವಿಸ್ತರಿಸಿವೆ. ಆಶ್ಚರ್ಯವೆಂದರೆ ಅವರ ಅನುಭಾವವೆಂಬ ದರ್ಶನ ದೈನಂದಿನ ಬದುಕಿನ ಅನುಭವದ ಆಧಾರದ ಮೇಲೆ ನಿಂತಿದೆ. ಈ ದೈನಂದಿನ ಬದುಕನ್ನು ಎಲ್ಲ ತೆರನಾದ ಅನಿಷ್ಟಗಳಿಂದ ಸ್ವಚ್ಛಗೊಳಿಸುವುದೇ ಲೋಹಿಯಾರ ಉದ್ದೇಶವಾಗಿದೆ. ಹೀಗಾಗಿ ಬಸವಣ್ಣ ಮತ್ತು ಲೋಹಿಯಾ ಅವರ ಸಾಮಾಜಿಕ ಚಿಂತನೆಗಳಲ್ಲಿ ಸಾಮ್ಯತೆ ಮೂಡಿದೆ.

'ಇದೇಕೊ ಮರುಳ ಮಾನವಾ ಜಾತಿಯಲ್ಲಿ ಅಧಿಕನೆಂಬೆ?' ಎಂದು ಬಸವಣ್ಣನವರು ಪ್ರಶ್ನಿಸುವ ಮೂಲಕ ದೈನಂದಿನ ಬದುಕಿನ ದಾರಿಯಲ್ಲಿ ಬಿದ್ದ ಜಾತಿಗಲ್ಲುಗಳನ್ನು ತೆಗೆಯಲು ಶ್ರಮಿಸಿದ್ದಾರೆ. 'ಜಾತಿ ಒಂದು ದೇಶವನ್ನು ವಿಕಾರಗೊಳಿಸಿ ಬೌದ್ಧಿಕಶೂನ್ಯವನ್ನಾಗಿ ಮಾಡಿರುವುದಕ್ಕೆ ಭಾರತವೇ ಒಂದು ಉದಾಹರಣೆ' ಎಂದು ಲೋಹಿಯಾ ತಿಳಿಸಿದ್ದಾರೆ.

ಜಾತಿಗಳು ಮಾನವರ ವ್ಯಕ್ತಿತ್ವವನ್ನು ಕುಬ್ಜಗೊಳಿಸಿವೆ. ಮೇಲ್ಜಾತಿಯವರು ತಾವು ದೊಡ್ಡವರು ಎಂದು ಕುಬ್ಜರಾಗಿದ್ದಾರೆ. ಕೆಳಜಾತಿಯವರು ತಾವು ಸಣ್ಣವರು ಎಂದು ಕುಬ್ಜರಾಗಿದ್ದಾರೆ.

ಲೋಹಿಯಾರ ಸಪ್ತಕ್ರಾಂತಿಯಲ್ಲಿ ಬಸವಣ್ಣನವರ ದರ್ಶನ

ಲೋಹಿಯಾ ಅವರ 'ಸಪ್ತಕ್ರಾಂತಿ' ಅವರ ಚಿಂತನೆಗಳ ಸಾರವಾಗಿದೆ. ಈ ಸೂತ್ರದ ಒಳಗೆ ಬಸವಣ್ಣವರ ಜೀವನದರ್ಶನ ಅಡಕವಾಗಿದೆ. ಇದೊಂದು ಅಪೂರ್ವ ಸಮಾಗಮ. ಎಲ್ಲ ದೃಷ್ಟಿಯಿಂದಲೂ ಈ ಮಹಾನ್ ಚೇತನಗಳ ಚಿಂತನಾಕ್ರಮಗಳು ನವಭಾರತದ ನಿರ್ಮಾಣಕ್ಕೆ ಬುನಾದಿಯಾಗಿವೆ.

ಇಷ್ಟಲಿಂಗ ಪೂಜೆಯ ಫಲದ ಕುರಿತು ಬಸವಣ್ಣನವರು ಬಹು ಮಾರ್ಮಿಕವಾದ ಈ ವಚನವನ್ನು ರಚಿಸಿದ್ದಾರೆ.

ಲಿಂಗವ ಪೂಜಿಸಿ ಫಲವೇನಯ್ಯಾ
ಸಮರತಿ ಸಮಕಳೆ ಸಮಸುಖವನರಿಯದನ್ನಕ್ಕ.
ಲಿಂಗವ ಪೂಜಿಸಿ ಫಲವೇನಯ್ಯಾ
ಕೂಡಲಸಂಗಮದೇವರ ಪೂಜಿಸಿ
ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ?

ಎಂದು ಬಸವಣ್ಣನವರು ಹೇಳುವ ಮೂಲಕ ಅರಿವೆಂಬುದು ಲಿಂಗಪೂಜಾ ಫಲ ಎಂದು ಸಾರಿದ್ದಾರೆ. ಇಲ್ಲಿ ಅರಿವು ಎನ್ನುವುದು ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದ ಮಾಡದೆ ಇರುವ ಮನಸ್ಥಿತಿ. ಸಮರತಿ (ಲಿಂಗಭೇದ ಇಲ್ಲದುದು), ಸಮಕಳೆ (ವರ್ಣಭೇದ ಇಲ್ಲದುದು), ಸಮಸುಖ (ವರ್ಗಭೇದ ಇಲ್ಲದುದು) ಎಂಬ ಮೂರು ಪದಗಳನ್ನು ಅರ್ಥ ಮಾಡಿಕೊಂಡಾಗ ಮಾತ್ರ ಇಷ್ಟಲಿಂಗ ಪೂಜೆಯ ನಿಜರೂಪ ಗೊತ್ತಾಗುವುದು. ಇಷ್ಟಲಿಂಗ ಪೂಜೆ ಎಂಬುದು ಇಂಥ ಅರಿವಿನ ಧ್ಯಾನವಾಗಿದೆ ಮತ್ತು ನದಿಯೊಳಗೆ ನದಿ ಬೆರೆಯುವ ಹಾಗೆ ನಾವು ಜಾತಿ ಮತಧರ್ಮಗಳನ್ನು ಮೀರುತ್ತ ಮಾನವ ಕುಲ ಒಂದಾಗುವುದರ ಕಲ್ಪನೆ ಮೂಡಿಸುತ್ತದೆ.

ಇಂಥ ಬಸವತತ್ತ್ವದ ಹಿನ್ನೆಲೆಯಲ್ಲಿ ಲೋಹಿಯಾರ 'ಸಪ್ತಕ್ರಾಂತಿ'ಯನ್ನು ನೋಡಬೇಕಾಗಿದೆ.

ಸ್ತ್ರೀ–ಪುರುಷರ ನಡುವೆ ಸಮಾನತೆ

'ಸಮರತಿ'ಯು ಬಸವತತ್ತ್ವದ ಅವಿಭಾಜ್ಯ ಅಂಗವಾಗಿದೆ. ದೈನಂದಿನ ಬದುಕಿನ ಹೆಣ್ಣುಗಂಡಿನ ಮಧ್ಯದ ಸಮತೆಯ ಸಂಬಂಧವನ್ನು ಸೂಚಿಸುವ ಈ ಪದ, ಅನುಭಾವದ ನೆಲೆಯಲ್ಲಿ ಜೀವ-ದೇವರ ಸಂಬಂಧ ಕುರಿತ ಲಿಂಗಾಂಗ ಸಾಮರಸ್ಯಕ್ಕೂ ಇದು ಅನ್ವಯವಾಗುತ್ತದೆ. ಹೀಗೆ ಎಲ್ಲದರಲ್ಲೂ ಸಮಾನತೆ ಕಾಣುವುದೇ ಬಸವತತ್ತ್ವವಾಗಿದೆ.

'ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ; ಜಲಬಿಂದುವಿನ ವ್ಯವಹಾರ ಒಂದೇ' ಎಂದು ಬಸವಣ್ಣನವರು ಜೈವಿಕ ಕ್ರಿಯೆಯನ್ನು ಉದಾಹರಿಸುವ ಮೂಲಕ ಹೆಣ್ಣು ಗಂಡಿನ ಮಧ್ಯೆ ಸಮಾನತೆಯು ನೈಸರ್ಗಿಕವಾಗಿಯೇ ಇದೆ. ಆದರೆ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣು ಅಸಮಾನತೆಯನ್ನು ಅನುಭವಿಸುತ್ತಾಳೆ. ಬಸವಣ್ಣನವರ ಹೋರಾಟ ಲಿಂಗಭೇದ ನೀತಿಯ ವಿರುದ್ಧವೂ ಇದೆ.

'ತನ್ನೊಡನೆ ಮಲಗಿರ್ದ ಸತಿಯನೆಬ್ಬಿಸದೆ ಶಿವಲಿಂಗಕ್ಕೆರೆವ ಸದ್ಭಕ್ತನ ಶ್ರೀಪಾದವ ತೋರಿ ಬದುಕಿಸಯ್ಯಾ ಕೂಡಲಸಂಗಮದೇವಾ' ಎಂದು ಬಸವಣ್ಣನವರು ಹೇಳುವಲ್ಲಿ ಲಿಂಗಪೂಜೆಯಲ್ಲಿ ಕೂಡ ಮಹಿಳೆಯರಿಗೆ ತೊಂದರೆ ಕೊಡಬಾರದು ಎಂದು ಸೂಚಿಸಿದ್ದಾರೆ. 'ಶರಣಸತಿ, ಲಿಂಗಪತಿ' ಎಂದು ಬಸವಣ್ಣನವರು ಹೇಳುವಲ್ಲಿ 'ದೇವರ ಮುಂದೆ ಹೆಣ್ಣು ಗಂಡು ಸಮಾನ' ಎಂಬ ಭಾವ ಅಡಗಿದೆ.

ವರ್ಣಭೇದವನ್ನು ಅನುಸರಿಸುವ ಅಸಮಾನತೆಯ ನಾಶ

ವರ್ಣಭೇದವು ಕರ್ಮ ಸಿದ್ಧಾಂತದ ಕುತಂತ್ರವಾಗಿ[...] ಜಾತಿ ಮತ್ತು ವರ್ಣಭೇದದ ವಿರುದ್ಧ ಬಸವಣ್ಣನವ[...] ಬಹು ಕಠಿಣ ನಿಲುವನ್ನು ತಾಳಿದ್ದಾರೆ. 'ಸಮಕಳೆ' ಎಂ[...] ಬಸವಣ್ಣನವರು ಹೇಳುವಲ್ಲಿ ಬ್ರಹ್ಮಕಳೆ (ಬ್ರಹ್ಮತೇಜಸ[...] ಕ್ಷಾತ್ರಕಳೆ (ಕ್ಷಾತ್ರತೇಜಸ್) ಎಂದು ಹೇಳುವುದು ಸ[...] ದೂರವಾದುದು. ಎಲ್ಲ ಮಾನವರಿಗೆ ಇರುವಂಥ[...] ಮಾನವಕಳೆಯೊಂದೇ ಎಂದು ಬಸವಣ್ಣನವ[...] ಪ್ರತಿಪಾದಿಸಿದ್ದಾರೆ.

"ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮುದ್ಭ[...] ಆತ್ಮಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ[...] ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ನಾಲ್ಕು ವರ್ಣಗಳ[...] ಮೊದಲಿಗರಾದ ಬ್ರಾಹ್ಮಣರು ವಿರಾಟ್ ಪುರುಷ[...] ಬಾಯಿಯಿಂದ, ಎರಡನೆಯವರಾದ ಕ್ಷತ್ರಿಯರು ಭುಜದಿಂ[...] ಮೂರನೆಯವರಾದ ವೈಶ್ಯರು ತೊಡೆಯಿಂದ ಮ[...] ಕೊನೆಯವರಾದ ಶೂದ್ರರು ಪಾದದಿಂದ ಜನಿಸಿಲ್ಲ. ಎಲ್ಲ[...] ಯೋನಿಜರೇ ಆಗಿದ್ದಾರೆ. ಎಲ್ಲ ಜೀವರುಗಳ ಹುಟ[...] ಕ್ರಮ ಒಂದೇ ಆಗಿದೆ ಎಂದು ಬಸವಣ್ಣನವರು ಸ[...] ಪ್ರತಿಪಾದನೆ ಮಾಡಿದ್ದಾರೆ. ಆ ಮೂಲಕ ವರ್ಣವ್ಯವಸ್ಥೆಯ[...] ಅಲ್ಲಗಳೆದಿದ್ದಾರೆ. "ವೇದಾತೀತ, ಷಡುವರ್ಣಾತೀ[...] ಅಷ್ಟತ್ರಿಂಶತ್ಕಳಾತೀತ, ವ್ಯೋಮಾತೀತ ಕೂಡಲಸಂಗಮದೇ[...] ಎಂದು ಹೇಳುವ ಮೂಲಕ ತಮ್ಮ ಪರಿಕಲ್ಪನೆಯ ದೇವ[...] ವೇದಗಳು ಮತ್ತು ಅವು ಹುಟ್ಟುಹಾಕಿದ ವರ್ಣಗಳಿ[...] ಅತೀತನಾಗಿದ್ದಾನೆ ಎಂದು ಸ್ಪಷ್ಟಪಡಿಸಿದ್ದಾರೆ. "ಶಿವಭಕ್ತಿ[...] ಅಂಗವಾದ ಲಿಂಗೈಕ್ಯ ಲಿಂಗಪೂಜಕರಿಗೆ ಪೂರ್ವವ[...] ಶ್ರಮಾದಿ ಸೂತಕವಿಲ್ಲ, ಕೂಡಲಸಂಗಯ್ಯಾ" ಎಂ[...] ಬಸವಣ್ಣನವರು ತಿಳಿಸಿದ್ದಾರೆ.

ಹುಟ್ಟಿನ ಆಧಾರವನ್ನು ಅನುಸರಿಸುವ ಅಸಮಾನತೆ ನಿವಾರಣೆ

"ಆವ ಕುಲವಾದಡೇನು ಶಿವಲಿಂಗವಿದ್ದವನೆ ಕುಲಜ[...] ಕುಲವನರಸುವರೆ ಶರಣರಲ್ಲಿ, ಜಾತಿ ಸಂಕರವಾದಬಳಿಕ? ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ವರ್ಣಗಳನ್ನು ಮ[...] ಮತ್ತೆ ಜಾತಿ ಉಪಜಾತಿಗಳಲ್ಲಿ ಭಾಗ ಮಾಡ[...] ಬಹುಸಂಖ್ಯಾತ ಕಾಯಕ ಜೀವಿಗಳು ಒಂದಾಗದ[...] ನೋಡಿಕೊಂಡಿರುವ ವೈದಿಕ ಸಿದ್ಧಾಂತವನ್ನು ತಿರಸ್ಕರಿಸಿದ್ದಾ[...] 'ಕಾಯಕವಾವುದೆಂದು ಕೇಳ್ದಡೆ ನಿಮ್ಮಾಣೆ, ನಿಮ[...] ಪ್ರಮಥರಾಣೆ, ನಿಮ್ಮ ರಾಣಿವಾಸದಾ[...] ಕೂಡಲಸಂಗಮದೇವಾ' ಎಂದು ಹೇಳುವ ಮೂ[...] ಎಲ್ಲ ಕಾಯಕಗಳು ಸಮಾನ ಎಂಬುದನ್ನು ಸೂಚಿಸಿದ್ದಾ[...] ಆ ಮೂಲಕ ಕಾಯಕಗಳಿಗೆ ಅಂಟಿಕೊಂಡ ಜಾತಿಗಳ[...] ಅಲ್ಲಗಳೆದಿದ್ದಾರೆ.

"ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗ[...] ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದು ವಂದಿ[...] ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೆ ಯೋಗ[...] ಎಂದು ಬಸವಣ್ಣನವರು ತಿಳಿಸಿದ್ದಾರೆ. ಇಷ್ಟಲಿಂಗ ದೀಕ್ಷೆಯಾ[...] ಮೇಲೆ ರಾಜಪುತ್ರನೂ ಅಷ್ಟೇ, ದಾಸಿವೇಶ್ಯಯರ ಪುತ್ರನ[...] ಅಷ್ಟೇ ಎಂದು ಪ್ರತಿಪಾದಿಸಿದ್ದಾರೆ. ಹೀಗೆ ಹುಟ್ಟ[...] ಆಧಾರದಿಂದ ಬರುವ ಜಾತಿಗಳನ್ನು ವಿನಾಶ ಮಾಡುವುದ[...] ಮೂಲಕ ಅವುಗಳಿಂದಾಗುವ ಅಸಮಾನತೆಯನ್ನು ನಿವಾರ[...] ಮಾಡುವಂಥ ಸರ್ವ ಸಮಾನತೆಯ 'ಶರಣಸಂಕುಲ' ಎಂ[...] ನವಸಮಾಜವನ್ನು ಬಸವಣ್ಣನವರು ಸೃಷ್ಟಿಸಿದರು.

ವ್ಯಕ್ತಿಗತ ಸಂಪತ್ತಿನಿಂದ ಉದ್ಭವಿಸುವ ಆರ್ಥಿಕ ಅಸಮಾನತೆ

ಕಾಯಕ, ಪ್ರಸಾದ, ದಾಸೋಹ ಎಂಬ ಮೂ[...] ಮುಖ್ಯ ಆಧಾರ ಸ್ತಂಭಗಳ ಮೇಲೆ ವಿಶ್ವಕ್ಕೇ ಮಾದರಿಯಾ[...] ಬಸವಣ್ಣನವರ ಅರ್ಥಶಾಸ್ತ್ರ ನಿಂತಿದೆ. ಕಾಯಕ ಎಂಬುದ[...] ಉದ್ದಂಡ ವೃತ್ತಿಯಲ್ಲ, ನಿಸರ್ಗ ಸಮತೋಲನವನ[...] ಕಾಪಾಡುತ್ತ ಭೂಮಿಯನ್ನು ಬದುಕಲು ಹೆಚ್ಚು ಯೋಗ[...] ಮಾಡುತ್ತ ಸಕಲಜೀವಾತ್ಮರಿಗೆ ಲೇಸನೆ ಬಯಸುತ[...] ಸಾಮಾಜಿಕ ಕಾಳಜಿಯೊಂದಿಗೆ ಸ್ವಾವಲಂಬಿಯಾಗು[...] ವ್ಯಕ್ತಿತ್ವವಿಕಸನಕ್ಕೆ ಕಾರಣವಾಗುವ ಉತ್ಪಾದನಾ ಕ್ರಿಯೆ[...] ಶರಣರು 'ಕಾಯಕ' ಎಂದು ಕರೆದಿದ್ದಾರೆ. ಜೀವಹ[...] ಮಾಡುವ ಶಸ್ತ್ರಾಸ್ತ್ರಗಳನ್ನು ಉತ್ಪಾದಿಸುವುದು ಕಾಯಕವ[...] ನಿಸರ್ಗವನ್ನು ಲೂಟಿ ಮಾಡುವುದು ಕಾಯಕವಲ್ಲ, ಶೋಷ[...] ಮಾಡುವುದು ಕಾಯಕವಲ್ಲ. ಕಾಯಕವ[...] ಸ್ವಾವಲಂಬಿಯಾಗುತ್ತ, ಸ್ವಾವಲಂಬಿ ಸಮಾ[...] ಸೃಷ್ಟಿಸುವುದಾಗಿದೆ. ಯುದ್ಧಗಳು, ಜಾತಿಮದ, ಕುಲಮದ[...] ಪುರುಷ ಪ್ರಾಧಾನ್ಯ ಮತ್ತು ಜೀವಜಾಲಸಮತೋಲನವನ್ನು[...] ಹದಗೆಡಿಸುವ ಕೃತ್ಯಗಳು ಸರ್ವೋದಯಕ್ಕೆ ಮಾರಕಗಳಾಗಿವ[...]

"ನಾನು ಆರಂಬವ ಮಾಡುವೆನಯ್ಯಾ[...]
ಗುರುಪೂಜೆಗೆಂದು

ನಾನು ಬೆವಹಾರವ ಮಾಡುವೆನಯ್ಯಾ[...]
ಲಿಂಗಾರ್ಚನೆಗೆಂದು

ನಾನು ಪರಸೇವೆಯ ಮಾಡುವೆನಯ್ಯಾ[...]

ಗಮದಾಸೋಹಕ್ಕೆಂದು.
ನಾನಾವಾವ ಕರ್ಮಂಗಳ ಮಾಡಿದಡೆಯು
ಆ ಕರ್ಮಫಲಭೋಗವ ನೀ ಕೊಡುವೆ ಎಂಬುದ
ನು ಬಲ್ಲೆನು.
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ಕೆ
ಡೆನು.
ನಿಮ್ಮ ಸೊಮ್ಮಿಂಗೆ ಸಲಿಸುವೆನು,
ನಿಮ್ಮಾಣೆ ಕೂಡಲಸಂಗಮದೇವಾ.

ಬಸವಣ್ಣನವರ ಈ ವಚನ ದಾರಿತಪ್ಪಿದ ಇಂದಿನ ಗತಿಕ ವ್ಯವಸ್ಥೆಗೆ ದಾರಿದೀಪವಾಗಿದೆ. ಮಾನವರು ತ್ಪಾದನೆಯಲ್ಲಿ ತೊಡಗಬೇಕಾಗಿರುವುದು ಕೇವಲ ತಮ್ಮ ತ್ತು ತಮ್ಮ ಕುಟುಂಬದ ದೈನಂದಿನ ಬದುಕಿನ ರ್ಯಕತೆಗಾಗಿ ಅಲ್ಲ, ಸಂಪತ್ತನ್ನು ಕ್ರೋಢೀಕರಿಸುವುದಕ್ಕೆ ಲ್ಲ.


ಕೃಷಿಯು ಮಾನವ ಸಂಸ್ಕೃತಿಯ ತಾಯಿಬೇರಾಗಿದೆ. ನದ ಮೂಲವಾಗಿದೆ. ಆದ್ದರಿಂದ ಜ್ಞಾನದ ಪೂಜೆಗಾಗಿ ವು ಕೃಷಿಕಾರ್ಯದಲ್ಲಿ ತೊಡಗುವುದಾಗಿ ಬಸವಣ್ಣನವರು ನಾನು ಆರಂಬವ ಮಾಡುವೆನಯ್ಯಾ ಗುರುಪೂಜೆಗೆಂದು" ೞದ್ದಾರೆ.

ಲಿಂಗತತ್ತ್ವವೆಂಬ ನೀತಿಯ ಎಚ್ಚರಿಕೆಯೊಂದಿಗೆ ನಾನು ವಹಾರ ಮಾಡುತ್ತೇನೆ ಎಂದು ತಿಳಿಸಿದ್ದಾರೆ. ತಮ್ಮ ವಹಾರದಿಂದ ಬರುವ ಆದಾಯವನ್ನು ಸರ್ವ ಮಾನತೆಯನ್ನು ಸಾರುವ ಲಿಂಗತತ್ತ್ವವನ್ನು ಆಚರಣೆಯಲ್ಲಿ ವುದಕ್ಕಾಗಿ ಬಳಸುವುದಾಗಿ ಸೂಚನೆ ನೀಡಿದ್ದಾರೆ. "ನಾನು ವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು" ಎಂದು ಳುವಲ್ಲಿ ಈ ಧ್ವನ್ಯರ್ಥ ಅಡಗಿದೆ.

ತಾವು ನಿಭಾಯಿಸುತ್ತಿರುವ ಕಲ್ಯಾಣರಾಜ್ಯದ ಪ್ರಧಾನಿ ದ್ದೆಯನ್ನು 'ಪರಸೇವೆ' ಎಂದು ಗುರುತಿಸಿದ್ದಾರೆ. ಬಿಜ್ಜಳನ ಸ್ಥಾನದಲ್ಲಿ ಪರಸೇವೆ ಮಾಡುವ ಉದ್ದೇಶ ಸಮಾಜ ಸೇವೆ ಂಗಮದಾಸೋಹ) ಆಗಿದೆ. ಈ ಮೂರು ಪ್ರಕಾರದ ಯಕಗಳಲ್ಲಿ ಸಮಾಜವೇ ಪ್ರಮುಖ ಸ್ಥಾನ ಪಡೆಯುತ್ತದೆ. ರ್ಥಿಕ ಅಸಮಾನತೆಯನ್ನು ಹೋಗಲಾಡಿಸುವ ಕ್ರಮವನ್ನು ಲ್ಲಿ ಸೂಚಿಸಲಾಗಿದೆ.

ವಚನದ ಎರಡನೆಯ ಭಾಗದಲ್ಲಿ "ನಾನಾವಾವ ಕರ್ಮಂಗಳ ಾಡಿದಡೆಯು ಆ ಕರ್ಮಫಲಭೋಗವ ನೀ ಕೊಡುವೆ ಬುದ ನಾನು ಬಲ್ಲೆನು" ಎಂದು ಬಸವಣ್ಣನವರು ತಿಳಿಸುತ್ತಾರೆ. ಲ್ಲಿ 'ಕಾಯಕ' ಪದ ಬಳಸದೆ 'ಕರ್ಮ' ಶಬ್ದ ಬಳಸಿದ್ದಾರೆ. ರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ" (ನಿನಗೆ ರ್ಮ ಮಾಡುವುದರಲ್ಲಿ ಮಾತ್ರವೇ ಅಧಿಕಾರ, ಫಲದಲ್ಲಿ ದಿಗೂ ಇಲ್ಲ) ಎಂಬ ಭಗವದ್ಗೀತೆಯ ಮಾತನ್ನು ಸವಣ್ಣನವರು ಅಲ್ಲಗಳೆದಿದ್ದಾರೆ. ನಾನು ಯಾವುದೇ ಕೆಲಸ ಾಡಿದರೂ ಅದರ ಪ್ರತಿಫಲವನ್ನು ಪಡೆದೇ ತೀರುವೆನೆಂಬ ತನಿರ್ಧಾರದ ಭಾವ ಇಲ್ಲಿದೆ. ಕಾಯಕಜೀವಿಗಳನ್ನು ವಿಶ್ವದಲ್ಲೇ ಥಮ ಬಾರಿಗೆ ಸಂಘಟಿಸಿ ದ ಬಸವಣ್ಣನವರಿಗೆ ಅವರ ಕ್ಕುಗಳ ಬಗ್ಗೆ ಮಾತನಾಡು ವುದು ಸಹಜವೇ ಆಗಿದೆ. ದರೆ ಫಲಭೋಗದ ಸದುಪ ಯೋಗದ ಕ್ರಮವನ್ನು ವಚನದ ೂರನೇ ಭಾಗದಲ್ಲಿ ತಿಳಿಸಿದ್ದಾರೆ.

"ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ಕೆ ಾಡೆನು, ನಿಮ್ಮ ಸೊಮ್ಮಿಂಗೆ ಸಲಿಸುವೆನು ನಿಮ್ಮಾಣೆ ೂಡಲಸಂಗಮದೇವಾ" ಎಂದು ಹೇಳುವಲ್ಲಿ 'ಫಲಭೋಗ'



ಎಂಬುದು ಮಿಗುತಾಯ ಮೌಲ್ಯದ ರೂಪ ತಾಳುತ್ತ ವ್ಯಕ್ತಿಗತ ಸಂಪತ್ತಾಗದೆ ಸಾಮಾಜಿಕ ಸಂಪತ್ತಾಗಿ ಪರಿವರ್ತನೆಗೊಳ್ಳಬೇಕು ಎಂಬ ಚಿಂತನೆಯನ್ನು ಈ ಸಾಲು ಒಳಗೊಂಡಿದೆ. ಆ ಕಾಲದ ಜಗತ್ತಿಗೆ ಹೊಸದಾದ ಈ ಚಿಂತನೆ ಇಂದು ವಿಶ್ವರಕ್ಷಣೆಯ ಸೂತ್ರವಾಗಿದೆ. ವ್ಯಕ್ತಿಗತ ಸಂಪತ್ತಿನಿಂದ ಉದ್ಭವಿಸುವ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುತ್ತ ಸಮಾನತೆಯನ್ನು ಸಾಧಿಸುತ್ತ, ಮಿಗುತಾಯ ಮೌಲ್ಯವನ್ನು 'ಶಿವನ ಸೊಮ್ಮು' ಎಂಬ ಸಾಮಾಜಿಕ ನಿಧಿಯಾಗಿ ಪರಿವರ್ತಿಸುವ ಮೂಲಕ ದೇವರಿಂದ ಪಡೆದದ್ದನ್ನು ದೇವರ ಕಾಣುವ ರೂಪವಾದ ಸಮಾಜಕ್ಕೆ ಅರ್ಪಿಸುವ ಸೂತ್ರ ಈ ವಾಕ್ಯದಲ್ಲಿದೆ.

ಶರಣ ಸಂಕುಲದಲ್ಲಿ ಶರಣರು ಸತ್ಯಶುದ್ಧ ಕಾಯಕ ಮಾಡುತ್ತಿದ್ದರು. ಕಾಯಕ ಮಾಡಿ ಬಂದುದನ್ನು ದೇವರ ಪ್ರಸಾದ ಎಂದು ಸ್ವೀಕರಿಸುತ್ತಿದ್ದರು. ದೇವರ ಪ್ರಸಾದವೆಂದು ಭಾವಿಸಿದ ಮೇಲೆ ಹಿತಮಿತವಾಗಿ ಬಳಸಲೇ ಬೇಕು. ಹೀಗೆ ಕಾಯಕ ಎಂಬುದು ಯೋಗ್ಯ ಉತ್ಪಾದನೆಯಾದರೆ ಪ್ರಸಾದವು ಸದ್ಬಳಕೆಯನ್ನು ಸೂಚಿಸುತ್ತದೆ. ನಂತರ ಬರುವ 'ದಾಸೋಹ' ಎಂಬುದು ಯೋಗ್ಯ ಸಾಮಾಜಿಕ ವಿತರಣೆಯಾಗಿದೆ. ಇದೆಲ್ಲ ಸಮಾಜವೇ ದೇವರು (ಜಂಗಮಲಿಂಗ) ಎಂಬ ನೈತಿಕ ಮತ್ತು ಅನುಭಾವಿಕ ಜವಾಬ್ದಾರಿಯಿಂದ ಮಾಡುವಂತದ್ದಾಗಿದೆ.

ಅತಿಕ್ರಮಣದ ವಿರುದ್ಧ ಹೋರಾಟ

'ಕಲ್ಯಾಣ ಕ್ರಾಂತಿ' ಎಂದು ಕರೆಯಿಸಿಕೊಳ್ಳುವ ಕಲ್ಯಾಣಹತ್ಯಾಕಾಂಡದಲ್ಲಿ ಶರಣರ ನರಮೇಧವಾಯಿತು. ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯ ವಿರುದ್ಧ ಶರಣರು ಪ್ರಬಲ ಚಳವಳಿ ನಡೆಸಿದ್ದರು. ತಮ್ಮದೇ ಆದ ಶರಣಸಂಕುಲ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದರು. ಕಾಯಕದ ಮೂಲಕ ಊರ ಮುಂದೆ ಹಾಲಹಳ್ಳ ಹರಿಯುವಂತೆ ಮಾಡಿದ್ದರು. ಅವರಿಗೆ ಬಿಜ್ಜಳನ ಭಂಡಾರದ ಅವಶ್ಯಕತೆ ಇದ್ದಿದ್ದಿಲ್ಲ. "ಊರ ಮುಂದೆ ಹಾಲ ಹಳ್ಳ ಹರಿಯುತ್ತಿರಲು ... .. ಬಿಜ್ಜಳನ ಭಂಡಾರವೆನಗೇಕಯ್ಯಾ" ಎಂದು ಬಸವಣ್ಣನವರು ಹೇಳಿದ್ದಾರೆ. ಶರಣಸಂಕುಲವು ಜಾತಿ ಮತ್ತು ವರ್ಗರಹಿತ ಸ್ವಯಂಪರಿಪೂರ್ಣ ಸಮಾಜವಾಗಿತ್ತು. 'ಕೂಡಲಸಂಗನ ಶರಣರು ಸ್ವತಂತ್ರಧೀರರು' ಎಂದು ಬಸವಣ್ಣನವರು ಹೇಳುವಷ್ಟರಮಟ್ಟಿಗೆ ಕಾಯಕಜೀವಿಗಳು ಸ್ವಾತಂತ್ರ್ಯ ಮತ್ತು ಸಮಾನತೆ ಅನುಭವಿಸುವುದನ್ನು ಗಮನಿಸಿದ ಬಿಜ್ಜಳನ ರಾಜ್ಯಶಕ್ತಿ ಗಾಬರಿಗೊಂಡಿತು. ಸಮಗಾರ ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆ ವಿಲೋಮ ವಿವಾಹವಾದ ಕಾರಣ ಮನುಧರ್ಮಶಾಸ್ತ್ರಕ್ಕೆ ವಿರುದ್ಧವಾದುದು ಎಂದು ಪುರೋಹಿತಶಾಹಿಗಳು ಗುಲ್ಲೆಬ್ಬಿಸಿದರು. ಬಿಜ್ಜಳನ ಶಸ್ತ್ರಗಳು ವೈದಿಕರ ಶಾಸ್ತ್ರಗಳ ಮಾತು ಕೇಳಿದವು. ಶರಣರ ಮೇಲೆ ದಾಳಿ ಮಾಡಿದವು. ಕೊಲೆ ಸುಲಿಗೆ ಮೂಲಕ ಇಡೀ ಶರಣಸಂಕುಲ ವ್ಯವಸ್ಥೆಯನ್ನು ಹಾಳುಗೆಡವಿದವು. ಶರಣರು ತಮ್ಮ ಹಕ್ಕುಗಳ ಪ್ರತಿಪಾದನೆಗಾಗಿ ಅನ್ಯಾಯದ ವಿರುದ್ಧ ಹೋರಾಡುತ್ತ ಹುತಾತ್ಮರಾದರು.

ಕಾನೂನುಭಂಗ ತತ್ವದ ಪ್ರತಿಷ್ಠಾಪನೆ

ಮನುಧರ್ಮದ ಕಾನೂನನ್ನು ಭಂಗಗೊಳಿಸುವುದೇ ಶರಣ ಚಳವಳಿಯ ಬಹುಮುಖ್ಯ ಉದ್ದೇಶವಾಗಿತ್ತು. ಕರ್ಮ ಸಿದ್ಧಾಂತವೆಂಬ ಕ್ರೂರ ತತ್ತ್ವದ ಮೇಲೆ ಜನಸಮುದಾಯವನ್ನು ಛಿದ್ರಛಿದ್ರಗೊಳಿಸಿ ತುಳಿತಕ್ಕೊಳಗಾದ ಬಹುಜನರನ್ನು 'ಇದು ನಿಮ್ಮ ಹಿಂದಣ ಜನ್ಮದ ಕರ್ಮ' ಎಂದು ಹೇಳುತ್ತ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಬರುವುದರಲ್ಲೇ ವರ್ಣ, ಜಾತಿ, ಅಸ್ಪೃಶ್ಯತೆಯಿಂದ ಕೂಡಿದ ಮನುವಿನ ಕಾನೂನು ತಲ್ಲೀನವಾಗಿತ್ತು. ಶರಣರು ಈ ಅನ್ಯಾಯದ ವಿರುದ್ಧ ಹೋರಾಡಿದರು. ನಟುವರ ಜನಾಂಗದಿಂದ ಬಂದ ಮಹಾಜ್ಞಾನಿ ಅಲ್ಲಮಪ್ರಭುಗಳನ್ನು ಬಸವಣ್ಣನವರು ಅನುಭವ ಮಂಟಪದ ಶೂನ್ಯಸಿಂಹಾಸನಾಧೀಶ್ವರರನ್ನಾಗಿಸಿದರು. ಸಮಗಾರ ಮತ್ತು ಬ್ರಾಹ್ಮಣ ಮೂಲದಿಂದ ಬಂದ ಲಿಂಗವಂತರ ಮಕ್ಕಳ ಮದುವೆ ಮಾಡುವ ಮೂಲಕ ಮನುವಿನ ಕಾನೂನಿಗೆ ಇನ್ನೊಂದು ಭಾರಿ ಆಘಾತವನ್ನುಂಟು ಮಾಡಿದರು. ಚಳವಳಿಯ ಉದ್ದಕ್ಕೂ ಶಾಂತಿ ಮತ್ತು ಅಹಿಂಸೆಯನ್ನು ಪ್ರತಿಪಾದಿಸುವ ಮೂಲಕ ಶಸ್ತ್ರಾಸ್ತ್ರಗಳ ರಾಜ್ಯಶಕ್ತಿಯನ್ನು ವಿರೋಧಿಸಿದರು.

ವಿಶ್ವ ಸರ್ಕಾರ ಸ್ಥಾಪನೆ

ಶರಣರ ಪರಿಪೂರ್ಣ ಸಮಾಜವು ರಾಜ್ಯಶಕ್ತಿ ನಿರ್ನಾಮದ ಉದ್ದೇಶವನ್ನು ಹೊಂದಿತ್ತು. ಆ ಕಾರಣದಿಂದಲೇ ಶರಣರು ರಾಜ್ಯಶಕ್ತಿಯ ಸಹಾಯವಿಲ್ಲದೆ ಬದುಕುವ ಕಾಯಕ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದರು. ಶರಣರ ಸ್ವತಂತ್ರ ಮನೋಭಾವ ವ್ಯವಸ್ಥೆಗೆ ವಿರುದ್ಧವಾಗಿತ್ತು. ಶೂನ್ಯಸಿಂಹಾಸನದ ಮುಂದೆ ಮನುಧರ್ಮ ಸಿಂಹಾಸನ ಹಾಗೂ ರಾಜಸಿಂಹಾಸನ ಕಳೆಗುಂದುವಂತೆ ಜನಸಮುದಾಯವೇ ಬಸವಣ್ಣನವರ ಅನುಯಾಯಿಗಳಾಗುವ ರೀತಿಯು ರಾಜ್ಯಶಕ್ತಿಯನ್ನು ಧೃತಿಗೆಡಿಸಿತು. ದಬ್ಬಾಳಿಕೆಯ ಮೂಲಗಳಾದ ರಾಜ್ಯಶಕ್ತಿ, ದೇವಾಲಯ ಶಕ್ತಿ ಇವೆರಡನ್ನೂ ಪೋಷಿಸುವ ವೈದಿಕಶಕ್ತಿ ಹಾಗೂ ಈ ಎಲ್ಲ ಶಕ್ತಿಗಳಿಗೆ ಧರ್ಮಸಮ್ಮತ ಕಾನೂನಿನ ಬೆಂಬಲ ನೀಡಿದ ಮನುಸ್ಮೃತಿ ಮುಂತಾದ ಅಸಿಪ್ಪಗಳ ವಿರುದ್ಧ ಇಷ್ಟಲಿಂಗವನ್ನು ಕಟ್ಟಿಕೊಂಡ ಕಾಯಕಜೀವಿಗಳು ಜೀವದ ಹಂಗು ತೊರೆದು ಹೋರಾಡಿದರು.


12ನೇ ಶತಮಾನದಲ್ಲಿ ನೂರು ಮೈಲಿಗೊಂದು ಸಂಸ್ಥಾನರೂಪಿ ದೇಶಗಳಿದ್ದವು. ಲೋಹಿಯಾ ಅವರ ಕಾಲದಲ್ಲಿದ್ದ ರಾಷ್ಟ್ರದ ಸ್ವರೂಪ ಬಸವಣ್ಣನವರ ಕಾಲದಲ್ಲಿ ಇರಲಿಲ್ಲ. ಈ ಹಿನ್ನೆಲೆಯಲ್ಲಿ ನೋಡಿದರೆ ಶರಣ ಚಳವಳಿಯಲ್ಲಿ ವಿವಿಧ ದೇಶಗಳ ಕಾಯಕಜೀವಿಗಳು ಸೇರಿದ್ದರು. ಶರಣಸಂಕುಲವು ಸಕಲಜೀವಾತ್ಮರಿಗೆ ಲೇಸ ಬಯಸುವ ವಿಶ್ವಸರ್ಕಾರದ ಸಂಕೇತವೇ ಆಗಿತ್ತು.

ಬಂಡವಾಳಶಾಹಿ ವ್ಯವಸ್ಥೆಯ ಸಂದರ್ಭದಲ್ಲಿ ಲೋಹಿಯಾ ಬದುಕಿದ್ದರು. ಆದರೆ ಬಸವಣ್ಣನವರ ಕಾಲದಲ್ಲಿ ಬಂಡವಾಳಶಾಹಿ ಉತ್ಪಾದನಾ ಪರಿಕರಗಳಾಗಲಿ, ಉತ್ಪಾದನಾ ವ್ಯವಸ್ಥೆಯಾಗಲಿ ಇರಲಿಲ್ಲ. ಊಳಿಗಮಾನ್ಯ ಪದ್ಧತಿಯ ಉತ್ಪಾದನಾ ಸಾಧನಗಳು ಮತ್ತು ಉತ್ಪಾದನಾ ರೀತಿ ಇದ್ದ ಸಂದರ್ಭದಲ್ಲಿ ಬಸವಣ್ಣನವರು, 'ಬಡವರು' ಮತ್ತು 'ಉಳ್ಳವರು' ಪದಗಳ ಪ್ರಯೋಗ ಮಾಡುತ್ತ ವ್ಯವಸ್ಥೆಯ ವರ್ಗಗುಣವನ್ನು ಗ್ರಹಿಸುವ ಮೂಲಕ ಬಡವರ, ದಲಿತರ, ಹೆಣ್ಣುಮಕ್ಕಳ ಮತ್ತು ನಿರ್ಗತಿಕರ ಪರವಾಗಿ ನಿಂತದ್ದು ಆ ಕಾಲದ ಜಾಗತಿಕ ಇತಿಹಾಸದಲ್ಲಿ ಅನನ್ಯವಾಗಿದೆ.

ಬುದ್ಧ, ಬಸವ, ಕಾರ್ಲ್‌ಮಾರ್ಕ್ಸ್, ಗಾಂಧಿ, ಅಂಬೇಡ್ಕರ್ ಮುಂತಾದ ದಾರ್ಶನಿಕರ ಮತ್ತು ನವಸಮಾಜದ ಚಿಂತಕರ ಮೂಲಕ ಆಧುನಿಕ ತವಕ ತಲ್ಲಣಗಳನ್ನು ನಿವಾರಿಸುವ ದಾರಿ ಕಂಡುಕೊಳ್ಳಬೇಕಿದೆ. ಆ ಮೂಲಕ ಅಸಹಿಷ್ಣುತೆಯನ್ನು ಕೊನೆಗೊಳಿಸಬೇಕಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಎಲ್ಲ ಆವಿಷ್ಕಾರಗಳನ್ನು ಬಂಡವಾಳಶಾಹಿ ವ್ಯವಸ್ಥೆಯು ಅಭಿವೃದ್ಧಿಯ ಹೆಸರಿನಲ್ಲಿ ಬಳಸಿಕೊಳ್ಳುವುದರ ಮೂಲಕ ನೈಸರ್ಗಿಕ ಸಂಪನ್ಮೂಲಗಳನ್ನು ಬೇಕಾಬಿಟ್ಟಿಯಾಗಿ ದುರ್ಬಳಕೆ ಮಾಡುತ್ತಿದೆ. ಆ ಮೂಲಕ ಜಗತ್ತನ್ನು ವಿನಾಶದ ಅಂಚಿಗೆ ಒಯ್ಯುತ್ತಿದೆ. ಬಡರಾಷ್ಟ್ರಗಳ ಶೋಷಣೆಯಲ್ಲಿ ಸಾಮ್ರಾಜ್ಯಶಾಹಿ ದೇಶಗಳು ತಲ್ಲೀನವಾಗಿವೆ. ಬಡರಾಷ್ಟ್ರಗಳ ಮಧ್ಯೆ ಯುದ್ಧದ ಸನ್ನಿವೇಶ ಸೃಷ್ಟಿಸುತ್ತ ಶಸ್ತ್ರಾಸ್ತ್ರಗಳ ಮಾರಾಟದಲ್ಲಿ ತಲ್ಲೀನವಾಗಿದೆ. ಜಾತಿ, ಕುಲಗೋತ್ರಗಳ ತಂತ್ರದೊಂದಿಗೆ ತಮ್ಮ ದೇಶದ ಜನರೊಳಗೆ ಭೇದಭಾವ ಕಲ್ಪಿಸುವವರನ್ನು ಬೆಂಬಲಿಸುವುದರ ಮೂಲಕ ಅಶಾಂತಿಯನ್ನು ಹೆಚ್ಚಿಸುತ್ತ ಜನಾಂಗದ್ವೇಷವನ್ನು ಉದ್ದೀಪನಗೊಳಿಸುತ್ತವೆ. ಆ ಮೂಲಕ ಆಯಾ ದೇಶಗಳ ರಾಜ್ಯಶಕ್ತಿಗಳು ತಾವು ಹೇಳಿದಂತೆ ಕೇಳುವ ಹಾಗೆ ಮಾಡುತ್ತವೆ.

ಭಾರತೀಯರು ಈ ಕುತಂತ್ರವನ್ನು ಅರಿತು ಒಂದಾಗುವ ಮೂಲಕ ಸಾಮ್ರಾಜ್ಯಶಾಹಿ ಮತ್ತು ಕೋಮುವಾದಿ ಷಡ್ಯಂತ್ರವನ್ನು ನಿರ್ನಾಮ ಮಾಡುವುದು ಈ ಕ್ಷಣದ ಅವಶ್ಯಕತೆಯಾಗಿದೆ. ಇಲ್ಲದಿದ್ದರೆ ಅಭಿವೃದ್ಧಿಯ ಹೆಸರಿನಲ್ಲಿ ಸರ್ವೋದಯದ ಚಿಂತನೆಗಳನ್ನು ನಾಶ ಮಾಡುತ್ತ ಸಾಗುವವರು ಬುದ್ಧ, ಬಸವ, ಅಂಬೇಡ್ಕರರ ಕನಸುಗಳು ನನಸಾಗದಂತೆ ನೋಡಿಕೊಳ್ಳುತ್ತಾರೆ.

■ ರಂಜಾನ್ ದರ್ಗಾ



ನಿದ್ರಾಭಂಗ

ಮಧ್ಯರಾತ್ರಿ ಬಾಯಾರಿದ ಅವ್ವ ಮಗನನ್ನು ಕರೆದು "ಒಂದು ಲೋಟ ರು ತಾ ಮಗನೇ" ಎಂದಳು. ಬಾಲಕ ಅಡುಗೆ ಕೋಣೆಗೆ ಹೋಗಿ ನೀರು ವಷ್ಟರಲ್ಲಿ ಅವ್ವ ನಿದ್ದೆಗೆ ಶರಣಾಗಿದ್ದಳು. ಮಗನಿಗೆ ಅವ್ವನ ನಿದ್ರೆಗೆ ಭಂಗ ಡಲು ಮನಸ್ಸಾಗಲಿಲ್ಲ, ನೀರು ಕೇಳಿದ ಅವ್ವನಿಗೆ ನೀರುಣಿಸದೇ ನಿದ್ದೆ ಡಲೂ ಮನಸ್ಸಾಗಲಿಲ್ಲ. ನೀರಿನ ಲೋಟವನ್ನು ಹಾಗೇ ಕೈಯಲ್ಲಿ ಹಿಡಿದು ಗೆ ಎಚ್ಚರವಾಗಲು ಕಾದು ನಿಂತ. ಮುಂಜಾವಿನ ಸೂರ್ಯೋದಯದ ತ್ತಿಗೆ ಅವ್ವನಿಗೆ ಎಚ್ಚರವಾಯಿತು. ಮಗ ಮಲಗದೇ ಕೈಯಲ್ಲಿ ನೀರಿನ ಟ ಹಿಡಿದು ನಿಂತುದನ್ನು ನೋಡಿ ಅವ್ವನಿಗೆ ಆಶ್ಚರ್ಯವಾಯಿತು.

'ಯಾಕೆ ಮಗನೇ ನಿದ್ರಿಸಲಿಲ್ಲ?'

'ನೀವು ನೀರು ಕೇಳಿದ್ದಿರಲ್ಲವೇ ಅಮ್ಮ?'

'ಹೌದು...'

'ನೀರು ತರುವಾಗ ನೀವು ನಿದ್ದೆಗೆ ಶರಣಾಗಿದ್ದಿರಿ. ನಿಮಗೆ ನೀರುಣಿಸದೇ ಹೇಗೆ ಮಲಗಲಿ ಎಂದು ನಿಂತುಕೊಂಡಿದ್ದೇನೆ.'

ಅವ್ವ ಮಗನನ್ನು ಬರಸೆಳೆದು ಅಪ್ಪಿಕೊಂಡಳು. ಮುಂದೆ ಆ ಬಾಲಕ ಸೂಫಿ ಜಗತ್ತಿನ ಪ್ರಸಿದ್ಧ ದಾರ್ಶನಿಕನಾಗಿ ಹೆಸರು ಗಳಿಸಿದ.

ಆ ಬಾಲಕನೇ ಯಹ್ಯಾಬಿನ್ ಶರಫ್.

ತುಟಿ ತಾಗಿಸಿದ ಸಿಯಾಳ

ಸೂಫಿ ಸಂತ ಮಾಲೀಕ್ ಬಿನ್ ದೀನಾರ್ ಕೇರಳಕ್ಕೆ ಆಗಮಿಸಿದ್ದ ಕಾಲ. ಅವರು ತಮ್ಮ ಸರಳ ಬದುಕಿನಿಂದ, ಪ್ರೀತಿಯಿಂದ ನೂರಾರು ಅಭಿಮಾನಿಗಳನ್ನು ಗಳಿಸಿದ್ದರು. ಒಮ್ಮೆ ಅಸ್ಪೃಶ್ಯ ಜಾತಿಯ ಬಡ ಕೂಲಿಯೊಬ್ಬ ತಾನು ಕೆಲಸ ಮಾಡುವ ತೋಟದಿಂದ ಸಿಯಾಳವೊಂದನ್ನು ತಂದು ಕಾಣಿಕೆಯಾಗಿ ನೀಡಿದ.

ಮಾಲೀಕ್ ದೀನಾರ್ ಸಂಜ್ಞಾಭಾಷೆಯಲ್ಲಿ ಪ್ರಶ್ನಿಸಿದರು "ಇದನ್ನೆಲ್ಲಿಂದ ತಂದಿರಿ? ನಿಮ್ಮ ತೋಟದ ಮಾಲೀಕನ ಅನುಮತಿ ಪಡೆದಿದ್ದೀರಾ?"

"ಇಲ್ಲ..."

"ಹಾಗಿದ್ದರೆ ನಾವಿದನ್ನು ಕುಡಿಯುವಂತಿಲ್ಲ."

ಕೂಲಿ ಕಾರ್ಮಿಕ ತೋಟದ ಮಾಲೀಕನ ಅನುಮತಿ ಪಡೆದುಕೊಂಡು ಬಂದ. ಮಾಲೀಕ್ ದೀನಾರ್ ಸಿಯಾಳವನ್ನು ಎತ್ತಿ ಆ ಅಸ್ಪೃಶ್ಯ ಕೂಲಿಗೆ ನೀಡಿ ಹೇಳಿದರು "ಮೊದಲು ನೀನು ತುಟಿ ಇಟ್ಟು ಇದರಿಂದ ಸ್ವಲ್ಪ ಕುಡಿ......"

ಆತ ನಿರಾಕರಿಸಿದ.

ಮಾಲೀಕ್ ದೀನಾರ್ ಪಟ್ಟು ಬಿಡಲಿಲ್ಲ.

ಆತ ಅನಿವಾರ್ಯವಾಗಿ ತುಟಿ ಇಟ್ಟು ಸ್ವಲ್ಪ ಸಿಯಾಳದ ನೀರು ಕುಡಿದ.

ಆ ಬಳಿಕ ಆತನಿಂದ ಅದನ್ನು ಪಡೆದು ಮಾಲೀಕ್ ಬಿನ್ ದೀನಾರ್ ಮತ್ತು ಅವರ ಸಂಗಡಿಗರು ತುಟಿ ಇಟ್ಟು ಸ್ವಲ್ಪ ಸ್ವಲ್ಪ ನೀರು ಕುಡಿದರು.

ಆ ಅಸ್ಪೃಶ್ಯ ಕೂಲಿ ಕಾರ್ಮಿಕನಿಗೆ ಆಶ್ಚರ್ಯವೋ ಆಶ್ಚರ್ಯ.

ನಮ್ಮ ನೆರಳು ಬೀಳುವುದೇ ಮಹಾಪರಾಧವೆಂದು ಬಗೆಯುವ ನಮ್ಮ ನಾಡಿನ ಜನರೆಲ್ಲಿ.......

ನನ್ನಂತಹ ಅಸ್ಪೃಶ್ಯರ ತುಟಿ ತಾಗಿಸಿ ಕುಡಿದ ಸಿಯಾಳವನ್ನು ಕುಡಿಯುವ ಈ ಜನರೆಲ್ಲಿ......

ಆ ಕ್ಷಣದಿಂದಲೇ ಆತ ಮಾಲೀಕ್ ದೀನಾರ್‌ರ ಶಿಷ್ಯನಾದ.

ಬಾಲಕ ಮತ್ತು ದರೋಡೆಕೋರರು

ವರ್ತಕರ ತಂಡದ ಜೊತೆ ಬಾಲಕ ಮುಹಿಯುದ್ದೀನ್ ನನ್ನು ಅವರವ್ವ ದೂರದೂರಿಗೆ ವಿದ್ಯಾರ್ಜನೆಗೆ ಕಳುಹಿಸಿದಳು. ದಾರಿ ಮಧ್ಯೆ ದರೋಡೆಕೋರರ ತಂಡ ಎದುರಾಯಿತು. ವ್ಯಾಪಾರಿಗಳನ್ನು ಸಂಪೂರ್ಣವಾಗಿ ಲೂಟಿ ಮಾಡಿ ಅವರ ಕೈ ಬರಿದು ಮಾಡಿದರು.

ಆ ಬಳಿಕ ಬಾಲಕ ಮುಹಿಯುದ್ದೀನನ್ನು ಕರೆದು "ಏಯ್ ಹುಡುಗ ಎಲ್ಲಿಗೆ ಹೊರಟದ್ದೀಯಾ?" ಎಂದು ಕೇಳಿದರು.

"ವಿದ್ಯಾರ್ಜನೆಗೆ ಹೊರಟಿರುವೆ..."

"ಏನಿದೆ ನಿನ್ನ ಕೈಯಲ್ಲಿ?"

"ಕೆಲವು ಚಿನ್ನದ ನಾಣ್ಯಗಳಿವೆ."

"ಇತ್ತ ಕೊಡು ಅವುಗಳನ್ನು."

ಬಾಲಕ ಆ ಚಿನ್ನದ ನಾಣ್ಯಗಳಿರುವ ಕಟ್ಟನ್ನು ತೆಗೆದುಕೊಟ್ಟ.

"ಅರೆ ಏನಾಶ್ಚರ್ಯ! ನಾವು ದರೋಡೆಕೋರರೆಂದು ತಿಳಿದಿಲ್ಲವೇ?"

"ತಿಳಿದಿದೆ."

"ಮತ್ತ್ಯಾಕೆ ಈ ಚಿನ್ನದ ನಾಣ್ಯಗಳ ಸುದ್ದಿ ಬಾಯಿಬಿಟ್ಟೆ?"

"ಸುಳ್ಳು ಹೇಳಬಾರದೆಂದು ಅವ್ವ ತಾಕೀತು ಮಾಡಿದ್ದಳು. ಆಕೆಗೆ ಮಾತು ಕೊಟ್ಟಿದ್ದೆ."


ಸತ್ಯದೆಡೆಗಿನ ಬಾಲಕನ ಬದ್ಧತೆ ಮತ್ತು ಧೈರ್ಯ ಅವರನ್ನು ಅಧೀರರನ್ನಾಗಿಸಿತು.

ಅವರ ಮುಖ ಬೆವೆತುಕೊಂಡಿತು, ಕೈಕಾಲುಗಳು ನಡುಗತೊಡಗಿದವು.

ಬಾಲಕನ ನಾಣ್ಯಗಳ ಕಟ್ಟನ್ನು ಮತ್ತು ಇತರ ವ್ಯಾಪಾರಿಗಳ ಸೊತ್ತುಗಳನ್ನು ಹಿಂದಿರುಗಿಸಿದರು. ಮನಃಪರಿವರ್ತನೆಯಾಗಿ ದರೋಡೆ ವೃತ್ತಿ ತೊರೆದು ದುಡಿದು ತಿನ್ನುವ ಪ್ರತಿಜ್ಞೆಗೈದರು. ಸತ್ಯದೆಡೆಗಿನ ತನ್ನ ಅಚಂಚಲ ಬದ್ಧತೆಯಿಂದ ದರೋಡೆಕೋರರ ಮನಪರಿವರ್ತನೆಗೈದ ಬಾಲಕ ಮುಂದೆ ಸೂಫಿಗಳ ಸುಲ್ತಾನನೆಂದೇ ಹೆಸರುವಾಸಿಯಾದ. ಅವರು ಬೇರ್‍ಯಾರೂ ಅಲ್ಲ ಬಾಗ್ದಾದ್‌ನ ಶೈಖ್ ಮುಹಿಯುದ್ದೀನ್ ಅಬ್ದುಲ್ ಖಾದರ್ ಜೀಲಾನಿ.

■ ಇಸ್ಮತ್ ಫಜೀರ್

ಸಮಾನತೆಗಾಗಿ ನಾನು ಧರ್ಮವನ್ನು ತ್ಯಜಿಸುತ್ತಿದ್ದೇನೆ



ಪರಿಚಯ

ಅಮೆರಿಕದ ಮಾಜಿ ಅಧ್ಯಕ್ಷ ಜಿಮ್ಮಿ ಕಾರ್ಟರ್ ತಮ್ಮ ಜೀವನದುದ್ದಕ್ಕೂ ಮಾನವ ಹಕ್ಕುಗಳ ಪ್ರತಿಪಾದಕರಾಗಿಯೇ ಇರುವಂತಹ ವ್ಯಕ್ತಿ. 1982 ರಲ್ಲಿ ತಮ್ಮ ಓವಲ್ ಕಚೇರಿಯನ್ನು ತೊರೆದ ಮರುವರ್ಷದಲ್ಲೇ ಇವರು ತಮ್ಮ ಪತ್ನಿ ರೋಸಾಲಿನ್ ಕಾರ್ಟರ್ ಅವರೊಂದಿಗೆ ಸೇರಿ ಕಾರ್ಟರ್ ಸೆಂಟರ್ ಅನ್ನು ಸ್ಥಾಪಿಸಿ ಅದನ್ನು ವಿಶ್ವ ಶಾಂತಿ ಮತ್ತು ಆರೋಗ್ಯ ಸುಧಾರಣೆಗಾಗಿ ಮುಡಿಪಾಗಿಟ್ಟಿದ್ದಾರೆ. ತಮ್ಮ 90 ನೇ ವಯಸ್ಸಿನಲ್ಲಿ ಈಗಲೂ ಅನೇಕ ಚಳವಳಿಗಳಲ್ಲಿ ಸಕ್ರಿಯವಾಗಿರುವ ಕಾರ್ಟರ್ 2014 ರಲ್ಲಿ ಹೊರಬಂದ ತಮ್ಮ ಪುಸ್ತಕ 'ಅ ಕಾಲ್ ಟು ಆಕ್ಷನ್: ವುಮೆನ್, ರಿಲಿಜನ್, ವೈಲೆನ್ಸ್ ಅಂಡ್ ಪವರ್' ಅನ್ನೂ ಒಳಗೊಂಡಂತೆ ಒಟ್ಟು 28 ಪುಸ್ತಕಗಳನ್ನು ರಚಿಸಿದ್ದಾರೆ. ಹಲವಾರು ವರ್ಷಗಳಿಂದ ಕ್ರಿಶ್ಚಿಯನ್ ಧರ್ಮದ ಅನುಯಾಯಿ ಆಗಿದ್ದ ಇವರು ಮಹಿಳಾ ಹಕ್ಕುಗಳ ಪ್ರಬಲ ವಿರೋಧೀ ಸ್ಪರ್ಧಿಯಾಗಿ ರೂಪುಗೊಂಡಿರುವ ಇಂದಿನ ಕ್ರಿಶ್ಚಿಯನ್ 'ಧರ್ಮ'ದ ಸುಳ್ಳು ನಂಭಿಕೆ ಮತ್ತು ಅತಿರೇಕದ ಆಚರಣೆಗಳ ವಿರುದ್ಧ ಸಿಡಿದೆದ್ದು ಮಹಿಳಾ ಹಕ್ಕುಗಳ ಸಂರಕ್ಷಣೆಯ ಪ್ರತಿಪಾದಕರೆನಿಸಿದ್ದಾರೆ. ಚರ್ಚ್‌ಗಳಲ್ಲಿ ಒಂದಾದ 'ಅಮೆರಿಕನ್ ಕನ್ವೆನ್ಷನ್'ನಲ್ಲಿ ಸುದೀರ್ಘ 60 ವರ್ಷಗಳ ಕಾಲ ಸದಸ್ಯರಾಗಿದ್ದ ಕಾರ್ಟರ್ 2009 ರಲ್ಲಿ ಬರೆದ ಬಹಿರಂಗ ಪತ್ರದಿಂದಾಗಿ ಎಸ್‌ಬಿಸಿ/ಸದರ್ನ್ ಬ್ಯಾಪ್ಟಿಸ್ಟ್ ಕನ್ವೆನ್‌ಷನ್ ಜೊತೆಗಿನ ಸಂಬಂಧ ಕಡಿದುಕೊಳ್ಳುವಂತಾಯಿತು. ಕಾರ್ಟರ್ ಹೇಳುವಂತೆ ಇದೊಂದು ಬಹುಕಷ್ಟಕರ ಮತ್ತು ನೋವಿನ ನಿರ್ಧಾರವಾಗಿದ್ದರೂ ಇದೊಂದು ಅನಿವಾರ್ಯದ ನಡೆಯಾಗಿತ್ತು. ಕಾರಣ, ಕನ್ವೆನ್‌ಷನ್ ಒಳಗಿದ್ದ ಕೆಲ ನಾಯಕರು ಬೈಬಲ್ ಗ್ರಂಥದ ತಿಳಿವಳಿಕೆಯನ್ನು ತಿರುಚುತ್ತಾ ಮನುಷ್ಯನ ಪಾಪಗಳಿಗೆ ಮೂಲಕಾರಣ ಈವ್ ಆಗಿರುವುದರಿಂದ ಎಲ್ಲಾ ಮಹಿಳೆಯರೂ ಪುರುಷನಿಗೆ ಅಧೀನವಾಗಿರಬೇಕೆಂದು ವಾದಿಸುತ್ತಿದ್ದರು. ಇದನ್ನು ಪ್ರಬಲವಾಗಿ ವಿರೋಧಿಸಿರುವ ಕಾರ್ಟರ್ ತಮ್ಮ ಬಹಿರಂಗಪತ್ರದಲ್ಲಿ ಸವಿಸ್ತಾರವಾಗಿ ತಮ್ಮ ಕಾರಣ ಮತ್ತು ಕಾಳಜಿಗಳನ್ನು ವ್ಯಕ್ತಪಡಿಸಿದ್ದಾರೆ:

ಲೇಖನ

ನನ್ನ ಜೀವನದುದ್ದಕ್ಕೂ ನಾನು ಕ್ರಿಶ್ಚಿಯನ್ ಧರ್ಮವನ್ನು ಪಾಲಿಸುತ್ತಿದ್ದೇನೆ ಮತ್ತು ಧರ್ಮಾಧಿಕಾರಿಯಾಗಿ ಹಲವಾರು ವರ್ಷಗಳ ಕಾಲ ಬೈಬಲ್‌ನ್ನು ಬೋಧಿಸಿದ್ದೇನೆ. ಜಗತ್ತಿನಲ್ಲಿರುವ ಮಿಲಿಯಗಟ್ಟಲೇ ಜನರಿಗೆ ಅವರ ಧರ್ಮದ ನಂಬಿಕೆಗಳು ಅವರ ಸಾಮರ್ಥ್ಯವಾಗುವಂತೆ ನನಗೂ ನನ್ನ ನಂಬಿಕೆಗಳೇ ನನ್ನ ಶಕ್ತಿ ಮತ್ತು ಅನುಕೂಲದ ಮೂಲಗಳಾಗಿದೆ. ಹೀಗಾಗಿಯೇ ನನ್ನ ಹಲವು ನಿರ್ಧಾರಗಳಿಂದಾಗಿ ಸರಿಸುಮಾರು ಅರವತ್ತು ವರ್ಷಗಳ ಕಾಲ ಸದರ್ನ್ ಬ್ಯಾಪ್ಟಿಸ್ಟ್ ಕನ್ವೆನ್‌ಷನ್ ಜೊತೆಗಿದ್ದ ಬಂಧವನ್ನು ಬಹು ನೋವಿನಿಂದ ಕಳಚಿಕೊಂಡು ಹೊರಬರಬೇಕಾಯ್ತು. ಆದರೂ "ಆ್ಯಡಂ ನಂತರದಲ್ಲಿ ಜೀವ ತಳೆದ ಈವ್ ಎಂಬ ಮಹಿಳೆಯೇ ಪಾಪದ ಉದಯಕ್ಕೆ ಮೂಲಕಾರಣವಾಗಿರುವುದರಿಂದ ಮಹಿಳೆಯರು ಜೀವನಪರ್ಯಂತ ತಮ್ಮ ಗಂಡಂದಿರ 'ಅಡಿಯಾಳಾಗಿರ ಬೇಕು' ಮತ್ತು ಅವರೆಲ್ಲ ಧರ್ಮಾಧಿಕಾರಿ, ಪಾದ್ರಿ ಮತ್ತು ಮಿಲಿಟರಿ ಸೇವೆಗಳಿಂದ ದೂರ ಉಳಿಯಬೇಕು" ಎಂಬ ಅಭಿಪ್ರಾಯ ಅವರಲ್ಲಿ ಬಲವಾಗಿ ಇದ್ದಿದ್ದರಿಂದ ನನ್ನ ಈ ನಡೆ ಅನಿವಾರ್ಯವಾಗಿತ್ತು.

ಪುರುಷನಿಗೆ ಮಹಿಳೆಯು ಅಧೀನವಾಗಿರಬೇಕೆಂಬ ಈ ಅಭಿಪ್ರಾಯವು ಇಂದು ಯಾವುದೋ ಒಂದು ಧರ್ಮ ಅಥವಾ ನಂಬಿಕೆಗೆ ಸೀಮಿತವಾಗಿಲ್ಲ. ಅನೇಕ ನಂಬಿಕೆಗಳು ಮಹಿಳೆಗೆ ಪೂರ್ಣವಾಗಿ ಮತ್ತು ಸಮಾನವಾಗಿ ತಮ್ಮ ಪಾತ್ರ ನಿರ್ವಹಿಸಲು ತೊಡಕಾಗಿದೆ. ಇನ್ನೂ ಬೇಸರದಿಂದ ಹೇಳುವುದಾದರೆ ಇಂದಿಗೂ ಅವರನ್ನು ಚರ್ಚ್, ಮಸೀದಿ, ಮಂದಿರದ ಬೇಡಿಗಳಲ್ಲೇ ಬಂಧಿಸಲಾಗಿದೆ. ಜಗತ್ತಿನಾದ್ಯಂತ ಶತಮಾನಗಳಿಂದಲೂ ಆಚರಣೆಯಲ್ಲಿರುವ ಇಂತಹ ತಾರತಮ್ಯಗಳಿಗೆ ನಮ್ಮ ಪ್ರಭುತ್ವದ ಬಳಿ ಯಾವುದೇ ನ್ಯಾಯಯುತ ಸಮರ್ಥನೆಗಳಿಲ್ಲದಿದ್ದರೂ ಮಹಿಳೆಯರ ಸಮಾನ ಹಕ್ಕುಗಳನ್ನು ನಿಯಂತ್ರಿಸಲು ಮತ್ತು ನಿರಾಕರಿಸಲು ಹುಸಿ ಕಾರಣಗಳನ್ನು ಸೃಷ್ಟಿಸುತ್ತಲೇ ಇದೆ.

ಅಲ್ಲದೇ ಪುರುಷನ ಹಿಡಿತದಲ್ಲಿ ನಡೆಯುತ್ತಿರುವ ಗುಲಾಮಗಿರಿ, ಹಿಂಸೆ, ಬಲವಂತದ ವೇಶ್ಯಾವಾಟಿಕೆ, ಅಂಗಾಂಗ ಹರಣ ಮತ್ತು ರಾಷ್ಟ್ರೀಯ ಕಾನೂನುಗಳಲ್ಲಿ ಅಪರಾಧ ಎಂದೇ ಬಿಂಬಿಸಲ್ಪಡುವ ಅತ್ಯಾಚಾರಗಳೂ ಅಸಂಗತವಾಗಿ ಮಹಿಳೆಯರ ಅಸ್ತಿತ್ವವನ್ನು ವಶಕ್ಕೆ ತೆಗೆದುಕೊಳ್ಳುವ ಹೀನ ಆಚರಣೆಗಳಾಗಿ ಚಾಲ್ತಿಯಲ್ಲಿವೆ. ಈ ಮಟ್ಟ ಮನೋಭಾವದ ಕಾರಣದಿಂದ ಇಂದು ಬಹುತೇಕ ಮಹಿಳೆಯರು ತಮ್ಮದೇ ದೇಹ ಮತ್ತು ಜೀವದ ಮೇಲೆ ನಿಯಂತ್ರಣವಿಲ್ಲದೇ ತಮ್ಮದೇ ಸಮುದಾಯಗಳಲ್ಲಿ ಶಿಕ್ಷಣ, ಆರೋಗ್ಯ ಉದ್ಯೋಗ ಮತ್ತು ಇನ್ನಿತರೆ ಹಕ್ಕುಗಳನ್ನು ಸಮಾನವಾಗಿ ಅನುಭವಿಸಲು ಸಾಧ್ಯವಾಗುತ್ತಿಲ್ಲ.

ಧರ್ಮದ ನಂಬಿಕೆಯ ಪರಿಣಾಮಗಳು ನಮ್ಮ ಜೀವನದ ಎಲ್ಲಾ ಅಂಶಗಳ ಮೇಲೆ ಪ್ರಭಾವ ಬೀರುತ್ತಿದೆ. ಅಲ್ಲದೇ ಬಹುತೇಕ ರಾಷ್ಟ್ರಗಳಲ್ಲಿ ಏಕೆ ಹುಡುಗರೇ ಮೊದಲು ಶಿಕ್ಷಣ ಪಡೆಯುತ್ತಾರೆ; ಯಾವಾಗ ಮತ್ತು ಯಾರನ್ನು ಮದುವೆಯಾಗಬೇಕು ಎಂದು ಹುಡುಗಿಯರಿಗೇ ಏಕೆ ಹೇಳಲಾಗುತ್ತದೆ; ಜೊತೆಗೆ ಅವಶ್ಯಕ ಆರೋಗ್ಯ ಸೌಲಭ್ಯಗಳು ಇಲ್ಲದಿರುವುದರಿಂದ ಮಹಿಳೆಯರು ಅಪಾಯಕಾರಿ ಗರ್ಭಧಾರಣೆ ಮತ್ತು ಹೆರಿಗೆ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ,

ಕೆಲವೊಂದು ಇಸ್ಲಾಮಿಕ್ ದೇಶಗಳಲ್ಲಿ ಮಹಿಳೆಯರಿಗೆ ಯಾವ ಸ್ವಾತಂತ್ರ್ಯವೂ ಇಲ್ಲ, ಅವರು ಕೇವಲ ತೋಳು ಅಥವಾ ಹಿಮ್ಮಡಿ ಕಾಣುವಂತೆ ಇದ್ದರೆ ಶಿಕ್ಷಿಸಲ್ಪಡುತ್ತಾರೆ, ಶಿಕ್ಷಣದಿಂದ ವಂಚಿತರಾಗಿದ್ದಾರೆ, ಪುರುಷರಂತೆ ಕಾರು ಚಲಾಯಿಸುವ ಅಥವಾ ಉದ್ಯೋಗದಲ್ಲಿ ಅವರೊಂದಿಗೆ ಸ್ಪರ್ಧಿಸುವಂತ ಯಾವ ಹಕ್ಕೂ ಅವರಿಗಿಲ್ಲ. ಇಷ್ಟಲ್ಲದೇ ಒಂದು ವೇಳೆ ಅವರು ಅತ್ಯಾಚಾರಕ್ಕೊಳಗಾದರೂ ಸಹ, ಅತ್ಯಾಚಾರಿಗಿಂತಲೂ ಹೆಚ್ಚಿನ ಶಿಕ್ಷೆ ಅನುಭವಿಸಬೇಕಾಗಿದೆ.

ಈ ಲಿಂಗ ತಾರತಮ್ಯವು ಮಹಿಳೆಯ ವೇತನ ಪಾವತಿ ವಿಚಾರದಲ್ಲೂ ನಡೆಯುತ್ತಿರುವುದರಿಂದ ಈಗಲೂ ನಮ್ಮ ಪಶ್ಚಿಮ ದೇಶದ ಕಚೇರಿಗಳಲ್ಲಿ ಕೆಲವೇ ಮಂದಿ ಮಹಿಳೆಯರು ಮಾತ್ರ ಕೆಲಸ ಮಾಡುತ್ತಿದ್ದಾರೆ. ಈ ರೀತಿಯ ಪೂರ್ವಾಗ್ರಹಗಳು ನಮ್ಮ ಇತಿಹಾಸದ ಬೇರುಗಳಿಂದ ಹುಟ್ಟಿಕೊಂಡಿದ್ದರೂ ಸಹ; ಅದರ ಪರಿಣಾಮವನ್ನು ಇಲ್ಲಿ ಪ್ರತಿದಿನವೂ ಅನುಭವಿಸುವಂತಾಗಿದೆ. ಇದರಿಂದಾಗಿ ಸಮಸ್ಯೆ ಅನುಭವಿಸುತ್ತಿರುವುದು ಮಹಿಳೆ ಮತ್ತು ಹುಡುಗಿಯರು ಮಾತ್ರವಲ್ಲ, ಇದು ನಮ್ಮೆಲ್ಲರಿಗೂ ಹಾನಿ ಮಾಡಿದೆ. ಹಾಗೆ ನೋಡಿದರೆ ಮಹಿಳೆ ಮತ್ತು ಹುಡುಗಿಯರ ಮೇಲೆ ಮಾಡುವ ಹೂಡಿಕೆಯೇ ನಮ್ಮ ಸಮಾಜಕ್ಕೆ ಹೆಚ್ಚು ಅನುಕೂಲಕರವಾಗಿದೆ ಎಂದು ಅಂಕಿಅಂಶಗಳು ಹೇಳುತ್ತವೆ. ಅಂದರೆ ಅಕ್ಷರಸ್ಥ ಮಹಿಳೆಯು ಆರೋಗ್ಯವಂತ ಮಗುವನ್ನು ಪಡೆದಿರುತ್ತಾಳೆ. ಆಕೆ ಮಗುವನ್ನು ಶಾಲೆಗೆ ಕಳಿಸುತ್ತಾಳೆ. ಅವಳ ಹೆಚ್ಚಿನ ಗಳಿಕೆಯನ್ನೂ ಕುಟುಂಬಕ್ಕಾಗಿಯೇ ಬಳಸುತ್ತಾಳೆ.

ಜನಸಂಖ್ಯೆಯಲ್ಲಿ ಅರ್ಧದಷ್ಟು ಇರುವ ಜನರ ಮೇಲಿನ ಪಕ್ಷಪಾತೀಯ ಧೋರಣೆ ನಮ್ಮ ಸ್ವಯಂಪತನವೂ ಆಗಿದೆ. ಇಂದು ಇರಾನ್‌ನಲ್ಲಿ ನೋಡುತ್ತಿರುವಂತೆ ಮಹಿಳೆಯರು ಹೇಗೆ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಕ್ಕಾಗಿ ಮುಂಚೂಣಿಯಲ್ಲಿ ನಿಂತು ಹೋರಾಡುತ್ತಿರುವರೋ ಹಾಗೆಯೇ ನಾವು ಕೂಡ ಇಂತಹ ಹಳೆಯ ಮತ್ತು ಸವಕಳಿ ಆಚರಣೆಗಳ ವಿರುದ್ಧ ದನಿಯೆತ್ತಬೇಕಾಗಿದೆ.

ಆದರೆ ಈ ನಿಟ್ಟಿನಲ್ಲಿ ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಿದ್ದ ನಮ್ಮ ರಾಜಕಾರಣಿಗಳು ಏಕೆ ಹಿಂದೇಟು ಹಾಕುತ್ತಿದ್ದಾರೆ ಎಂಬುದನ್ನೂ ನಾನು ಅರ್ಥ ಮಾಡಿಕೊಂಡಿದ್ದೇನೆ. ಇಂದು ಧರ್ಮ ಮತ್ತು ಸಂಪ್ರದಾಯಗಳು ಶಕ್ತಿಯುತ ಮತ್ತು ಅತಿಸೂಕ್ಷ್ಮ ಸವಾಲಾಗಿವೆ. ಆದರೆ ನನ್ನನ್ನೂ ಒಳಗೊಂಡಂತೆ ವಿಭಿನ್ನ ನಂಬಿಕೆ ಮತ್ತು ಸಾಮಾಜಿಕ ಹಿನ್ನೆಲೆಗಳಿಂದ ಬಂದ ನನ್ನ ಹಿರಿಯ ಸಂಗಾತಿಗಳು, ಓಟು ಗಳಿಕೆಯ ಬಗ್ಗೆಯಾಗಲೀ ವಿವಾದದ ಭಯಕ್ಕಾಗಲೀ ತಲೆ ಕೆಡಿಸಿಕೊಳ್ಳದೇ ಅನ್ಯಾಯವು ಎಲ್ಲೇ ಕಂಡರೂ ಅದನ್ನು ತೀವ್ರವಾಗಿ ಪ್ರತಿಭಟಿಸುವ ನಮ್ಮ ಆಶಯಗಳಿಗೆ ಸದಾ ಬದ್ಧರಾಗಿದ್ದಾರೆ.

ಈ ನಿಟ್ಟಿನಲ್ಲಿ ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷರಾದ ನೆಲ್ಸನ್ ಮಂಡೇಲಾ ಅವರು ವಿಶ್ವದ ಶಾಂತಿ ಮತ್ತು ಮಾನವೀಯತೆಗಾಗಿ ದುಡಿಯುತ್ತಿರುವ ಮತ್ತು ಶೋಷಿತ ಜನರ ಸಮಸ್ಯೆಗಳನ್ನು ಪ್ರತಿನಿಧಿಸುತ್ತಿರುವ ಸ್ವತಂತ್ರ ನಾಯಕರನ್ನು ಒಗ್ಗೂಡಿಸಿದರು. ನಂತರ ನಾವೆಲ್ಲರೂ ಇತ್ತೀಚೆಗೆ ಎಲ್ಲಾ ಧಾರ್ಮಿಕ ನಾಯಕರಲ್ಲಿ ಸಮಾನತೆ ಮತ್ತು ಮಾನವ ಹಕ್ಕುಗಳ ಜಾರಿಯ ಕುರಿತಂತೆ ಅವರಿಗಿರುವ ಜವಾಬ್ದಾರಿಯನ್ನು ತಿಳಿಸಿಕೊಡಲು ಮಾಡಿದ್ದ ಈ ಘೋಷಣೆ ಪ್ರಕಟವಾಗಿದೆ: "ಧರ್ಮ ಅಥವಾ ಸಂಪ್ರದಾಯಗಳ ಆಧಾರದ ಮೇಲೆ, ಮಹಿಳೆಯರ ಮತ್ತು ಹುಡುಗಿಯರ ಹಕ್ಕುಗಳ ವಿರುದ್ಧ ಇರುವ ಧರ್ಮಾಧಿಕಾರಿಗಳ ತಾರತಮ್ಯದ ಸಮರ್ಥನೆಗಳು ಯಾವುದೇ ಕಾರಣಕ್ಕೂ ಸ್ವೀಕಾರಾರ್ಹವಲ್ಲ."

ಇಂದು ಮಹಿಳೆಯರ ವಿರುದ್ಧ ಇರುವ ತಾರತಮ್ಯದ ನೀತಿಗಳನ್ನು ಸಮರ್ಥಿಸಿಕೊಳ್ಳಲು ಆಳವಾಗಿ ಬೇರು ಬಿಟ್ಟಿರುವ ಹಾನಿಕಾರಕ ಬೋಧನೆ ಮತ್ತು ಆಚರಣೆಗಳ ವಿರುದ್ಧ ದನಿಯೆತ್ತುವುದರೊಂದಿಗೆ ಈ ತಾರತಮ್ಯಗಳನ್ನು ಸರಿಪಡಿಸಲು ಎಲ್ಲಾ ಧಾರ್ಮಿಕ ನಾಯಕರಿಗೆ ನಾನು ಕರೆ ನೀಡಿರುತ್ತೇನೆ. ಜೊತೆಗೆ ನಿರ್ದಿಷ್ಟವಾಗಿ ಎಲ್ಲಾ ಧರ್ಮದ ನಾಯಕರೂ ನಮ್ಮ ಧರ್ಮಗಳು ಸಾರುವಂತಹ ಘನತೆ ಮತ್ತು ಸಮಾನತೆಯನ್ನು ಎತ್ತಿ ಹಿಡಿಯುವಂತಹ ಧನಾತ್ಮಕ ಅಂಶಗಳನ್ನು ಒಪ್ಪಿಕೊಂಡು ಅದನ್ನು ಧೈರ್ಯವಾಗಿ ಎತ್ತಿ ಹಿಡಿಯಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ.

ಕಾರಣ ಧರ್ಮಗ್ರಂಥಗಳನ್ನು ಎಚ್ಚರಿಕೆಯಿಂದ ಗಮನಿಸಿದಾಗ ಕಂಡುಬರುವ 'ಪುರುಷರೇ ಶ್ರೇಷ್ಠ' ಎಂದು ಬಿಂಬಿಸುವ ಅಂಶಗಳು ಎಲ್ಲಾ ಕಾಲದಲ್ಲೂ ಆಚರಣೆಯಲ್ಲಿರುವುದರಿಂದ ಆ ಸತ್ಯವನ್ನು ಎಚ್ಚರದಿಂದ ಹೇಳಬೇಕಾಗಿದೆ.

ಅಲ್ಲದೇ ಧರ್ಮದ ಹೆಸರಲ್ಲಿ ದಬ್ಬಾಳಿಕೆ ನಡೆಸುತ್ತಿದ್ದ ಅರ... ವಿರುದ್ಧ ದನಿಯೆತ್ತಲು ಮಹಿಳೆಯರು ಹೆದರುತ್ತಿರುವುದ... ಈ ಧರ್ಮಗ್ರಂಥಗಳೂ ಕಾರಣವಾಗಿದೆಯೆಂದು ಮುಖ್ಯವಾ... ನೆನಪಿಡಬೇಕು.

ಇದರೊಂದಿಗೆ ನಮ್ಮ ಧರ್ಮಗ್ರಂಥಗಳಲ್ಲಿ ಅನ... ಮಹಿಳೆಯರನ್ನು ಸರ್ವೋಚ್ಚ ನಾಯಕಿಯರೆಂದ... ಪೂಜಿಸಲಾಗುತ್ತಿದೆ ಎನ್ನುವುದರ ಬಗ್ಗೆಯೂ ನನಗೆ ಅರಿವಿ... ಚರ್ಚಿನ ಆರಂಭಿಕ ವರ್ಷಗಳಲ್ಲಿ ಅನೇಕ ಮಹಿಳೆಯ... ಧರ್ಮಾಧಿಕಾರಿಣಿಯಾಗಿ, ಪುರೋಹಿತೆ, ಬಿಷ... ದೇವದೂತೆ, ಪ್ರವಾದಿ ಮತ್ತು ಬೋಧಕಿಯರಾಗಿ ಕಾಯ... ನಿರ್ವಹಿಸಿರುತ್ತಾರೆ. ಆದರೆ ನಾಲ್ಕನೆಯ ಶತಮಾನ... ನಂತರದಲ್ಲಿ ವಿಕೃತ ಮನಸ್ಸಿನ ಪುರುಷರು ಮತ್ತು ಪ್ರಭಾವಿ... ಕ್ರೈಸ್ತ ನಾಯಕರು ಧಾರ್ಮಿಕ ಶ್ರೇಣಿಯಲ್ಲಿ ತಮ್ಮ ಸ್ಥಾನಗಳ... ಭದ್ರಪಡಿಸಿಕೊಳ್ಳುವ ಸಲುವಾಗಿ ಧರ್ಮಗ್ರಂಥವನ್ನೇ ತಿರು... ಹಾಕಿದ್ದಾರೆ.

ಈಗಲೂ ಸಹ ಧಾರ್ಮಿಕ ನಾಯಕರು ತಮ್ಮ ಪವಿ... ಬೋಧನೆಗಳಲ್ಲಿ ಪುರುಷರನ್ನು ಏರಿಸುವ ಮತ್ತು ಮಹಿಳೆಯ... ಹಕ್ಕನ್ನು ನಿಯಂತ್ರಿಸುವ ಕೆಲಸವನ್ನು ಮಾಡುತ್ತಿರುವುದು ಸತ್ಯವಾಗಿದೆ. ಅವರು ತಮ್ಮ ಸ್ವಾರ್ಥಸಾಧನೆಗಾಗಿ ಮಹಿಳೆ... ಹಕ್ಕು ನಿಯಂತ್ರಣವನ್ನು ಮಾಡುತ್ತಲೇ ಇದ್ದಾರೆ. ಅವ... ಈ ನಿರಂತರವಾದ ಪ್ರಯತ್ನಗಳಿಂದಾಗಿ ವಿಶ್ವದೆಲ್ಲೆಡೆ ಇಂದ... ಮಹಿಳೆಯರನ್ನು ಕಾನೂನಾತ್ಮಕವಾಗಿಯೇ ನಿಂದಿಸುವಂತಹ ವ್ಯವಸ್ಥೆ ಜಾರಿಯಲ್ಲಿದೆ. ಬಹುಸ್ಪಷ್ಟವಾಗಿ ಹೇಳಬಹುದಾದ... ಇದು ಮಾನವ ಹಕ್ಕುಗಳ ಉಲ್ಲಂಘನೆ ಮಾತ್ರವೇ... ನಾವೆಲ್ಲರೂ ದೇವರ ಮಕ್ಕಳೆಂದು ನ್ಯಾಯಿಕ ಕರೆ ನೀಡಿದಂತಹ ಏಸುಕ್ರಿಸ್ತನ ದೂತರಾದ ಪಾಲ್, ಮೋಸೆಸ್ ಮತ್ತು ಪ್ರವಾ... ಮಹಮದ್ ಹಾಗೂ ಇತರೆ ಧರ್ಮಗಳ ಸಂಸ್ಥಾಪಕರಿ... ಮಾಡುವಂತಹ ಬಹುದೊಡ್ಡ ಅವಮಾನವೂ ಆಗಿದ... ಹೀಗಾಗಿ ಇಂತಹ ಅಪಾಯಕಾರಿ ಸನ್ನಿವೇಶದಲ್ಲಿ ಈ... ರೀತಿಯ ಧರ್ಮ ವಿರೋಧಿ ತಿಳಿವಳಿಕೆಯನ್ನು ಧೈರ್ಯವಾ... ಎದುರಿಸಬೇಕಾಗಿದೆ.

(ಜಿಮ್ಮಿ ಕಾರ್ಟರ್ 1977 ರಿಂದ 1981 ಅವಧಿಯವರೆಗೆ ಅಮೆರಿಕದ ಅಧ್ಯಕ್ಷರಾಗಿದ್ದರು)

ಕನ್ನಡಕ್ಕೆ ಅನುವಾದ: ರಮೇಶ ಸಹ್ಯಾದ್ರಿ, ಶಿವಮೊ...



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಬಕರ ಜ್ಯೋತಿ ಮತ್ತು ಭಕ್ತರ ತಿಥಿ

ಶಬರಿಮಲೆಯ ಅಯ್ಯಪ್ಪ ದೇವಸ್ಥಾನದಲ್ಲಿ ಮಕರ ಸಂಕ್ರಮಣ ದಿನ ಸಾಯಂಕಾಲ ಕಾಣುವ ಮಕರ ಜ್ಯೋತಿ ಮತ್ತು ಮಕರ ಜ್ಯೋತಿ ನಕ್ಷತ್ರದ ಬಗ್ಗೆ ಇರುವ ಸತ್ಯಾಸತ್ಯಗಳು ಈಗ ರಹಸ್ಯವಾಗೇನೂ ಇಲ್ಲ. ತ್ರಿವಾಂಕೂರು ದೇವಾಲಯಗಳ ಮಂಡಲಿಯ ಅಧಿಕಾರಿಗಳು, ಪೊಲೀಸರು ಮತ್ತು ಕೇರಳ ವಿದ್ಯುತ್ ನಿಗಮದ ಕೆಲವು ನೌಕರರು ನಿರ್ದಿಷ್ಟ ಸಮಯದಲ್ಲಿ ಹತ್ತಿರದ ಪೊನ್ನಂಬಲಂ (ಮೇಡು) ಬೆಟ್ಟದ ಮೇಲೆ ಬೆಂಕಿ ಉರಿಸುವುದೇ ಆ ಮಕರ ಜ್ಯೋತಿ ಆಗಿತ್ತು. 1981ರಲ್ಲಿ ಕೇರಳದ ವಿಚಾರವಾದಿಗಳು ಅದರ ಚಿತ್ರವನ್ನು ಸೆರೆಹಿಡಿದು ಪ್ರಕಟಿಸಿ, ಇವರ ಗುಟ್ಟನ್ನು ಬಯಲು ಮಾಡಿದ್ದಕ್ಕೆ ಅವರನ್ನು ಮಂಗ್ಗಾಮುಗ್ಗಾ ಥಳಿಸಿದ್ದಲ್ಲದೇ, ಆಸ್ಪತ್ರೆಯನ್ನು ಸೇರಿದ್ದ ವಿಚಾರವಾದಿಗಳು ನಂತರ ಮರಣಿಸಿದರೆಂದು ತಿಳಿದುಬರುತ್ತದೆ.

ಗುಡ್ಡಗಾಡಿನವರೋ, ತ್ರಿವಾಂಕೂರ್ ದೇವಾಲಯಗಳ ಮಂಡಲಿಯವರೋ ಅಥವಾ ವಿದ್ಯುತ್ ನಿಗಮದ ನೌಕರರೋ, ಪೊಲೀಸರೋ, ಶಬರಿಮಲೆಯಿಂದ ನಾಲ್ಕು ಕಿಲೋಮೀಟರ್ ದೂರವಿರುವ ಪೊನ್ನಂಬಲಂ ಬೆಟ್ಟದ ಮೇಲೆ ಬೆಂಕಿಹಚ್ಚುವವರು ಯಾರೇ ಆಗಲಿ, ಶಬರಿ ಮಲೆಯ ಅಯ್ಯಪ್ಪನ ಮೇಲೆ ಭಕ್ತಿಯಂತೂ ಕಡಿಮೆಯಾಗಿಲ್ಲ. ಅದಕ್ಕೆ ಹರಿದುಹೋಗುತ್ತಿರುವ ಭಕ್ತರ ಸಂಖ್ಯೆಯಂತೂ ಕಡಿಮೆಯಾಗಿಲ್ಲ. ಮಕರ ಜ್ಯೋತಿಯ ಸಮಯದಲ್ಲಿ ಕಾಲ್ತುಳಿತಕ್ಕೆ ಸಿಕ್ಕಿ ಜನರು ಸಾಯುವಷ್ಟು ಧಂಡಿಯಾಗಿ ಭಕ್ತ ಜನರು ಹೋಗುತ್ತಲೇ ಇರುತ್ತಾರೆ. 1999ರಲ್ಲಿ 53 ಜನ ಮತ್ತು 2011ರಲ್ಲಿ 106 ಜನ ಸತ್ತರು. ನೂರಾರು ಜನ ಗಾಯಗೊಂಡರು. 1999ರಲ್ಲಿ ಜಸ್ಟೀಸ್ ಟಿ ಚಂದ್ರಶೇಖರ ಮೆನನ್ ಕಮಿಟಿ ಈ ಕಾಲ್ತುಳಿತಕ್ಕೆ ಸಂಬಂಧಪಟ್ಟಂತೆ ತನಿಖೆಗೆ ಮಕರ ಜ್ಯೋತಿಯ ಬಗ್ಗೆ ಒತ್ತಾಯಿಸಿತು. ಮಕರ ಜ್ಯೋತಿ ಎಂಬುದು ಎಷ್ಟರಮಟ್ಟಿಗೆ ಸಾಚಾ ಎಂದು ವಿಚಾರಣೆ ಮಾಡಲು ಆದೇಶಿಸಿದರೆ, ಅದು ಭಕ್ತರ ಶ್ರದ್ಧಾನಂಬಿಕೆಗೆ ಸಂಬಂಧಪಟ್ಟದ್ದು, ಅದನ್ನು ಶೋಧಿಸಲು ಹೋಗಬಾರದು ಎಂದು ಮಕರ ಜ್ಯೋತಿ ಕಮಿಟಿಯವರು ಅಡ್ಡಗಾಲು ಹಾಕಿದರು. ಆದರೆ ಚಂದ್ರಶೇಖರ್ ಮೆನನ್ ಅಡ್ವೋಕೇಟ್‌ಗಳ ಕಮಿಷನನ್ನು ಈ ಮಕರ ಜ್ಯೋತಿಯನ್ನು ಸಾಕ್ಷೀಕರಿಸಲು ನಿಯೋಜಿಸಿತು. ಯಾವಾಗ ಮತ್ತೆ 2011ರ ಮಕರ ಸಂಕ್ರಾಂತಿಯಂದು ನೂರು ಜನಕ್ಕೂ ಮೇಲ್ಪಟ್ಟು ಮಕರಜ್ಯೋತಿಯನ್ನು ವೀಕ್ಷಿಸಲು ಹೋಗಿ ಕಾಲ್ತುಳಿತಕ್ಕೆ ಬಲಿಯಾದರೋ ಆಗ ವಿಚಾರಣೆಯನ್ನು ಮತ್ತಷ್ಟು ಬಿಗಿಗೊಳಿಸಿತು. ಅದರ ಫಲವಾಗಿ ತಳಮಾನ್ ತಂತ್ರಿಯ ಕುಟುಂಬದ ಮುಖ್ಯಸ್ಥನಾದ ಕಂತಾರು ಮಹೇಶ್ವರರು ತಿಳಿಸಿದ್ದೇನೆಂದರೆ, 'ಅದು ಮಕರ ಜ್ಯೋತಿ ಅಲ್ಲ, ಅದು ಮಕರ ವಿಳಕ್ಕು (ದೀಪ)' ಎಂದು. ಅಂದರೆ ಜ್ಯೋತಿ ಎಂದರೆ, ಅದ್ಯಾವುದೋ ಮನುಷ್ಯಾತೀತವಾದ ಶಕ್ತಿಯ ಪ್ರಭೆಯು ಬೆಳಗುವುದು. ದೀಪವೆಂದರೆ ನಮ್ಮಂತಹ ಸಾಮಾನ್ಯ ಮನುಷ್ಯರು ಎಣ್ಣೆ ಬತ್ತಿ ಅಥವಾ ಇತ್ಯಾದಿಗಳನ್ನು ಬಳಸಿಕೊಂಡು ಬೆಳಗಿಸುವುದು.

ಅದುವರೆಗೂ ಮಕರ ಜ್ಯೋತಿ ಎಂದು ಭಕ್ತರನ್ನು ಬಕರ ಮಾಡುತ್ತಿದ್ದರು. ಶ್ರದ್ಧಾಭಕ್ತಿಗಳಿಂದ ಹೋದ ಪಾಪದ ಭಕ್ತರ ತಿಥಿಗಳಾದವು. ಈ ಜ್ಯೋತಿ ಮತ್ತು ತಿಥಿಗಳ ಹಿಂದೆ ಅಡಗಿರುವ ಮನುಷ್ಯನ ಸ್ವಾರ್ಥವನ್ನು ಗಮನಿಸಿ. ಶ್ರದ್ಧಾ ನಂಬಿಕೆಯ ತಲೆಗಟ್ಟನಿಂದ ಸುಳ್ಳನ್ನು ಪೋಷಿಸಿಕೊಂಡು ಬರುವ ತಂತ್ರಿಗಳು ಮತ್ತು ದೇವಾಲಯದ ಆಡಳಿತ ಮಂಡಲಿಯವರೆಲ್ಲಾ ಅದೆಷ್ಟೇ ಸಾವುನೋವುಗಳಿಗೆ ಕಾರಣವಾಗುತ್ತಿದ್ದರೂ ಮೌನವಾಗಿ ತಮ್ಮ ಕಾರ್ಯಾಚರಣೆಯನ್ನು ಮುಂದುವರಿಸಿಕೊಂಡೇ ಹೋಗುತ್ತಿದ್ದದ್ದು ಎಂಥಾ ಅಮಾನವೀಯವೆಂಬುದನ್ನು ಗಮನಿಸಿ. ಇದರಿಂದ ಸ್ಪಷ್ಟವಾಗುವುದು ಏನೆಂದರೆ ಅವರಿಗೆ ಯಾವ ಶ್ರದ್ಧಾ ನಂಬಿಕೆಯೂ ಮುಖ್ಯವಲ್ಲ, ಬದಲಾಗಿ ಬರಿದೇ ಅವರ ಸ್ವಾರ್ಥ ಮತ್ತು ಸ್ವಹಿತಾಸಕ್ತಿಯ ಪೋಷಣೆ ಎಂಬುದಷ್ಟೇ ಸ್ಪಷ್ಟ.

ಇದನ್ನು ಕಂಡುಕೊಂಡ ಮೇಲೆ ಅಲ್ಲಿನ ತಂತ್ರಿಗಳು, ಅವರು ನಾವು ಸಾಮಾನ್ಯವಾಗಿ ನಮ್ಮ ಕಡೆ ನೋಡುವಂತಹ ಮಂತ್ರ ಹೇಳುವ ಅರ್ಚಕರಲ್ಲ, ಬದಲಾಗಿ ಕೈಗಳಿಂದ ಬೆರಳುಗಳಿಂದ ಎಂಥದ್ದೋ ಮುದ್ರೆಗಳನ್ನು ಬೆರಳುಗಳ ಭಂಗಿಗಳಲ್ಲಿ ಮಾಡುತ್ತಾರೆ. ಅದು ತಾಂತ್ರಿಕವಂತೆ. ಅದಕ್ಕೆ ಅವರನ್ನು ತಂತ್ರಿಗಳು ಎಂದು ಕರೆಯುವುದು) ಹೇಳಿದ್ದೇನೆಂದರೆ, ಪೊನ್ನಂಬಲಂನ ಬೆಟ್ಟದ ಮೇಲೆ ಅಲ್ಲಿನ ಬುಡಕಟ್ಟಿನವರು ತಮ್ಮ ಮಕರ ಸಂಕ್ರಮಣದ ಆಚರಣೆಯನ್ನು ಮಾಡಿಕೊಳ್ಳುತ್ತಾರೆ. ಅದರ ಭಾಗವಾಗಿ ಎತ್ತರೆತ್ತರದ ಬೆಂಕಿ ಉರಿಸುತ್ತಾರೆ. ಆದರೆ ಅದಕ್ಕೂ ನಮಗೂ ಏನೂ ಸಂಬಂಧ ವಿಲ್ಲವೆಂದೂ ಮತ್ತು ನಾವು ಅದನ್ನು ಮಾಡಿಸುವವರಲ್ಲ ವೆಂದೂ ಹೇಳಿದರು. ಆದರೆ ಅದನ್ನು ಪ್ರಶ್ನಿಸುವವರೆಗೂ, ಅದರ ಗುಟ್ಟನ್ನು ಕಂಡು ಹಿಡಿಯುವವರೆಗೂ ಅದನ್ನು ಮಕರ ಜ್ಯೋತಿ ಎಂದು ಕರೆಯುತ್ತಾ ನಂಬುವವರ




ವಿಶ್ವಾಸವನ್ನು ಗಾಢವಾಗಿಸಿ ತಮ್ಮ ಕಡೆಗೆ ಕಾಣಿಕೆ ನೀಡುವ ಭಕ್ತವೃಂದವನ್ನು ಹಿಗ್ಗಿಸಿಕೊಳ್ಳುತ್ತಲಿದ್ದರು ಇದೇ ತಂತ್ರಿಗಳು. ಆಮೇಲೆ ಹೇಳಿದ್ದು, ಅದು ಮಕರ ಜ್ಯೋತಿಯಲ್ಲ, ಮಕರ ವಿಳಕ್ಕು (ದೀಪ) ಎಂದು. ಆದರೆ ಅದನ್ನು ನಂಬಿಕೊಂಡು ಶ್ರದ್ಧಾಭಕ್ತಿಗಳಿಂದ ನಡೆದುಕೊಳ್ಳುತ್ತಿದ್ದ ಭಕ್ತರು ಮಾತ್ರ ಬಕರಗಳಾದರು.

ಏನಿದು ಮಕರಜ್ಯೋತಿ?

ಸೂರ್ಯನು ಧನರ್‍ರಾಶಿಯಿಂದ ಮಕರರಾಶಿಗೆ ಚಲಿಸುವುದು. ಅದಕ್ಕೂ ಮುನ್ನ, ಸೂರ್ಯ ಚಲಿಸುವುದಿಲ್ಲ ಎಂಬುದು ವೈಜ್ಞಾನಿಕ ಸತ್ಯ. ಆದರೆ ನಾವು ಭೂಮಿಯ ನೆಲೆಯಿಂದ ನೋಡುವುದರಿಂದ, ಅದು ಚಲಿಸಿದಂತೆ ಕಾಣುವುದರಿಂದ ಅದೇ 'ಸೂರ್ಯ ಚಲಿಸುವುದು' ಎಂಬ ಪರಿಭಾಷೆಯನ್ನೇ ಉಪಯೋಗಿಸುತ್ತಿದ್ದೇವೆ ಎಂಬ ಅರಿವಿದ್ದುಕೊಂಡೇ ವಿಷಯವನ್ನು ಅರ್ಥೈಸಿಕೊಳ್ಳೋಣ.

ಜನವರಿಯ 14ರ ಆಸುಪಾಸಿಗೆ (ಸಾಮಾನ್ಯವಾಗಿ 14ಕ್ಕೇ) ಸೂರ್ಯ ಮಕರರಾಶಿಗೆ ಸಂಕ್ರಮಣ ಮಾಡುತ್ತಾನೆ. ಅದು ಮಕರ ಸಂಕ್ರಾಂತಿ. ಸೂರ್ಯ ದಕ್ಷಿಣದಿಂದ ಉತ್ತರಕ್ಕೆ ಬರಲಾರಂಭಿಸುತ್ತಾನೆ. ಅದೇ ಉತ್ತರಾಯಣ, ಅಂದರೆ ಸೂರ್ಯನು ಉತ್ತರಕ್ಕೆ ಚಲಿಸುವುದು ಪುಣ್ಯಕಾಲವೆಂದು ಭಾವಿಸುತ್ತಾರೆ. ಅದು ಸುಮಾರು ಜುಲೈ 14ರವರೆಗೂ ಆಗುತ್ತದೆ. ಅದಕ್ಕೆ ಕರ್ಕ ಸಂಕ್ರಾಂತಿಯೆಂದು ಕರೆಯುತ್ತಾರೆ.





ಇಂತಹ ಉತ್ತರಾಯಣ ಪುಣ್ಯಕಾಲದಲ್ಲೇ ಮಹಾಭಾರತದ ಭೀಷ್ಮನು ತಾನು ಸಾಯಬೇಕೆಂದು ಬಯಸಿದ್ದನು. ಬಾಣಗಳಿಂದ ಗಾಯಗೊಂಡಿದ್ದರೂ, ನೋವುಗಳಿಂದ ಬಳಲುತ್ತಿದ್ದರೂ ಜೀವವನ್ನು ತಡೆದುಕೊಂಡಿದ್ದು ನಂತರ ಉತ್ತರಾಯಣ ಪುಣ್ಯಕಾಲದಲ್ಲಿ ಸಾಯುವಂತಹ ಮೌಢ್ಯವನ್ನು ಹೊಂದಿದ್ದ ಭೀಷ್ಮ ಇನ್ನು ಎಷ್ಟರಮಟ್ಟಿಗೆ ತನ್ನ ಧೋರಣೆ ಮತ್ತು ನಿಲುವುಗಳಿಂದ ಕುರುವಂಶದ ನಾಶಕ್ಕೆ ಕಾರಣನಾಗಿದ್ದಿರಬಹುದು! ಆತನ ಭೀಷ್ಮ ಪ್ರತಿಜ್ಞೆ ಎಂಬುದು ಅತ್ಯಂತ ಅಪ್ರಜ್ಞಾವಂತಿಕೆಯಿಂದಲೂ, ಅವಿವೇಕತನದಿಂದಲೂ ಕೂಡಿದ್ದು ದೂರದೃಷ್ಟಿಯಂತೂ ದೂರವೇ ಉಳಿದಿತ್ತು. ಅದರ ಬದ್ಧತೆಗೆ ಅವನ ಮುಂದಿನ ಪೀಳಿಗೆ ನರಳಿತು.

ಭೀಷ್ಮನ ಅಧಿಕ ಪ್ರಸಂಗತನಗಳಿಂದಲೇ ಕುರುವಂಶದ ನಾಶವೆಂಬುದು ಮಹಾಭಾರತದ ಕಥೆಯೇ ನಿದರ್ಶನ. ಅವನ ಹುಚ್ಚಾಪಟ್ಟೆಯ ಪ್ರತಿಜ್ಞೆ, ಯಾರೋ ಮದುವೆಯಾಗಲು ತಾನು ಯಾರನ್ನೋ ಅಪಹರಿಸುವುದು, ಧರ್ಮ, ಕೊಟ್ಟ ಮಾತು ಅಂತೆಲ್ಲಾ ಯಾರಿಗೆಲ್ಲಾ ಏನೇ ಹಿಂಸೆ ಮತ್ತು ಸಮಸ್ಯೆಗಳಾಗುತ್ತಿದ್ದರೂ ಮೌನವಾಗಿರುವುದು ತೋರಿಸುವುದೇನೆಂದರೆ ಅವನು ಮಹಾ ಪೂರ್ವಾಗ್ರಹಪೀಡಿತ ಜಿಡ್ಡಿನ ಮನುಷ್ಯ.

ಉತ್ತರ ದಕ್ಷಿಣ / ಆರ್ಯ ದ್ರಾವಿಡ

ಇರಲಿ, ವಿಷಯಾಂತರವಾಗುವುದು ಬೇಡ. ಇನ್ನು ಉತ್ತರಾಯಣ ಪುಣ್ಯಕಾಲದ ಹಿಂದಿನ ಮತ್ತೊಂದು ಗಲೀಜು ವಿಷಯವನ್ನು ಗಮನಿಸಬೇಕು. ಉತ್ತರವೆಂಬ ಶ್ರೇಷ್ಠ ಮತ್ತು ದಕ್ಷಿಣವೆಂಬ ಕನಿಷ್ಠ. ಉತ್ತರದ ಆರ್ಯರು ದಕ್ಷಿಣದ ದ್ರಾವಿಡರನ್ನು ಕೋತಿಗಳೆಂದು ಕರೆದಿದ್ದಾಗಲಿ, ತಮಗೆಷ್ಟೇ ಸಹಾಯ ಮಾಡಿದರೂ ಸುಗ್ರೀವ, ಹನುಮರನ್ನು ಮತ್ತು ಅವರ ಎಲ್ಲಾ ಜನರನ್ನು ಕಪಿ ಸೈನ್ಯವೆಂದೇ ಕರೆಯುವುದು, ತಾವು ನಿಂತಿರುವ ಅಥವಾ ಕುಳಿತಿರುವ ಆಸನದ ತಳಕ್ಕೆ ಮಾತ್ರವೇ ಹನುಮನಿಗೆ ಸ್ಥಾನಕೊಟ್ಟಿಟ್ಟಿರುವುದು, ದಕ್ಷಿಣದಲ್ಲಿ ಪಾತಾಳ ಅಥವಾ ನರಕವೆನ್ನುವುದು, ಉತ್ತರದಲ್ಲಿ ಮತ್ತು ಹಿಮಾಲಯದಲ್ಲಿ ದೇವತೆಗಳ ಆವಾಸಸ್ಥಾನವೆನ್ನುವುದು ಕಾಕತಾಳೀಯವಲ್ಲ. ಜನಾಂಗೀಯ ಅಸಹನೆಯ ಅವಹೇಳನದ ಅಭಿವ್ಯಕ್ತಿಗಳು.

ಉತ್ತರ ದಕ್ಷಿಣದ ತಾರತಮ್ಯ ಎಂದರೆ ಅದು ಆರ್ಯ ದ್ರಾವಿಡರ ತಾರತಮ್ಯವೆಂದೇ ಅರ್ಥ. ಆದರೂ ಅಗಸ್ತ್ಯ ಋಷಿಯ ದಕ್ಷಿಣಾಗಮನದ ನಂತರದ ಪುರಾಣದ ಕಥೆಗಳಲ್ಲಿ ದಕ್ಷಿಣದಲ್ಲೂ ಪುಣ್ಯ ಕ್ಷೇತ್ರಗಳನ್ನು ಗುರುತಿಸಲಾಯಿತು. ರಾಮಾಯಣದಲ್ಲಿ ರಾಮೇಶ್ವರದ ಉಲ್ಲೇಖವಾಗಲಿ, ಆಂಧ್ರದ ಗೋದಾವರಿ ದಡದಲ್ಲಿರುವ ದಂಡಕಾರಣ್ಯದ ರಾಮನ ವಾಸವಾಗಲಿ ಇದಕ್ಕೆ ವ್ಯತಿರಿಕ್ತವಾಗಿದ್ದರೂ ದಕ್ಷಿಣದ ಬಗ್ಗೆ ಅಸಹನೆ ಉಳಿಸಿಕೊಂಡೇ ಇದ್ದರು. ಒಟ್ಟಾರೆ ದಕ್ಷಿಣವೆನ್ನುವುದು ಅನಾಗರಿಕರ, ರಾಕ್ಷಸರ, ಮುಖ್ಯವಾಗಿ ಅನಾರ್ಯರ ಕ್ಷೇತ್ರ. ಉತ್ತರಕ್ಕೆ ದಕ್ಷಿಣದ ಅನಿವಾರ್ಯತೆ ಬೇಕಾದಾಗಷ್ಟೇ ಉಪಯೋಗಿಸಿಕೊಳ್ಳುವುದು. ಆ ಆರ್ಯರ ದಕ್ಷಿಣದ ಅಸಹನೆ ಇತ್ತೀಚಿನವರೆಗೂ ರಾಷ್ಟ್ರ ರಾಜಕಾರಣದಲ್ಲೂ ಮುಂದುವರೆದಿದ್ದು ಗುಟ್ಟೇನಾಗಿ ಉಳಿದಿಲ್ಲ. ಈಗ 'ಸಾಲಾ ಮದ್ರಾಸಿ'ಗಳು (ದಕ್ಷಿಣದವರು) ತಮ್ಮ ಶಕ್ತಿ ಸಾಮರ್ಥ್ಯ ಮೆರೆದಿದ್ದಾರೆ. ಹಾಗಾಗಿ ಅನಿವಾರ್ಯ ಒಡಂಬಡಿಕೆಯಿಲ್ಲದೇ ಉತ್ತರದವರಿಗೆ ಎಷ್ಟೋ ಕೆಲಸಗಳಾಗದು.

ಇನ್ನು ಅಯ್ಯಪ್ಪನ ಜನ್ಮರಹಸ್ಯದ ಕಡೆಗೆ ದೃಷ್ಟಿ ಹಾಯಿಸೋಣ.

ಹಲವು ಅನಾವರಣಗಳು

ಅಯ್ಯಪ್ಪನ ಕಥೆಯಿಂದ ಕೇರಳ ಮತ್ತು ತಮಿಳು ಮೂಲದ ಅನೇಕ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳು ಬೆಳಕಿಗೆ ಬರುತ್ತವೆ. ಈಗ ಶಬರಿ ಮಲೆ ಸುತ್ತುವರಿದಿರುವ ದಟ್ಟಾರಣ್ಯದಲ್ಲಿ ಇದ್ದಂತಹ ಬುಡಕಟ್ಟಿನ ಅಥವಾ ಅರಣ್ಯವಾಸಿಗಳ ಮತ್ತು ಆರ್ಯರ ಸಂಘರ್ಷದ ಕತೆಗಳನ್ನು ಇದು ಅನಾವರಣ ಮಾಡುತ್ತದೆ.

ಕೊಡಗಿನಲ್ಲಿ ಹುಲಿಯ ಹಾಲನ್ನು ಕರೆದು ತರುವ ಮತ್ತು ಮಕ್ಕಳಿಗೆ ಕುಡಿಸುವ ಅಥವಾ ವೈದ್ಯಕ್ಕೆ ಉಪಯೋಗಿಸುವ ಪದ್ಧತಿಗೂ ಅಯ್ಯಪ್ಪನೆಂಬ ಬಾಲಕನು ಹುಲಿಯ ಹಾಲನ್ನು ಕರೆದುತರಲು ಕಾಡಿಗೆ ಹೋಗಿ ಹೆಣ್ಣುಹುಲಿಯನ್ನು ಅರಮನೆಗೂ ಕರೆತರುವುದಕ್ಕೂ ಸಂಬಂಧವಿಲ್ಲದೇನಿಲ್ಲ.

ಹಾಗೆಯೇ ವೈಷ್ಣವರಿಗೂ ಮತ್ತು ಶೈವರಿಗೂ ನಡೆಯುತ್ತಿದ್ದಂತಹ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಘರ್ಷಗಳು ರಾಜಕೀಯ ರೂಪ ಪಡೆದುಕೊಳ್ಳುವುದಕ್ಕೂ, ಹರಿ ಮತ್ತು ಹರನೆಂಬ ಇಬ್ಬರು ದೇವತೆಗಳು ಒಂದಾಗಿ ಹೊಸ ದೈವವೊಂದು ಉದಯಿಸಿದಕ್ಕೂ ಕಾರಣವಿಲ್ಲದೇನಿಲ್ಲ.

ತಾಯ್ಯಾಳಿಕೆ ಅಥವಾ ಮಾತೃಪ್ರಧಾನ ಸಂಸ್ಕೃತಿಯನ್ನು ಪ್ರಧಾನವಾಗಿ ಹೊಂದಿದ್ದ ಕೇರಳ ಮತ್ತು ತಮಿಳುನಾಡುಗಳ ಭಾಗಗಳಲ್ಲಿ ಪಿತೃಪ್ರಧಾನ ಸಮಾಜವು ತನ್ನ ಅಧಿಪತ್ಯ ಸಾಧಿಸುವುದಕ್ಕೂ, ಹೆಣ್ಣಿಲ್ಲದೇ, ವಿಷ್ಣುವು ಮೋಹಿನಿಯ ರೂಪವನ್ನು ತಾಳಿದಾಗ ಶಿವನು ಮೋಹಿಸಿ ಹುಟ್ಟಿದ ಮಗುವಿನ ರೂಪಕದಲ್ಲಿ ಅಧ್ಯಯನವಿಲ್ಲದೇ ಇಲ್ಲ.

ಶಬರಿ ಎಂಬ ಬೇಡ ಮಹಿಳೆ

ಧರ್ಮಶಾಸ್ತ್ರವೆಂಬ ತಾಪಸಿಯು ಶಬರಿಯಿಂದ ರಾಮ ಲಕ್ಷ್ಮಣರಿಗೆ ಪರಿಚಿತವಾಗುವುದಕ್ಕೂ, ಆರ್ಯ ಮತ್ತು ದಕ್ಷಿಣ ಬುಡಕಟ್ಟು ಜನರ ನಡುವೆ ನಡೆದಂತಹ ಸಂವಹನ ಮತ್ತು ಸಂಘರ್ಷಗಳಿಗೂ ಸಂಬಂಧವಿಲ್ಲದೇನಿಲ್ಲ. ಆದರೆ ಇದು ನಡೆದಿದ್ದು ರಾಮಾಯಣದ ಕಾಲದಲ್ಲಾಗಿದ್ದರೆ, ಆಗ ಅಯ್ಯಪ್ಪನೆಂಬುವ ದೈವ ಇದ್ದಿಲ್ಲ. ಏಕೆಂದರೆ ವೇದಗಳಲ್ಲಾಗಲಿ, ಇತರ ಪ್ರಾಚೀನ ವೈದಿಕ ಕೃತಿಗಳಲ್ಲಾಗಲಿ, ಅಷ್ಟೇ ಏಕೆ ರಾಮಾಯಣ ಮಹಾಭಾರತಗಳಂತಹ ಕಾವ್ಯಗಳಲ್ಲಾಗಲಿ ಅಯ್ಯಪ್ಪನ ಅಥವಾ ಮಣಿಕಂಠನ ಉಲ್ಲೇಖವಿಲ್ಲ. ಪ್ರಧಾನ ಪುರಾಣಗಳಲ್ಲೂ ಇಲ್ಲದವನು ಈ ಅಯ್ಯಪ್ಪ ಜಾನಪದದಲ್ಲಿ ಗುರುತುಗಳನ್ನು ಮೂಡಿಸಿದ್ದಾನೆ. ಆದರೆ, ಅವನ ಸ್ಥಾನ ಗಣಪತಿ, ಮುರುಗ ಮತ್ತು ನಂತರದ ಶಿವನ ಮಗನಾಗಿ ಗುರುತಿಸಲ್ಪಡುವುದಕ್ಕೆ ಮುಖ್ಯ ಕಾರಣ ಅವನು ಬುಡಕಟ್ಟಿನ ಗಣದವನಾಗಿರುವುದಷ್ಟೇ ಅಲ್ಲ, ಶಿವನ ಗುರುತು ಶಬರರ ಮೂಲದಲ್ಲಿರುವುದಕ್ಕೆ. ಶಬರಿ ಎಂಬುದು ಆಕೆಯ ಹೆಸರಲ್ಲ, ಬೇಟೆಗಾರ್ತಿ. ಬೇಡರ ಕುಲದ ಹೆಣ್ಣಾಕೆ. ಹಾಗಾಗಿ ಅವನಿಗೂ ಬೇಡರ ಶಿವನ ಮಕ್ಕಳಲ್ಲಿ ಸ್ಥಾನ. ಧರ್ಮಶಾಸ್ತ್ರನೆಂಬ ಆ ತಾಪಸಿಯು ಅಯೋಧ್ಯೆಯ ರಾಮ ಲಕ್ಷ್ಮಣರನ್ನು ಕಂಡ ಮೇಲೆ ತನ್ನ ತಪಸ್ಸನ್ನು ನಿಲ್ಲಿಸಿ ತನ್ನ ಭಕ್ತರಿಗೆ ಆಶೀರ್ವದಿಸಲು ನಿಂತನಂತೆ. ಅದರ ಸ್ಮರಣೆಯ ಆಚರಣೆಯೇ ಮಕರ ವಿಳಕ್ಕು ಎಂದು ಹೇಳುತ್ತಾರೆ.

ಒಟ್ಟಾರೆ ರಾಮಾಯಣ ಕಾಲದ ಧರ್ಮಶಾಸ್ತ್ರನೆಂಬ ತಾಪಸಿಯು ಈ ಸ್ವಾಮಿ ಅಯ್ಯಪ್ಪನು ಒಂದೇ ಅಲ್ಲ ಎಂದಾಯಿತು. ಹಾಗಾದರೆ ಈ ಅಯ್ಯಪ್ಪನು ಎಷ್ಟು ಕಾಲದ ಹಿಂದಿನವನಿದ್ದಿರಬಹುದು? ಕೆ.ವೀರಮಣಿ ತಮಿಳಿನಲ್ಲಿ ಭಕ್ತಿಗೀತೆಗಳನ್ನು ಹಾಡಿ ಅಯ್ಯಪ್ಪನ ಕಥೆ ಮತ್ತು ಭಕ್ತಿಯನ್ನು ಎಲ್ಲೆಡೆ ಹರಡಿದ್ದಕ್ಕಿಂತ, ಡಾ. ರಾಜ್‌ಕುಮಾರ್ ಅಯ್ಯಪ್ಪ ಸ್ವಾಮಿಯ ಭಕ್ತಿಗೀತೆಗಳನ್ನು ಹಾಡಿ ಕನ್ನಡದ ಭಕ್ತ ಜನರನ್ನು ಕೇರಳದ ಕಡೆ ನಡೆಯುವಂತೆ ಮಾಡುವುದಕ್ಕಿಂತ ಹಳೆಯದೆಂಬುದೇನೋ ನಿಜ. ಆದರೆ ಭಕ್ತಿಗೆ ಸ್ಟಾರ್‌ಗಿರಿ ಲೇಪವಾಗುತ್ತಿದ್ದಂತೆ, ದೇವಾಲಯದ ಆದಾಯ ಯದ್ವಾಬದ್ವಿ ಹೆಚ್ಚಿತು. 2010ರಲ್ಲಿ (ಮಕರ ವಿಳಕ್ಕು ಮತ್ತು ಮಕರ ಜ್ಯೋತಿಯ ವ್ಯತ್ಯಾಸ ತಿಳಿಯುವ ಅವಧಿಯಲ್ಲಿಯೇ) ಸುಮಾರು 1.5 ಮಿಲಿಯನ್ ಭಕ್ತರು ಸಾಕ್ಷೀಕರಿಸಿದರೆಂದು ಹೇಳುತ್ತಾರೆ. 2008ರಲ್ಲಿ 720 ಮಿಲಿಯನ್ ರುಪಾಯಿಗಳು ಕಾಣಿಕೆಯಾಗಿ ಲಭಿಸಿದರೆ, ಅದರ ಹಿಂದಿನ ವರ್ಷ 723 ಮಿಲಿಯನ್ ಹಣ ಸಂಗ್ರಹವಾಗಿತ್ತು.

ಅದಕ್ಕೇ ಅಲ್ಲವೇ ಪೊನ್ನಂಬಲಂ ಮೇಡಿನಲ್ಲಿ ಅಲ್ಲಿನ ಬುಡಕಟ್ಟಿನ ಜನ ತಮ್ಮ ಆಚರಣೆಯ ದೀಪ ಹಚ್ಚುವುದನ್ನು ತಮ್ಮದೆಂಬಂತೆ ಬಿಂಬಿಸಿದ್ದು ನಂತರ ನಿಜದ ಅನಾವರಣವಾದ ಮೇಲೆ ತಮಗೂ ಅದಕ್ಕೂ ಏನೂ ಸಂಬಂಧವಿಲ್ಲವೆಂದು ಹೇಳಿದ್ದು.

ಅದೇನೇ ಇರಲಿ, ಅಯ್ಯಪ್ಪನ ಜನ್ಮ ರಹಸ್ಯ ತುಂಬಾ ಸ್ವಾರಸ್ಯಕರ. ಅದೇನೆಂದು ಮುಂದೆ ನೋಡೋಣ. ■

ಬಿಟಿ ಹತ್ತಿ ಬೆಳೆದ ರೈತರಿಗೆ ತುರ್ತು ಪರಿಹಾರ ಸಿಗಲಿ

ಗೌರಿ ಲಂಕೇಶ್ ಪತ್ರಿಕೆ ಜನವರಿ 20, 2016ರ ಸಂಚಿಕೆಯ ಕೆ.ಎನ್. ವಿನೋದ್ ಅವರ ಲೇಖನ 'ಬಿಟಿ ಹತ್ತಿ ಬೆಳೆದು ಬೀದಿಗೆ ಬಿದ್ದ ಅನ್ನದಾತ' ಎಂಬುದು ರೈತಪರ ಚಿಂತಕರ ಎದೆ ನಡುಗಿಸುತ್ತದೆ. ಏಕೆಂದರೆ ಇದರಿಂದ ಇನ್ನೆಷ್ಟು ರೈತ ಆತ್ಮಹತ್ಯೆಗಳು ಸಂಭವಿಸುತ್ತವೊ ಎಂದು. ಕರ್ನಾಟಕ, ತೆಲಂಗಾಣ ಮತ್ತು ಆಂಧ್ರ ಪ್ರದೇಶ ರಾಜ್ಯಗಳ ಎರೆಭೂಮಿಯಲ್ಲಿ ಈ ಸಲ ಮುಂಗಾರಿನಲ್ಲಿ ಬಿತ್ತಿದ ಮನ್ಸಾಂಟೋ ಕಂಪನಿಯ ಬಿಟಿ ಹತ್ತಿ ಬೀಜ ಹುಟ್ಟಿ ಬೆಳೆದು ಒಳ್ಳೆ ಬೆಳೆಯೇನೋ ಕಂಡಿತು. ಆದರೆ 'ಕೈಗೆ ಬಂದದ್ದು ಜೇಬಿಗೆ ಬರಲಿಲ್ಲ' ಎಂಬಂತೆ ಶೇಕಡ 90 ಭಾಗದಷ್ಟು ಕಾಯಿಗಳು 'ಗುಲಾಬಿ ಕಾಯಿ ಕೊರಕ' ಹುಳು ಬಿದ್ದು ಒಳಗೊಳಗೆ ಹಾಳು ಮಾಡಿರುವುದರಿಂದ ಲಕ್ಷಾಂತರ ಸಾಲ ಮಾಡಿ ಬೀಜ, ಗೊಬ್ಬರ, ಔಷಧ ತಂದು ಹಾಕಿ ದುಡಿದು ಬೆಳೆದ ರೈತ ತಲೆಗೆ ಕೈಕೊಟ್ಟು ಕೂರುವಂತ ಪರಿಸ್ಥಿತಿ ಬಂದಿದೆ. ಇದನ್ನು ಲೇಖಕ ವಿನೋದ್ ರಾಯಚೂರು ಜಿಲ್ಲೆಯಲ್ಲಿ ಸುತ್ತಾಡಿ, ಪ್ರತ್ಯಕ್ಷ ಕಂಡು, ಪ್ರಮಾಣಿಸಿ ನೋಡಿ ಮುಂಬರುವ ರೈತರ ಕರಾಳ ಭವಿಷ್ಯವನ್ನು ತೆರೆದಿಟ್ಟಿದ್ದಾರೆ. ಈ ಮನ್ಸಾಂಟೋ ಬೀಜದ ಬಗ್ಗೆ ಪ್ರೊ. ನಂಜುಂಡಸ್ವಾಮಿಯವರು ಬಹಳ ಹಿಂದೆಯೇ ಪ್ರತಿಭಟಿಸಿದ್ದರು. ಆದರೂ ಬೀಜ ಗೊಬ್ಬರ ಔಷಧಿ ಕಂಪನಿಗಳ ಲಾಬಿ ಅವರ ಮಾತನ್ನು ಕಿವುಡುಗೇಳುವಂತೆ ಸಂಚು ಮಾಡಿತು.

ಪ್ರಸ್ತುತ ಇಂಥ ಪ್ರಮಾದಕ್ಕೆ ಕಾರಣ ಯಾರು? ಮನ್ಸಾಂಟೋ ಕಂಪನಿಯೇ? ಇದೇ ಬೀಜ ಶಿಫಾರಸ್ಸು ಮಾಡಿದ ಕೃಷಿ ತಜ್ಞರೆ? ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳೇ? ಯಾರು ಹೊಣೆ? ಆದರೆ ಇವತ್ತಿನ ವ್ಯವಸ್ಥೆಯಲ್ಲಿ ಇವರ‍್ಯಾರೂ ಹೊಣೆ ಹೊರುವುದಿಲ್ಲ. ಬೀಜ ಕಾಯದೆ ಮತ್ತು ಪರಿಹಾರಕ್ಕೆ ಸಂಬಂಧಿಸಿದಂತೆ ನಷ್ಟಾನುಭವಿಗಳು ಕೋರ್ಟಿಗೆ ಹೋಗಬಹುದಾದರೂ ಆ ಕೇಸುಗಳು 'ಕೊಂಕಣ ಸುತ್ತಿ ಮೈಲಾರಕ್ಕೆ ಬರುವಷ್ಟರಲ್ಲಿ' ಸಾಲ ಬಾಧೆ ತಾಳಲಾರದ ರೈತರ ಪ್ರಾಣ ಪಕ್ಷಿಗಳು ಸಾಲು ಮರದ ಕೊಂಬೆಗೆ ನೇಣು ಬೀಳುತ್ತವೆ.

ನಾಲ್ಕೈದು ವರ್ಷಗಳ ಹಿಂದೆ ಗುಜರಾತಿನಲ್ಲಿ ಇಂಥದೇ ಸಮಸ್ಯೆ ಉದ್ಭವಿಸಿದಾಗ ಅಲ್ಲಿನ ತಜ್ಞರ ಸಮಿತಿ ಮಳೆ ನೀರು ಆಧಾರಿತ ಭೂಮಿಗೆ ಬಿಟಿ ಹತ್ತಿ ಬಿತ್ತಬೇಡಿ ಎಂದು ಎಚ್ಚರ ನೀಡಿದೆ. ಆ ತಿಳಿವಳಿಕೆ ನಮ್ಮ ರಾಜ್ಯದ ಕೃಷಿ ತಜ್ಞರ ಅರಿವಿಗೆ ಬರಲಿಲ್ಲ. ಇದು ರಾಜ್ಯ ಸರ್ಕಾರದ ವೈಫಲ್ಯ ಕೂಡ.

ಆದರೂ ಇದೇ ಸಂದರ್ಭದಲ್ಲಿ ಕಾಕತಾಳೀಯವೆಂಬಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು 'ನಮ್ಮದು ಪಂಚಾಯತ್ ರಾಜ್ ಕಾಯದೆಯನ್ನು ಜಾರಿಗೊಳಿಸಿ ಗಾಂಧೀಜಿ ಕನಸು ನನಸು ಮಾಡಿದ ಧನ್ಯತೆ'ಯ ಸರ್ಕಾರವೆಂದು (ಪ್ರ.ವಾ. 8.1.2016) ಜಾಹಿರಾತಿನಲ್ಲಿ ಹೆಮ್ಮೆಪಟ್ಟುಕೊಳ್ಳುತ್ತಿರುವುದು ವ್ಯಂಗ್ಯವೆನಿಸಿದೆ. ಇವರು ಮೊದಲು ಸಾಲಗಾರ ರೈತರಿಗೆ (ಕಬ್ಬು ಬೆಳೆಗಾರ, ಬಿಟಿ ಹತ್ತಿ ಬೆಳೆಗಾರ ಇತ್ಯಾದಿ) ಪರಿಹಾರ ಧನಬಿಡುಗಡೆ ಮಾಡಲಿ. ಆಮೇಲೆ ಗಾಂಧಿ ಗ್ರಾಮ ಸ್ವರಾಜ್ಯದ ಮಾತಾಡಲಿ. ಆಗ ಕಿಮ್ಮತ್ತು ಬರುತ್ತೆ ಇಲ್ಲವಾದರೆ ಇದು ಕೇವಲ ರಾಜಕೀಯ ಉಡಾಫೆ ಮಾತು ಎಂದು ಜನ ಆಡಿಕೊಳ್ಳುತ್ತಾರೆ.

- ಪ್ರೊ. ಶಿವರಾಮಯ್ಯ, ಬೆಂಗಳೂರು

ಯೋಧನೊಬ್ಬನಿಗೆ ನಿಜವಾದ ಸಲಾಂ

ಯೋಧನೊಬ್ಬನ ಬಗ್ಗೆ ಯೋಗ್ಯವಾದವರಿಗೆ ಮಾತ್ರ ಬರೆಯಲಿಕ್ಕೆ ಸಾಧ್ಯ ಎಂದು ತೋರಿಸಿಕೊಟ್ಟಿದ್ದು ಗೌರಿ ಲಂಕೇಶ್ ಪತ್ರಿಕೆ. ಪತ್ರಿಕೆ ಓದುಗರ ಮನಮುಟ್ಟಿತು. ಸೈನಿಕನೊಬ್ಬನ ಜೀವನವನ್ನು ಗ್ರಹಿಸುವುದು ಸುಲಭದ ಮಾತಲ್ಲ, ಡಾ ಸೋಮನಾಥ ಆ ಕೆಲಸವನ್ನು ತುಂಬಾ ಚೆನ್ನಾಗಿ ನಿರ್ವಹಿಸಿದ್ದಾರೆ. ನಿರಂಜನ್ ಕುಮಾರ ಅವರ ಕೊನೆಯಕ್ಷಣಗಳನ್ನು ಕಣ್ಣೆದುರಿಗೆ ನಡೆಯುತ್ತಿದೆಯೇನೊ ಎನ್ನುವಂತೆ ರೂಪಿಸಿದ್ದಾರೆ. ನಿರಂಜನ್ ಅವರ ಬಗ್ಗೆ ನಮಗಿದ್ದ ಜ್ಞಾನವನ್ನು ಹೆಚ್ಚಿಸಿ ಅವರ ಬಗ್ಗೆ ಇನ್ನು ಹೆಚ್ಚು ಗೌರವವನ್ನು ಮೂಡಿಸುವಂತೆ ಮಾಡಿದ್ದಾರೆ. "ನಿಜವಾದ ಹರ್ಟ್ ಲಾಕರ್ ನಿರಂಜನ್ ಕುಮಾರ್" ಎನ್ನುವ ಅವರ ಮಾತುಗಳು ಅಕ್ಷರಶಃ ಸತ್ಯ. ಯೋಧರ ಜೀವನ ಹೂವಿನ ಹಾಸಿಗೆಯಲ್ಲ ಎನ್ನುವುದು ನಿರಂಜನ್ ಕುಮಾರ್ ಅವರ ಕುರಿತಾದ ಲೇಖನ ಓದಿದಾಗ ಅನಿಸುತ್ತದೆ.

ಇನ್ನೂ ಗೌರಕ್ಕ ತಮ್ಮ 'ಕಂಡಹಾಗೆ'ಯಲ್ಲಿ ಮೋದಿಯ ದ್ವಿಮುಖವನ್ನು ತೋರಿಸಿಕೊಡುವ ಪ್ರಯತ್ನ ಮಾಡಿದ್ದಾರೆ. ಯೋಧರನ್ನು ಮುಂದಿಟ್ಟುಕೊಂಡೆ ಅವರ ಹೆಸರನ್ನು ಬಳಸಿಕೊಂಡೆ ಅಧಿಕಾರಹಿಡಿದ ಮೋದಪ್ಪ ಯೋಧರಿಗೆ ಏನೂ ಮಾಡಿಲ್ಲ, ಯೋಗದ ಕುರಿತು ಟ್ವೀಟ್ ಮಾಡುತ್ತಿದ್ದನೆ ಹೊರತು ನಿರಂಜನ್ ಕುಮಾರ್ ಅವರಂತಹ ಸಾವಿರಾರು ಯೋಧರನ್ನು ರಕ್ಷಿಸುವ ತಂತ್ರಜ್ಞಾನದ ಬಗ್ಗೆಯಾಗಲೀ ಅಥವಾ ಪುಂಡಾಟಿಕೆ ಮಾಡುತ್ತಿರುವ ಪಾಕಿಸ್ತಾನಕ್ಕೆ ಆತನೇ ಹೇಳಿದಂತೆ ಖಡಕ್ ಉತ್ತರವಾಗಲೀ ನೀಡಲು ಸಿದ್ಧನಿಲ್ಲ. ಹೋದಾ ಪುಟ್ಟ ಬಂದಾ ಪುಟ್ಟ ಅನ್ನುವಂತೆ ದೇಶವಿದೇಶ ಸುತ್ತಿ ಪ್ರಜೆಗಳನ್ನು ತಲೆತಿರುಗಿ ಬೀಳುವಂತೆ ಮಾಡುವುದು ಪ್ರಧಾನಿಗಳಿಗೆ ಗೌರವವೇ? ಮೋದಿಯ ಶೋಕಿಗೆ ಇವತ್ತು ದೇಶವೇ ಶೋಕಭರಿತವಾಗುತ್ತಿದೆ ಎನ್ನಬಹುದಲ್ಲವೇ?

-ಡಾ.ಅಭಿನಂದನ ಬಳ್ಳಾರಿ, ಬೆಂಗಳೂರು



ಕಲ್ಲಡ್ಕ ಭಟ್ಟನ ಅವಾಂತರಗಳಿಗೆ ಕಡಿವಾಣ ಹಾಕಬೇಕಿದೆ

ಪ್ರತಿಯೊಂದು ಹಿಂದೂ ಸಮಾಜೋತ್ಸವದಲ್ಲಿಯೂ ದಕ್ಷಿಣ ಕನ್ನಡದ ಕೇಸರಿ ಮುಖಂಡ ಪ್ರಭಾಕರ ಕಲ್ಲಡ್ಕ ಭಟ್ಟ ಮುಸ್ಲಿಮರ ಸುನ್ನತ್ ವಿಧಿಯನ್ನು ಅಪಹಾಸ್ಯ ಮಾಡಿ ಸಭಿಕರಿಂದ ಚಪ್ಪಾಳೆ ಗಿಟ್ಟಿಸುವುದನ್ನು ಮರೆಯುವುದಿಲ್ಲ. ಈತ ಎಷ್ಟೇ ಪ್ರಚೋದಕ ಭಾಷಣ ಮಾಡಿದರೂ ನಮ್ಮ ಪೊಲೀಸರು ಮಾತ್ರ ಈತನ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಳ್ಳುವುದಿಲ್ಲ.

ಕಳೆದ ಡಿಸೆಂಬರ್ ತಿಂಗಳ ಕೊನೆಯಲ್ಲಿ ಹೊಸಪೇಟೆಯಲ್ಲಿ ಒಬ್ಬ ಮುಸ್ಲಿಂ ಫೋಟೋಗ್ರಾಫರನ ಹೆಸರಲ್ಲಿ ಸಂಘ ಪರಿವಾರದವರೇ ಹಿಂದೂಗಳ ವಿರುದ್ಧ ಪ್ರಚೋದಕ ಕರಪತ್ರ ಮುದ್ರಿಸಿ ಕೋಮು ಗಲಭೆ ಸೃಷ್ಟಿಸಿದ್ದನ್ನು ಚರ್ಚಿಸಲು ಕರ್ನಾಟಕ ಕೋಮು ಸೌಹಾರ್ದ ವೇದಿಕೆಯವರು ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಭೇಟಿಯಾಗಿದ್ದರು. ಆಗ ಕಲ್ಲಡ್ಕದ ಆರ್‌ಎಸ್‌ಎಸ್ ಮುಖಂಡನ ನೀಚ ಕೋಮು ಪ್ರಚೋದಕ ಚಟುವಟಿಕೆಯ ಬಗ್ಗೆಯೂ ಕೋ.ಸೌ.ವೇ.ಯವರು ಮುಖ್ಯಮಂತ್ರಿಗಳ ಗಮನ ಸೆಳೆದಿದ್ದರು. ಅಂದು ಸಿದ್ದರಾಮಯ್ಯನವರು ತಾವು ಕರಾವಳಿಯಲ್ಲಿಯ ಸಂಘಪರಿವಾರದವರ ಎಲ್ಲ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು ಇನ್ನು ಒಂದೇ ಒಂದು ಸಭೆಯಲ್ಲೂ ಕಲ್ಲಡ್ಕದ ಮುಖಂಡ ಕೋಮು ಪ್ರಚೋದಕ ಭಾಷಣ ಮಾಡಿದರೆ ಸಾಕು ಅವನ ಮೇಲೆ ಗೂಂಡಾ ಕಾಯ್ದೆ ಹಾಕುವಂತೆ ದ.ಕ. ಜಿಲ್ಲಾ ಪೊಲೀಸ್ ಮುಖ್ಯಸ್ಥರಿಗೆ ಆದೇಶ ಕೊಡುವುದಾಗಿ ಕೋ.ಸೌ.ವೇ.ಗೆ ವಾಗ್ದಾನ ಮಾಡಿದ್ದರು.

ಆದರೆ ಮೊನ್ನೆ ಭಾನುವಾರ ಜನವರಿ ಮೂರರಂದು ಉಡುಪಿಯ ಹಿರಿಯಡ್ಕದಲ್ಲಿ ನಡೆದ ಹಿಂದೂ ಸಮಜೋತ್ಸವದಲ್ಲಿ ಕಲ್ಲಡ್ಕ ಪ್ರಭಾಕರ್ ಭಟ್ಟ ಹೀನ ಕೋಮು ಪ್ರಚೋದಕ ಭಾಷಣ ಕೊಟ್ಟರೂ ಮುಖ್ಯಮಂತ್ರಿಗಳು ತಮ್ಮ ವಾಗ್ದಾನದಂತೆ ದ.ಕ. ಪೊಲೀಸರಿಗೆ ಇನ್ನೂ ಯಾಕೆ ಈತನನ್ನು ಗೂಂಡಾ ಕಾಯ್ದೆಯಡಿ ಬಂಧಿಸಲು ಆದೇಶಿಸಿಲ್ಲ?

ಉಡುಪಿಯಲ್ಲಿ ಕಲ್ಲಡ್ಕ ಭಟ್ಟ ಹೇಳಿದ್ದೇನೆಂದರೆ - "ಹಿಂದೂಗಳಲ್ಲಿ ಕಿವಿ ತೂತು ಮಾಡುವುದಕ್ಕೆ ಮೂಢನಂಬಿಕೆ ಪ್ರತಿಬಂಧಕ ಕಾಯ್ದೆ ಅನ್ವಯ ಆಗುವುದಾದರೆ ಚರ್ಮದ ತುಂಡು ಹೋಗುವುದಕ್ಕೆ ಮೂಢನಂಬಿಕೆ ಪ್ರತಿಬಂಧಕ ಕಾಯ್ದೆ ಯಾಕೆ ಅನ್ವಯವಾಗುವುದಿಲ್ಲ?" ಎಂದು ಮುಸ್ಲಿಮರನ್ನು ಗುರಿಮಾಡಿ ಲೇವಡಿ ಮಾಡಿದ್ದನು. ಇದು ನೀಚ ಕೋಮು ಪ್ರಚೋದನೆ ಅಲ್ಲವೇ? ಕಾರಣ ಕಿವಿ ತೂತನ್ನು ನಿಷೇಧಿಸುವ ಯಾವುದೇ ಕಾನೂನು ಈಗ ಸರಕಾರ ತಯಾರಿಸುತ್ತಿರುವ ಮೌಢ್ಯ ಪ್ರತಿಬಂಧಕ ಮಸೂದೆಯ ಕರಡು ಪ್ರತಿಯಲ್ಲಿ ಇಲ್ಲವೇ ಇಲ್ಲ. ಇದು ಕಲ್ಲಡ್ಕ ಭಟ್ಟನಿಗೂ ಸರಿಯಾಗಿ ಗೊತ್ತಿದೆ. ಆದರೂ ಅವನು ಹೀಗೆ ಹಸಿ ಹಸಿ ಸುಳ್ಳು ಹೇಳಿಕೆ ಕೊಟ್ಟು ಸಾಮಾನ್ಯ ಜನರನ್ನು ತಪ್ಪು ದಾರಿಗೆಳೆಯುತ್ತಿರುವುದು ಅವನ ಶತನೀಚ ಹುನ್ನಾರಕ್ಕೆ ಸಾಕ್ಷಿ.

ನಿಜವಾಗಿ ಕೇವಲ ಹಿಂದೂಗಳು ಮಾತ್ರವಲ್ಲ ಭಾರತೀಯ ಕ್ರೈಸ್ತ ಗಂಡಸರಲ್ಲೂ ಹಲವರು ಕಿವಿ ಚುಚ್ಚಿಸಿಕೊಳ್ಳುತ್ತಾರೆ. ಹಿಂದೂ ಮತ್ತು ಕ್ರೈಸ್ತ ಮಹಿಳೆಯರು ಪ್ರತಿಯೊಂದು ಕಿವಿಗೆ ಕೇವಲ ಒಂದೊಂದೇ ತೂತು ಮಾಡಿಸಿಕೊಂಡರೆ ಮುಸ್ಲಿಮ್ ಹೆಂಗಸರು ಒಂದೊಂದು ಕಿವಿಗೂ ಮೂರು ನಾಲ್ಕು ತೂತು ಮಾಡಿಸಿಕೊಳ್ಳುತ್ತಾರೆ. ಎಲ್ಲ ಧರ್ಮದ ಹೆಂಗಸರೂ ಮೂಗು ಚುಚ್ಚಿಸಿಕೊಳ್ಳುತ್ತಾರೆ. ಆದಕ್ಕಾಗಿ ಹೆಂಗಸರು ಕಿವಿ-ಮೂಗು ಚುಚ್ಚಿಸಿಕೊಳ್ಳುವುದನ್ನೂ ಸರಕಾರ ಪ್ರತಿಬಂಧಿಸುತ್ತಿದೆ ಎಂಬ ಕುತ್ಸಿತ ಹೇಳಿಕೆ ಕಲ್ಲಡ್ಕ ಭಟ್ಟ ಕೊಡಲಿಲ್ಲ. ಕೇವಲ ಗಂಡಸರು ಕಿವಿ ಚುಚ್ಚಿಸುವ ಬಗ್ಗೆ ಅವನು ಹೇಳಿರುವುದು ಅವನ ದೂರಗಾಮಿ ಕುತಂತ್ರಕ್ಕೆ ಸಾಕ್ಷಿ. ಗಂಡಸರು ಕಿವಿ ಚುಚ್ಚಿಸಿಕೊಳ್ಳುವುದು ಮೂಲ ಹಿಂದೂ ಪದ್ಧತಿ ಎನ್ನುವುದು ಶುದ್ಧ ತಪ್ಪು. ಭಾರತೀಯ ಆದಿವಾಸಿಗಳು ಹಿಂದೂಗಳಾಗಿರಲಿಲ್ಲ. ನಮ್ಮ ಆದಿವಾಸಿಗಳಿಂದಲೇ ಹೊರಗಿನಿಂದ ಬಂದ ಆರ್ಯರು ಕಿವಿ ಚುಚ್ಚಿಸುವ ಪದ್ಧತಿ ಅನುಕರಿಸಿದ್ದು. ಕಿವಿ ಮೂಗು ತುಟಿ ಹುಬ್ಬು ಹೊಕ್ಕಳು ಚುಚ್ಚಿ ಅಲಂಕಾರಿಕ ಲೋಹದ ಅಥವಾ ಎಲುಬಿನ ಆಭರಣ ನೇತಾಡಿಸುವ ಪದ್ಧತಿ ದಕ್ಷಿಣ ಅಮೆರಿಕದ ಮೂಲ ನಿವಾಸಿಗಳಾದ ಮಾಯಾ ಮತ್ತು ಇಂಕಾ ಜನಾಂಗಗಳ ಗಂಡಸರಲ್ಲೂ ಆದಿ ಕಾಲದಿಂದ ಇತ್ತು, ಅವರು ಮೂಗಿನ ನಡುವಿನ ಹೊಳ್ಳೆ, ಕಿವಿ ಹಾಗೂ ಕೆಳ ತುಟಿ ಇವುಗಳನ್ನು ತೂತು ಮಾಡಿ ದೊಡ್ಡ ಎಲುಬಿನ ಉಂಗುರ ತೊಡಿಸುತ್ತಿದ್ದರು. ಪುರಾತನ ಈಜಿಪ್ಟ್‌ನಲ್ಲಿಯೂ ಗಂಡಸರು ಕಿವಿ ಮೂಗು ತೂತು ಮಾಡುವ ಪದ್ಧತಿಯಿತ್ತು, ಬೌದ್ಧ ದೇಶಗಳಲ್ಲೂ ಗಂಡಸರು ಕಿವಿ ಚುಚ್ಚಿಸುವ ಪದ್ಧತಿಯಿದೆ.

ಕಿವಿ ತೂತು ಸಹ ಅಕ್ಯೂಪಂಕ್ಚರ್ ಚಿಕಿತ್ಸಾಕ್ರಮ ಆಗಿದ್ದು ಚೀನಿಯರು ಅಕ್ಯೂಪಂಕ್ಚರ್ ಕಲಿತಿದ್ದು ಭಾರತೀಯರಿಂದಲೇ ಎಂದು ಸಾಬೀತಾಗಿದೆ ಎಂಬುದಾಗಿ ಒಬ್ಬ ಕೇಸರಿ ಕುವಿಜ್ಞಾನಿ ಹಿಂದೂತ್ವ ಪತ್ರಿಕೆಯಲ್ಲಿ ಘೋಷಿ ಬಿಟ್ಟಿದ್ದಾನೆ. ಜಗತ್ತಿನ ಎಲ್ಲಾ ಜ್ಞಾನವೂ ಭಾರತೀಯರಿಂದಲೇ ಶುರುವಾಗಿದ್ದು ಎಂಬ ಕುತರ್ಕದ ಲೇಖನಗಳನ್ನು ಬರೆದು ಭಾರತದ ಎಲ್ಲಾ ಭಾಷೆಯ ಪತ್ರಿಕೆಗಳಲ್ಲೂ ಪ್ಲಾಂಟ್ ಮಾಡಬೇಕೆಂದು ಚೆಡ್ಡಿಗಳ ನಾಗಪುರ ಹೆಡ್ ಆಫೀಸಿನಿಂದ ಎಲ್ಲಾ ಹಿಂದೂತ್ವ ಲೇಖಕರಿಗೆ ಆದೇಶ ಹೋಗಿದೆಯಂತೆ.


ಕಳೆದ ವಾರ ನಮ್ಮ ಮೈಸೂರಿನಲ್ಲಿ ನಡೆದ 103ನೇಯ ಭಾರತೀಯ ವಿಜ್ಞಾನ ಕಾಂಗ್ರೆಸ್ಸಿನಲ್ಲಿ ಪ್ರಸ್ತುತಪಡಿಸಿದ ವೈದಿಕ ಕುವಿಜ್ಞಾನಗಳ ಪ್ರಬಂಧಗಳನ್ನು ಓದಿದಾಗ ಇವರ ಆಳ-ಅಗಲದ ಅಂದಾಜು ಸಿಗುತ್ತದೆ. ವೈಷ್ಣವರು ಮಕ್ಕಳಿಗೆ ವರ್ಷಕ್ಕೊಮ್ಮೆ ಬಿಸಿ ಲೋಹದಿಂದ ಬರೆ ಕೊಟ್ಟು ಚರ್ಮ ಸುಡುವ ತಪ್ತಮುದ್ರೆ ಎಂಬ ಪದ್ಧತಿಯನ್ನೂ ಕರ್ನಾಟಕ ಸರಕಾರ ಮೌಢ್ಯ ಪ್ರತಿಬಂಧಕದಡಿ ನಿಷೇಧಿಸುತ್ತದೆ ಎಂಬ ಇನ್ನೊಂದು ವದಂತಿ ಚೆಡ್ಡಿಗಳು ಹರಿಯಬಿಟ್ಟು ಹಿಂದೂಗಳನ್ನು ಪ್ರಚೋದಿಸುತ್ತಿದ್ದಾರೆ.

ಹಿಂದಿನ 35 ವರ್ಷದಿಂದ ಅಮೆರಿಕದಲ್ಲಿ ನೆಲೆಸಿರುವ ನನ್ನ ಒಬ್ಬ ಡಾಕ್ಟರ್ ಮಿತ್ರ ಹೇಳಿರುವಂತೆ - ಅಮೆರಿಕದಲ್ಲಿ ಹುಟ್ಟಿದ ಗಂಡು ಮಗುವಿನ ಪಾಲಕರು ಕ್ರೈಸ್ತ ಮುಸ್ಲಿಂ ಬೌದ್ಧ ಹಿಂದೂ ಹೀಗೆ ಯಾವುದೇ ಧರ್ಮದವರಿರಲಿ ಮಗು ಹುಟ್ಟಿದ ಮರುದಿನವೇ ಮಕ್ಕಳ ತಜ್ಞರು ಗಂಡುಮಗುವಿನ ಮುಂದೊಗಲು ಕತ್ತರಿಸುವುದು ಸಾಮಾನ್ಯ. ಮಗುವಿನ ಭವಿಷ್ಯದ ಆರೋಗ್ಯದ ದೃಷ್ಟಿಯಿಂದ ಅಲ್ಲಿಯ ಜನಸಂಖ್ಯೆಯ 80% ಜನರು ಈ ಪದ್ಧತಿ ಅನುಸರಿಸುತ್ತಾರೆ. ಕ್ರೈಸ್ತ ದೇಶವಾದ ಫಿಲಿಪೈನ್ಸ್‌ನಲ್ಲಿಯೂ ಎಲ್ಲ ಗಂಡಸರೂ ಈ ವಿಧಿ ಅನುಸರಿಸುತ್ತಾರೆ (ನನ್ನ ಈ ಮಾಹಿತಿ ನಂಬದವರು ಇದನ್ನು ಇಂಟರ್ನೆಟ್ಟಿನಲ್ಲಿ ಮರು ಪರಿಶೀಲಿಸಬಹುದು).

ಸುನ್ನತ್ ವಿಧಿ ಇದು ಮೂಲತಃ ಯಹೂದೀ ಧರ್ಮದ ಐದು ಸಾವಿರ ವರ್ಷ ಹಳೆಯ ಪದ್ಧತಿ ಎಂದಾದರೂ ಸಂಘ ಪರಿವಾರದವರಿಗೆ ಗೊತ್ತಿದೆಯೇ? ಇಂತಹ ಗಹನ ಆರೋಗ್ಯದ ವಿಷಯ ಕಲ್ಲಡ್ಕದ ಚೆಡ್ಡಿ ಮುಖಂಡನಿಗೆ ಲೇವಡಿಯ ವಿಷಯವಾಗಿರುವುದು ಖೇದಕರ. ಅಮೆರಿಕದಲ್ಲಿ ದೊಡ್ಡ ಸಂಖ್ಯೆಯಲ್ಲಿ ನೆಲೆಸಿರುವ ತನ್ನದೇ ಹವ್ಯಕರನ್ನು ಕೇಳಿ ಕಲ್ಲಡ್ಕ ಭಟ್ಟ ತನ್ನ ಸಂಕುಚಿತ ಜ್ಞಾನ ವಿಸ್ತರಿಸಿಕೊಂಡು ಆಮೇಲೆ ಬೇರೆ ಧರ್ಮದವರ ಬಗ್ಗೆ ಕೊಳಕು ಜೋಕ್ ಮಾಡಿದರೆ ಒಳಿತು.

ಗಂಡಹೆಂಡಿರ ಆರೋಗ್ಯಕ್ಕೆ ಹಾಗೂ ತೃಪ್ತ ಸಂಬಂಧಕ್ಕೆ ಈ ವಿಧಿ ಎಷ್ಟು ಪ್ರಯೋಜನಕಾರಿ ಎಂದು ಅವನ ಅಮೆರಿಕದ ಮಿತ್ರರು ಖಂಡಿತಾ ಹೇಳಬಲ್ಲರು. ನಮ್ಮದೇ ದೇಶದ ಮುಂಬೈಯಲ್ಲಿ ಹಿಂದಿನ 25 ವರ್ಷಗಳಿಂದ ದೊಡ್ಡ ಸಂಖ್ಯೆಯಲ್ಲಿ ಹಿಂದೂ ಯುವಕರು ತೃಪ್ತ ವೈವಾಹಿಕ ಜೀವನಕ್ಕಾಗಿ ಸುನ್ನತ್ ವಿಧಿ ಅನುಸರಿಸುವುದು ಗುಟ್ಟಾಗಿ ಉಳಿದಿಲ್ಲ. ಇದಕ್ಕಾಗಿಯೇ ಅಲ್ಲಿ ಅನೇಕ ಹಿಂದೂ ಡಾಕ್ಟರ್‌ಗಳಿದ್ದಾರೆ.

ಒಂದು ವೇಳೆ ಈ ಸುನ್ನತ್ ವಿಧಿ ಭಾರತದ ವೈದಿಕ ವಿಧಿಯಾಗಿದ್ದರೆ ಅದನ್ನು ಸಮರ್ಥಿಸಲು ಎಷ್ಟೆಲ್ಲಾ ಅಜ್ಜಿ ಕಥೆ ಹೆಣೆದು ಈ ವಿಧಿಯಿಂದ ಸುಖಸಂಪತ್ತಿನ



ಅಧಿದೇವತೆಗಳು ಹಾಗೂ ಶುಭ ಗ್ರಹಗಳು ಎಷ್ಟು ಬ... ಒಲಿಯುತ್ತವೆ ಎಂದು ಶಬ್ದಗಳ ಜಾಲ ಹೆಣೆಯುತ್ತಿದ್ದರ... ಏನೋ. ವಾತ್ಸಾಯನ ಕಾಮಸೂತ್ರದಲ್ಲಿ ಮತ್ತು ಪತಂ... ಯೋಗಾಸನದಲ್ಲಿ ಈ ವಿಧಿಯ ಬಗ್ಗೆ ಅನೇಕ ಸ... ವಿವರಣೆ ಇರುತ್ತಿತ್ತು, ಶ್ರೀಕೃಷ್ಣನು ಹದಿನಾರು ಸಾವಿ... ಎಂಟು ಹೆಂಡಿರನ್ನು ಸಂಭಾಳಿಸಲು ಹಾಗೂ ಒಂದು ... ಎಪ್ಪತ್ತಾರು ಸಾವಿರ ಮಕ್ಕಳನ್ನು ಹುಟ್ಟಿಸಲು ಈ ವಿಧಿಯಿ... ಮಾತ್ರ ಸಾಧ್ಯವಾಯಿತು ಎಂದು ಭಾಗವತ ... ಹೆಣೆಯಲಾಗುತ್ತಿತ್ತು, ವೈದಿಕ ಕುವಿಜ್ಞಾನಿಗಳು ಇದರ ... ನೂರಾರು ಸಂಶೋಧನಾ ಗ್ರಂಥ ರ... ಕೃತಾರ್ಥರಾಗುತ್ತಿದ್ದರು.

- ಜಿ.ರವಿಕಿರಣ, ಮೈಸೂ...

ಸ್ವಾಮೀಜಿಗಳ ಸೇವೆಗಿಂತ ಜನಸೇವೆ ಮು...

ಐನೂರು ವರ್ಷಗಳ ಹಿಂದೆ ಉಡುಪಿಯ ವಾದಿರಾ... ಸ್ವಾಮಿಗಳಿಗೆ ಐದನೆಯ ಬಾರಿ ಪರ್ಯಾಯ ಪೀಠ ಏರು... ಅವಕಾಶ ಸಿಕ್ಕಿತ್ತು ಹಾಗೂ ಶಿಷ್ಯರೆಲ್ಲ ಅವರೇ ಐದನೆ... ಬಾರಿ ಪರ್ಯಾಯ ಪೀಠ ಏರಬೇಕೆಂದು ಒತ್ತಾಯಿಸಿದ್ದ... ಆದರೂ ವಾದಿರಾಜರು ತಮ್ಮ ಶಿಷ್ಯನಿಗೆ ಪರ್ಯಾಯಪ... ಕಟ್ಟಿ ತಮ್ಮ ನಿಜವಾದ ತ್ಯಾಗಮಯ ಬುದ್ಧಿ ತೋರಿಸಿದ... ಆಗ ಅವರಿಗೆ ಕೇವಲ 75 ವರ್ಷ ವಯಸ್ಸಂತೆ. ಅವ... ಸ್ವರ್ಗಸ್ಥರಾದುದು 120 ನೆಯ ವಯಸ್ಸಿನಲ್ಲಿ, ಆದರೆ ಈ... 85 ವರ್ಷ ಪ್ರಾಯದ ಆರೋಗ್ಯ ಸಮಸ್ಯೆ ಇರುವ ಪೇಜಾ... ಸ್ವಾಮಿಗಳು ಪರ್ಯಾಯ ಪೀಠವನ್ನು ತನ್ನ 58 ವರ್ಷ... ಕಿರಿಯ ಸ್ವಾಮಿಗೆ ಬಿಟ್ಟು ಕೊಡದೇ ಐದನೆಯ ಬಾರಿಯ... ತನಗೇ ಪೀಠ ಬೇಕೆಂದು ಹಠ ಹಿಡಿದು, ಭಕ್ತರ ಒತ್ತಾಯ... ನೆಪ ಮಾಡಿಕೊಂಡು ಅದನ್ನು ಪಡೆದಿರುವುದು ಅಂದಿ... ಇಂದಿಗೂ ಸರ್ವಸಂಗ ಪರಿತ್ಯಾಗಿ ಸನ್ಯಾಸಿಗಳಲ್ಲ... ಬದಲಾಗಿರುವ ಸ್ವಾರ್ಥಭರಿತ ಮನೋಸ್ಥಿತಿ ಹಾಗೂ ಭೌ... ವಿಷಯಗಳಲ್ಲಿ ವಿಪರೀತ ಹೆಚ್ಚಿರುವ ಆಸಕ್ತಿ ತೋರಿಸುತ್ತ...

ಪೇಜಾವರರಿಗೆ ಹಾಗೂ ಅವರ ಕಿರಿಯ ಶಿಷ್ಯರ ನಡು... ಈ ಬಾರಿಯ ಪರ್ಯಾಯ ಪಟ್ಟದ ಬಗ್ಗೆ ಭಾರಿ ವಾಗ್ವಾ... ನಡೆದು ಕಿರಿಯ ಸ್ವಾಮೀಜಿ ತನಗೆ ಪೀಠ ಸಿಗದಿ... ತಾನು ಸನ್ಯಾಸ ತೊರೆದು ಮಠವನ್ನೇ ತ್ಯಜಿಸುವುದಾ... ಬೆದರಿಕೆ ಒಡ್ಡಿರುವ ಬಗ್ಗೆ ಹಾಗೂ ಇತರ ಏಳು ಉಡು... ಸ್ವಾಮಿಗಳು ಸಂಧಾನ ನಡೆಸಿ, ಅನಿರೀಕ್ಷಿತ ಪ್ರಕೃತಿ ನಿಯಮ... ಪ್ರಕಾರ ಹಾಗೂ ಕೃಷ್ಣನ ಲೀಲೆಯ ಅನ್ವಯ ನಿಮ... ಸದ್ಯದಲ್ಲಿಯೇ ಪಟ್ಟ ಸಿಗಲೂಬಹುದು ಎಂದು ಸಮಾಧಾ... ಹೇಳಿ ಕಿರಿಯ ಸ್ವಾಮಿಯ ಮನವೊಲಿಸಿದರು ಎಂ... ಸುದ್ದಿಗಳು ಹರಿದಾಡುತ್ತಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಿಂದಿನ ಬಾ... ಉಡುಪಿ ಜಿಲ್ಲೆಗೆ ಭೇಟಿ ನೀಡಿದ್ದಾಗ ಉಡುಪಿ ದೇವಸ್ಥಾ... ಬಾರದಿರುವುದರಿಂದ ಕರ್ನಾಟಕ ರಾಜ್ಯಕ್ಕೆ ಒಳಿತಾಗಲಿ... ಎಂದು ಪೇಜಾವರ ಸ್ವಾಮಿಗಳು ಹೇಳಿಕೆ ಕೊಟ್ಟಿರುವು... ಕರ್ನಾಟಕದ ಜನತೆಯಲ್ಲಿ ಭಯ ಮತ್ತು ಮೌಢ್ಯ ಹರ... ತನ್ನ ಬೇಳೆ ಬೇಯಿಸಿಕೊಳ್ಳುವ ಹಳೆಯ ಮನೋವೈಜ್ಞಾ... ತಂತ್ರ ಎನ್ನಬೇಕಾಗುತ್ತದೆ. ಹೋದಲ್ಲೆಲ್ಲಾ ದೇವಸ್ಥಾನಗಳ... ನುಗ್ಗಿ ಅಲ್ಲಿಯ ಸ್ವಾಮೀಜಿ ಅಥವಾ ಅರ್ಚಕರ ಕಾಲಿನ... ಹೊರಳಾಡುವ ಪದ್ಧತಿ ಶುರುವಾಗಿದ್ದು ಯಡಿಯೂರ... ಮುಖ್ಯಮಂತ್ರಿ ಆದಾಗಿನಿಂದ. ಸ್ವಾಮೀಜಿಗಳ ಸೇ... ಮಾಡುವುದಕ್ಕಿಂತ ಸಾಮಾನ್ಯ ಜನರ ಸೇವೆ ಮಾಡಿದ... ದೇವರು ನಿಜವಾಗಿ ಖುಷಿಯಾಗುತ್ತಾನೆ ಎಂಬ ನಂಬಿ... ಸಿದ್ದರಾಮಯ್ಯನವರಿಗೆ ಇರುವುದು ಮೆಚ್ಚಬೇಕಾದ ವಿಷಯ... ಒಂದೇ ರಾಜಕೀಯ ಪಕ್ಷದ ಬಗ್ಗೆ ಒಲವಿರು... ಸ್ವಾಮೀಜಿಗಳೆಲ್ಲಾ ಇದನ್ನು ಅರಿತರೆ ಸಮಾಜಕ್ಕೆ ಒಳಿತು...

- ವೀರಪ್ಪ ಡಿ.ಎನ್, ಮಂಗಳೂರು

ತೆಲಂಗಾಣ ಹಾದಿ ತಪ್ಪಿದೆ

ತೆಲಂಗಾಣ ದೀರ್ಘಕಾಲ ಹೋರಾಟ ಮಾಡಿ, ತೀ... ಹೊಸದಾಗಿ ಹುಟ್ಟಿಕೊಂಡ ರಾಜ್ಯ. ಆದರೆ ಅಲ್ಲಿನ ಸರ್ಕಾ... ಒಬ್ಬ ಪ್ರಮಾಣಿಕ ಪೊಲೀಸ್ ಅಧಿಕಾರಿಯನ್ನು ಮೂರ... ವರ್ಷದಲ್ಲಿ ನಾಲ್ಕು ಬಾರಿ ವರ್ಗಾವಣೆ ಮಾಡುವ ಮೂಲ...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ... ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು...

...ನಿಗೆ ಹಿಂಸೆ ನೀಡಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದೆ ಎಂದರೆ ...ಮ್ಮ ದೇಶದಲ್ಲಿ ಆಡಳಿತ ವ್ಯವಸ್ಥೆ ಯಾವ ಮಟ್ಟದಲ್ಲಿದೆ ಎಂಬುದು ಸುಲಭವಾಗಿ ...ಹಿಸಬಹುದು.

ಹೊಸ ರಾಜ್ಯದ ಕಾವು ಇಷ್ಟು ಬೇಗ ಆರಿಹೋಯಿತೆ? ಹಾಗಿದ್ದರೆ ಅದಕ್ಕೆ ...ಣವಾದರೂ ಏನು? ಇನ್ನೇನಿರಲು ಸಾಧ್ಯ? ಅದೇ ಭ್ರಷ್ಟಾಚಾರ ಕಾರಣವಲ್ಲದೆ ...ರೆ ಏನೂ ಅಲ್ಲ. ಅಂತೂ ನಮ್ಮ ದೇಶದಲ್ಲಿ ಒಂದು ಕ್ರಾಂತಿ ಆಗದ ...ರತು ನಮಗೆ ಮುಕ್ತಿ ಇಲ್ಲ.

- ವೀರುಪ್ಪಾಕ್ಷಯ್ಯ, ಬೆಂಗಳೂರು

ಭಗವಾನ್ ಮತ್ತು ದೇವರ ಆಯುಧಗಳು

ನಮ್ಮನ್ನೆಲ್ಲಾ ತುಳಿಯುತ್ತಿರುವುದೇ ದೇವರು ಮತ್ತು ದೇವರ ಕೈಯಲ್ಲಿ ...ಯುಧಗಳಿರುವುದು ನಮ್ಮನ್ನು ಕೊಲ್ಲಲು ಎಂದು ವಿಚಾರವಾದಿ ...ಎಸ್.ಭಗವಾನ್ ಮತ್ತೊಂದು ವಿವಾದಾತ್ಮಕ ಹೇಳಿಕೆ ಇತ್ತೀಚೆಗೆ ನೀಡಿದರು. ...ವರ ಈ ಮಾತಿನಲ್ಲಿ ತಥ್ಯವಿದೆ. ಯಾರೇ ಆಗಲಿ ಆಯುಧ ಹಿಡಿಯುವುದು ...ರಡೇ ಉದ್ದೇಶದಿಂದ. ಒಂದನೆಯದು ಇತರರ ಮೇಲೆ ದಾಳಿ ಮಾಡಲು. ...ರಡನೆಯದು ಇತರರ ದಾಳಿಯಿಂದ ತನ್ನನ್ನು ರಕ್ಷಿಸಿಕೊಳ್ಳಲು. ಕೇವಲ ...ಲಂಕಾರಕ್ಕೆ ಯಾರೂ ಭಾರಿ ಆಯುಧ ಇಟ್ಟುಕೊಳ್ಳುವುದಿಲ್ಲ.

ಬ್ರಹ್ಮನ ಹೊರತಾಗಿ ಬೇರೆಲ್ಲಾ ದೇವರ ಕೈಗಳಲ್ಲೂ ಏನಾದರೊಂದು ...ಯಂಕರ ಆಯುಧ ಇದ್ದೇ ಇದೆ. ಪುರಾಣಕಾಲದಲ್ಲಿ ಬಂದೂಕು ಪಿಸ್ತೂಲು ...ನ್ನೂ ಆವಿಷ್ಕಾರವಾಗಿರಲಿಲ್ಲ ಇಲ್ಲದಿದ್ದರೆ ಆಗಿನ ಶಿಲ್ಪಕಾರರು ಈ ಬಂದೂಕು ...ಸ್ತೂಲುಗಳನ್ನೂ ದೇವರ ಕೈಯಲ್ಲಿ ಖಂಡಿತ ತೊಡಿಸುತ್ತಿದ್ದರು. ದೇವರು ...ಷ್ಟರನ್ನು ಶಿಕ್ಷಿಸಲು ಸಾಂಕೇತಿಕವಾಗಿ ಆಯುಧ ಹಿಡಿದಿರುವುದೇ ಅಥವಾ ...ವರು ಸರ್ವಶಕ್ತನಾಗಿರದೇ ಅವನಿಗೂ ಯಾರಿಂದಲೋ ಜೀವಭಯವಿದ್ದು ...ರಿಗಳಿಂದ ತನ್ನ ಆತ್ಮರಕ್ಷಣೆಗೋಸ್ಕರ ಹೆದರುಪುಕ್ಕನಂತೆ ಅವನು ಇಷ್ಟೊಂದು ...ಯುಧ ಧಾಲು ಹಿಡಿದಿರಬಹುದೇ?

ಆಯುಧ ಹಿಡಿದಿದ್ದರೂ ಹಿಂದಿನ ಕಾಲದಲ್ಲಿ ವೈದಿಕ ದೇವರುಗಳನ್ನು ...ುಗುಳುನಗೆಯೊಂದಿಗೆ ಶಾಂತಿಪ್ರಿಯ ಕೃಪಾಕರ ಭಂಗಿಯಲ್ಲಿಯೇ ...ತ್ರಿಸಲಾಗುತ್ತಿತ್ತು. ಆದರೆ ಈಗೀಗ ಶಾಂತಿಪ್ರಿಯರಾಗಿದ್ದ ನಮ್ಮ ಹಿಂದೂ ...ವರುಗಳು ಸಹ ತಮ್ಮ ಭಕ್ತರಂತೆ ದ್ವೇಷಪೂರಿತ ಯುದ್ಧಪ್ರಿಯರಾಗಿದ್ದಾರೆಯೇ ...ಬ ಅನುಮಾನ ಮೂಡುತ್ತಿದೆ. ಇತ್ತೀಚೆಗೆ ದೇವರುಗಳೆಲ್ಲಾ ಸಿಟ್ಟಿನಿಂದ ...ದಿಯುತ್ತಿರುವ ಜಗಳಗಂಟರಾಗಿರುವಂತೆ ಮತ್ತು ಯಾರ ಮೇಲೆಯೋ ದಾಳಿ ...ಾಡಲು ಮುನ್ನುಗ್ಗುತ್ತಿರುವಂತೆ ಚಿತ್ರಿಸಲಾಗುತ್ತಿದೆ. ಇದೆಲ್ಲಾ ಸಂಘ ಪರಿವಾರದವರು ...ಮ್ಮ ರಕ್ತಪಿಪಾಸು ಮನಸ್ಥಿತಿಯನ್ನು ಇತರ ಧರ್ಮದವರಿಗೆ ಮತ್ತು ದಲಿತರಿಗೆ ...ೇರಿಸಿ ಪರೋಕ್ಷವಾಗಿ ವಾರ್ನಿಂಗ್ ಕೊಡುವ ಯೋಜನೆಯಂತೆ ಕಾಣುತ್ತದೆ.

ಕಾಳಿ ಮಾರಿ ಚಾಮುಂಡಿ ವೀರಭದ್ರ ದುರ್ಗಾಪರಮೇಶ್ವರಿ ಮುಂತಾದ ...ೇಪಿಷ್ಟ ದೇವರುಗಳನ್ನು ವೈದಿಕರು ಹುಟ್ಟು ಹಾಕಿದ್ದು ಮುಗ್ಧ ಶೂದ್ರರ ...ನದಲ್ಲಿ ಚಿಕ್ಕಂದಿನಿಂದಲೇ ಒಂದು ಅವ್ಯಕ್ತ ಭಯ ಹುಟ್ಟು ಹಾಕಿ ಅವರನ್ನು ...ವನವಿಡೀ ಮಾನಸಿಕವಾಗಿ ತಮ್ಮ ಗುಲಾಮರನ್ನಾಗಿ ಮಾಡಿಕೊಳ್ಳುವುದಕ್ಕೋಸ್ಕರ ...ದು ಅನೇಕ ಚಿಂತಕರು ಹೇಳಿದ್ದಾರೆ. ದಯವೇ ಧರ್ಮದ ಮೂಲ ...ದೋ ಅಲ್ಲವೋ ಆದರೆ ಭಯವೇ ಭಕ್ತಿಯ ಮೂಲ ಎಂಬುದು ಅಕ್ಷರಶಃ ...ಸ. ಈಗ ಪತ್ರಿಕೆಗಳಲ್ಲಿ ಬರುವ ದೇವರ ಚಿತ್ರಗಳನ್ನು ಅಥವಾ ಉತ್ಸವಗಳಲ್ಲಿ ...ಕಿರುವ ಫ್ಲೆಕ್ಸ್‌ಗಳಲ್ಲಿಯ ದೇವರ ಭಂಗಿಗಳನ್ನು ಗಮನಿಸಿದಾಗ ಇಂತಹ ...ಕ್ರಾಮಕ ಭಂಗಿಗಳ ಮುಖಾಂತರ ಹಿಂದೂತ್ವವಾದಿಗಳು ಜನರಿಗೆ ಯಾವ ...ದೇಶ ಮುಟ್ಟಿಸಲು ಪ್ರಯತ್ನಿಸುತ್ತಿದ್ದಾರೆ ಎಂಬ ಪ್ರಶ್ನೆ ಜನರ ಮನದಲ್ಲಿ ...ುವುದು ಸಹಜ.


ಹಿಂದೆಲ್ಲಾ ಅನೇಕ ವರ್ಷಗಳಿಂದ ರಾಮನನ್ನು ಕೃಪಾಕರ ರೂಪದಲ್ಲಿ ...ದರೆ ಭಕ್ತರಿಗೆ ಆಶೀರ್ವದಿಸುವ ಭಂಗಿಯಲ್ಲಿ ಸೀತೆ ಹಾಗೂ ಲಕ್ಷ್ಮಣರೊಂದಿಗೆ ...ತ್ರಿಸಲಾಗುತ್ತಿತ್ತು. ಈ ಭಂಗಿ ಕೇವಲ ಶಿವಕಾಶಿಯಲ್ಲಿ ಪ್ರಿಂಟಾದ ಚಿತ್ರಗಳಲ್ಲಿ ...ಾತ್ರವಲ್ಲ ದೇಶದ ಯಾವುದೇ ಭಾಗದಲ್ಲಿ ಪ್ರಿಂಟ್ ಮಾಡಿದ ಚಿತ್ರಗಳಲ್ಲೂ ...ಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಇದೇ ಶಾಂತ ಮುಗುಳ್ನಗೆಯ ಭಂಗಿ ...ುತ್ತಿತ್ತು. ಆದರೆ ಈಗಿನ ಹಿಂದೂ ಸಮಾಜೋತ್ಸವದ ಬೃಹತ್ ಫ್ಲೆಕ್ಸ್‌ಗಳಲ್ಲಿ ...ತೆ ಲಕ್ಷ್ಮಣ ಹನುಮಂತರನ್ನು ಹಿಂದೆ ಬಿಟ್ಟು ರಾಮನು ಏಕಾಂಗಿಯಾಗಿ ...ಲ್ಲಿ ಬಾಣ ಹಿರಿದು ಎಲ್ಲಿಗೋ ಮುನ್ನುಗ್ಗುತ್ತಿರುವಂತೆ ಚಿತ್ರಿಸಲಾಗುತ್ತಿದೆ. ...ಷ್ಣ ಚಕ್ರವನ್ನು ಕೊಡೆಯಂತೆ ಹಿಡಿದು ಎಲ್ಲಿಗೋ ನುಗ್ಗುತ್ತಿದ್ದಾನೆ. ಶಿವನದೂ ...ಗ ಎಲ್ಲೆಡೆಯೂ ರುದ್ರಾವತಾರವೇ ಕಾಣಿಸುತ್ತಿದೆ. ಜಾತಿವಾದಿ ...ಶುರಾಮನದಂತೂ ಮಾತೃ ಸಂಸ್ಕೃತಿಯ ತಲೆ ಕಡಿದು ಪಿತೃ ಸಂಸ್ಕೃತಿಯನ್ನು ...ವಿಡರ ಮೇಲೆ ಬಲಾತ್ಕಾರದಿಂದ ಹೇರಿದ ದುರಹಂಕಾರದ ಭಂಗಿ. ...ಪತಿಯದೂ ಕೆಲವೊಮ್ಮೆ ಸೊಂಡಿಲು ಮೇಲೆತ್ತಿ ಅಂಕುಶ ಹಿರಿದು ಇಲಿಯನ್ನು ...ದೆ ಬಿಟ್ಟು ಎಲ್ಲಿಗೋ ನುಗ್ಗುವ ಭಂಗಿಯಿರುತ್ತದೆ. ದುರ್ಗೆಯ ವಾಹನ ...ಲಿಯೋ ಸಿಂಹವೋ ಎಂಬ ಬಗ್ಗೆ ಚಿತ್ರಕಾರರಲ್ಲಿ ಯಾವಾಗಲೂ ಗೊಂದಲವಿದೆ. ...ರೂ ದುರ್ಗಾದೇವಿಯದು ಹಿಂದಿನ ಕಾಲದಲ್ಲಿ ಹುಲಿ ಅಥವಾ ಸಿಂಹದ ...ಲೆ ಕುಳಿತು ಎರಡೂ ಕಾಲು ಒಂದೇ ಕಡೆ ಹಾಕಿ, ಹಳೆಯ ಬಜಾಜ್ ...ಟರಿನಲ್ಲಿ ಸೀರೆಯುಟ್ಟ ಹೆಂಗಸರು ಹಿಂದಿನ ಸೀಟಿನಲ್ಲಿ ಒಂದೇ ಸೈಡಿಗೆ ...ಡೂ ಕಾಲು ಹಾಕಿ ಕುಳಿತಿರುತ್ತಿದ್ದ ಭಂಗಿಯಲ್ಲಿ ಚಿತ್ರಿಸಲಾಗುತ್ತಿತ್ತು. ಆದರೆ ...ಚಿನ ಕೆಲವರ್ಷಗಳಲ್ಲಿ ಜೀನ್ಸ್ ಹಾಕಿರುವ ಕಾಲೇಜು ಹುಡುಗಿಯರು ...ಕ್ ಮೇಲೆ ಎರಡೂ ಬದಿಗೆ ಕಾಲು ಹಾಕಿ ಕುಳಿತುಕೊಳ್ಳುವ ಭಂಗಿಯಿಂದ ...ರಣೆ ಪಡೆದು ದುರ್ಗಾ ದೇವಿಯನ್ನೂ ಹುಲಿಯ ಮೇಲೆ ಎರಡೂ ಕಡೆ ...ು ಹಾಕಿ ಲಗಾಮು ಇಲ್ಲದೇ ಭದ್ರವಾಗಿ ಕುಳಿತು ಎಂಟೂ ಕೈಯಲ್ಲಿ ...ಯುಧ ಹಿಡಿದು ಯಾರ ಮೇಲೆಯೋ ಆಕ್ರಮಣ ಮಾಡಲು ಹೊರಟಂತೆ ...ಸಲಾಗುತ್ತಿದೆ. ಸೀರೆಯುಟ್ಟವರೂ ಹೀಗೆ ಬೈಕ್ ಮೇಲೆ ಸಹ ಎರಡೂ ಕಡೆ ...ು ಹಾಕಿ ಮಹಿಳೆಯರು ದುರ್ಗೆಯಂತೆ ಕುಳಿತುಕೊಳ್ಳುವುದು ಸಾಧ್ಯವೆಂದು ...ರಿಸಿಕೊಟ್ಟ ಶ್ರೇಯಸ್ಸು ಸಂಘ ಪರಿವಾರದವರಿಗೆ ಹೋಗಬೇಕು.

ಹೀಗೆ ಹಿಂದೂತ್ವವಾದಿಗಳ ಮಾನಸಿಕತೆ ಕೊಳೆಯುತ್ತಾ ಹೋದಂತೆ ವೈದಿಕ ...ವರುಗಳ ಭಂಗಿಯೂ ಆಕ್ರಾಮಕವಾಗುತ್ತಾ ಹೋಗುತ್ತಿದೆ. ಈಗ ಸ್ವಾರ್ಥವೇ ...ಯ ಇನ್ನೊಂದು ಮುಖ ಎಂದಂತೆ ದ್ವೇಷವೇ ಧರ್ಮದ ಇನ್ನೊಂದು ...ಖ ಎನ್ನುವುದೂ ನಿಜವಾಗುತ್ತಿದೆ.

- ಆರ್.ಬಿ.ಶೇಣವ, ಮಂಗಳೂರು

ದೇವರ ನಾಡಲ್ಲಿ ತವಕ ತಲ್ಲಣದ ಕಡಲು

'ಪುಟ್ಟಕ್ಕನ ಹೈವೇ' ಸಿನಿಮಾದ ಮೂಲಕ ಚಿತ್ರ ಜಗತ್ತಿಗೆ ಹೊಸ ತಲ್ಲಣದ ಸಿನಿಮಾ ಕೊಟ್ಟಿದ್ದ ನಿರ್ದೇಶಕ ಬಿ.ಸುರೇಶ ಈಗ ಮತ್ತೊಂದು ಸಿನಿಮಾ ಮಾಡಿದ್ದಾರೆ. ಇದೇ ವಾರ ಚಿತ್ರ ಬಿಡುಗಡೆ ಆಗುತ್ತಿದೆ. ಈ ಕುರಿತಾದ ಮಾತುಕತೆ ಇಲ್ಲಿದೆ.



ಸಮಾಜದ ಅನೇಕ ತಲ್ಲಣಗಳಿಗೆ ತಮ್ಮ ಸಿನಿಮಾದ ಮೂಲಕ ಸ್ಪಂದಿಸಿದವರು ಬಿ.ಸುರೇಶ. ಅಕ್ಷರ ಜಗತ್ತು ಮತ್ತು ದೃಶ್ಯ ಮಾಧ್ಯಮದಲ್ಲೂ ತಮ್ಮದೇ ಆದ ಛಾಪು ಮೂಡಿಸಿರುವ ಸುರೇಶ್ ಸದ್ಯ 'ದೇವರ ನಾಡಲ್ಲಿ' ಅನ್ನುವ ಸಿನಿಮಾ ನಿರ್ದೇಶಿಸಿದ್ದಾರೆ. ಹಲವು ಕಾರಣಗಳಿಂದಾಗಿ ಸಾಕಷ್ಟು ಕುತೂಹಲ ಮೂಡಿಸಿರುವ ಈ ಸಿನಿಮಾ ಇದೇ ಶುಕ್ರವಾರ ತೆರೆ ಕಾಣುತ್ತಿದೆ.

** ರೈತರ ಸಂಕಷ್ಟಗಳ ಕುರಿತಾಗಿ 'ಪುಟ್ಟಕ್ಕನ ಹೈವೇ' ಸಿನಿಮಾ ಮಾಡಿದ್ದ ನಿಮ್ಮ ಲಕ್ಷ್ಯ ಸಡನ್ನಾಗಿ ದೇವರ ಕಡೆ ಹೋಗಿದ್ದು ಹೇಗೆ?*


ದೇವರು ಅಂದಾಕ್ಷಣ ನಿಮ್ಮ ಕಲ್ಪನೆಯ ದೇವರು ಇಲ್ಲಿ ಇರಲಾರ. ಇದು ನನ್ನ ಕಲ್ಪನೆಯ ದೇವರು. ನಾನು ಜೀವಂತ ಮನುಷ್ಯನನ್ನು ದೇವರು ಅಂತ ಕರೆಯುತ್ತೇನೆ. ಅವನ ನಾಡಿನಲ್ಲಿ ನಡೆದ ಕತೆ ಇದಾಗಿದೆ. ಹಾಗಾಗಿ ದೇವರಿಗೆ ಮತ್ತೊಂದು ವ್ಯಾಖ್ಯಾನ ಕೊಡುವ ಪ್ರಯತ್ನವೂ ಈ ಸಿನಿಮಾದಲ್ಲಿ ನಡೆದಿದೆ. ಈ ಪ್ರತಿಮೆಯು ಬೇರೊಂದು ಆಯಾಮವನ್ನೂ ನೀಡಬಹುದು.


** 'ದೇವರ ನಾಡಲ್ಲಿ' ಸಿನಿಮಾದ ವಿಶೇಷತೆ ಏನು?*

ಸಿನಿಮಾನೇ ಒಂದು ವಿಶೇಷ. ಇಲ್ಲಿ ಆಯ್ದುಕೊಂಡಿರುವ ಕತೆ ಮತ್ತೊಂದು ವಿಶೇಷ. ಸಿನಿಮಾವನ್ನು ಸಿನಿಮಾವನ್ನಾಗಿ ನೋಡುವ ಪ್ರಯತ್ನ ಇಲ್ಲಿ ಆಗಿದೆ. ಪ್ರತಿ ಚಿತ್ರಿಕೆಯ ಹಿಂದೊಂದು ಅರ್ಥವಿದೆ. ಅದನ್ನು ಅರ್ಥಮಾಡಿಕೊಂಡು ಸಿನಿಮಾ ನೋಡುತ್ತಾ ಹೋಗಬೇಕು. ಆಗ ಸಿನಿಮಾ ನಿಮ್ಮದೇ ಆದ ರೀತಿಯಲ್ಲಿ ತೆರೆದುಕೊಳ್ಳುತ್ತಾ ಸಾಗುತ್ತದೆ.

** ಇದು ನೈಜ ಘಟನೆಯನ್ನ ಆಧರಿಸಿದ ಸಿನಿಮಾ ಅನ್ನುವ ಮಾತಿದೆ. ಅದು ನಿಜನಾ?*

ನೈಜ ಘಟನೆ ಅಂತ ಹೇಳಿದರೆ ತಪ್ಪಾಗುತ್ತದೆ. ಹಲವು ವರ್ಷಗಳ ಹಿಂದೆ ನಡೆದ ಒಂದು ಘಟನೆಯು ಪತ್ರಿಕೆಯಲ್ಲಿ ವರದಿಯಾಗಿತ್ತು. ಆ ವರದಿಯನ್ನು







ಆಧರಿಸಿ, ಅದಕ್ಕೆ ಕಲ್ಪನೆಯ ಚಿತ್ರಿಕೆಯನ್ನು ಸೇರಿಸಿ ಮಾಡಿರುವ ಸಿನಿಮಾ ಇದು. ವರದಿಯಲ್ಲಿದ್ದ ವ್ಯಕ್ತಿಗಳು ಈಗಲೂ ಜೀವಂತವಾಗಿ ಇರಬಹುದು. ಆದರೆ ಅವರು ಸಿನಿಮಾದೊಳಗಿಲ್ಲ. ಆಗ ನಡೆದ ಘಟನೆ ಅಂದು ಕೇವಲ ವರದಿ ಆಯಿತು. ಇಂದು ಅದೇ ದೊಡ್ಡ ಸಮಸ್ಯೆಯಾಗಿದೆ. ಹೀಗಾಗಿ ಸಿನಿಮಾ ಮಾಡಲು ಅದು ಪ್ರಸ್ತುತ ಅನಿಸಿತು.

** ಯಾಕೆ ಈ ಸಿನಿಮಾವನ್ನು ಕಡಲ ತಡಿಯಲ್ಲೇ ಚಿತ್ರೀಕರಿಸಿದ್ದೀರಿ?*

ಸಿನಿಮಾದ ಕತೆಗೂ ಮತ್ತು ಆ ಪ್ರದೇಶಕ್ಕೂ ಸಂಬಂಧವಿದೆ. ಅಲ್ಲದೇ ಆ ಘಟನೆ ನಡೆದದ್ದು ಅದೇ ನೆಲದಲ್ಲಿ. ಹೀಗಾಗಿ ಶೂಟಿಂಗ್ ಅನ್ನು ಅಲ್ಲಿಯೇ ಮಾಡಿದ್ದೇವೆ.

** ನಿಮ್ಮ ಸಿನಿಮಾದ ಪ್ರೊಮೋದಲ್ಲಿ ಎರಡು ಕೋಮಿನ ಕತೆ ಇದೆ. ಇದು ಲವ್ ಜಿಹಾದ್‌ಗೆ ಸಂಬಂಧಿಸಿದ ಸಿನಿಮಾನಾ?*

ಅಲ್ಲ. ಇದು ಮನುಷ್ಯ ಸಂಬಂಧದ ಕತೆ. ಮನುಷ್ಯ ಮನುಷ್ಯನ ಬಗ್ಗೆ ಅನುಮಾನ ಹುಟ್ಟಿಸುವ ಅಮಾಯಕ ಕತೆ. ಇದಕ್ಕೆ ಕೋಮಿನ ಹಣೆಪಟ್ಟಿ ಕಟ್ಟುವುದು ನನಗೆ ಇಷ್ಟವಿಲ್ಲ.

** ಯಾವಾಗಲೂ ನೀವು ಹೊಸಬರ ಜತೆಯೇ ಸಿನಿಮಾ ಮಾಡುವುದು ಯಾಕೆ?*

ಹಾಗೇನೂ ಇಲ್ಲವಲ್ಲ. ನನ್ನ ಕತೆಗೆ ಯಾರು ಬೇಕೋ ಅವರನ್ನು ಆಯ್ಕೆ ಮಾಡಿಕೊಂಡು ಸಿನಿಮಾ ಮಾಡುತ್ತೇನೆ. ಶ್ರುತಿ, ಪ್ರಕಾಶ್ ರೈ ಹೀಗೆ ಸಾಕಷ್ಟು ಹೆಸರಾಂತ ಕಲಾವಿದರೂ ನನ್ನ ಚಿತ್ರದಲ್ಲಿ ನಟಿಸಿದ್ದಾರೆ. 'ದೇವರ ನಾಡಲ್ಲಿ' ಕತೆಯೇ ಹಾಗಿತ್ತು. ಅದು ಹೊಸಬರನ್ನೇ ಬೇಡುತ್ತಿತ್ತು. ಹೀಗಾಗಿ ಮಂಡ್ಯ ರಮೇಶ್ ಪುತ್ರಿ ದಿಶಾ, ಮಂಜುನಾಥ್ ಹೆಗಡೆ ಪುತ್ರ ಮನೋಜ್‌ನನ್ನು ಈ ಸಿನಿಮಾದ ಮೂಲಕ ಪರಿಚಯಿಸುತ್ತಿದ್ದೇವೆ. ಉಳಿದಂತೆ ಅಚ್ಯುತ್ ಕುಮಾರ್, ಸಿಹಿಕಹಿ ಚಂದ್ರು, ಪ್ರಕಾಶ್ ರೈ ಹೀಗೆ ಸಾಕಷ್ಟು ಕಲಾವಿದರು ಈ ಸಿನಿಮಾದಲ್ಲಿದ್ದಾರೆ. ಅದ್ವೈತ್ ಗುರುಮೂರ್ತಿ ಸಿನಿಮಾಟೋಗ್ರಫಿ ಚಿತ್ರಕ್ಕಿದೆ. ಹಂಸಲೇಖ ಸಂಗೀತ ನೀಡಿದ್ದಾರೆ.

** ದೃಶ್ಯ ಮಾಧ್ಯಮದ ಪ್ರೇಕ್ಷಕರ ಮನಸ್ಥಿತಿ ಇಂದು ಬದಲಾಗಿದೆ. ಕಲಾತ್ಮಕ ಸಿನಿಮಾವನ್ನು ಅವರು ತೆಗೆದುಕೊಳ್ಳುತ್ತಾರೆ ಅನ್ನುವ ವಿಶ್ವಾಸ ಉಳಿದಿದೆಯಾ?*

ನಾವು ಎಂಥ ಸಿನಿಮಾವನ್ನು ಕೊಡುತ್ತೇವೆಯೋ ಅದಕ್ಕೆ ತಕ್ಕಂತೆ ಪ್ರೇಕ್ಷಕ ಬದಲಾಗುತ್ತಾನೆ ನಿಜ. ಹಾಗಂತ ಯಾವತ್ತೂ ಅವನು ಕಲಾತ್ಮಕ ಸಿನಿಮಾವನ್ನು ತಿರಸ್ಕಾರ ಭಾವದಿಂದ ನೋಡಿಲ್ಲ. ಆಯಾ ಸಿನಿಮಾಗಳಿಗೆ ಅದರದ್ದೇ ಆದ ಪ್ರೇಕ್ಷಕ ವರ್ಗ ಇದೆ. ಯುವ ಜನಾಂಗ ಈಗ ಪ್ರಯೋಗಾತ್ಮಕ ಚಿತ್ರಗಳತ್ತ ಹೆಚ್ಚು ವಾಲುತ್ತಿದ್ದಾರೆ. ಹೀಗಾಗಿ ವಿಶ್ವಾಸ ಎರಡರಷ್ಟಾಗಿದೆ.

** ಮೊನ್ನೆಯಷ್ಟೇ ತಮ್ಮ ಪುಸ್ತಕಕ್ಕೆ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂತು. ವೇದಿಕೆಯಲ್ಲೇ ಅದನ್ನು ತಿರಸ್ಕರಿಸಿದಿರಿ. ಈ ಕುರಿತು ನಿಮ್ಮ ಪ್ರತಿಕ್ರಿಯೆ ಏನು?*

ಅದನ್ನು ತಿರಸ್ಕರಿಸುವಿಕೆ ಅನ್ನಬಾರದು. ಅಸಹಿಷ್ಣುತೆಯ ಕುರಿತು ವ್ಯಾಪಕ ಚರ್ಚೆ ಆಗಬೇಕಿದೆ. ಹೀಗಾಗಿ ಪ್ರಶಸ್ತಿಯ ಮೊತ್ತದ ಜತೆಗೆ ನನ್ನ ವೈಯಕ್ತಿಕ ಹತ್ತು ಸಾವಿರ ರೂಪಾಯಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಕೊಟ್ಟೆ. ಈ ಹಣದಲ್ಲಿ ಅಸಹಿಷ್ಣುತೆಯ ಕುರಿತು ಒಂದು ಗೋಷ್ಠಿ ಏರ್ಪಡಿಸಿ, ಅದನ್ನು ಪುಸ್ತಕ ರೂಪದಲ್ಲಿ ತನ್ನಿ ಅನ್ನುವುದು ಅದರ ಉದ್ದೇಶವಾಗಿತ್ತು. ಲೇಖಕರ ಮಾತನ್ನು ಸರಕಾರ ಖಂಡಿತಾ ಕೇಳದು. ಪ್ರಶಸ್ತಿ ಹಿಂದಿರುಗಿಸಿದ ತಕ್ಷಣ ಅದು ಏನೋ ಮಾಡಿಬಿಡುತ್ತದೆ ಅನ್ನುವ ವಿಶ್ವಾಸವೂ ನನಗಿಲ್ಲ. ■

ಮೆಲೊಡಿ ಆಂಟೋನಿ



ಮೆಲೊಡಿ ಮಾಂತ್ರಿಕ ಮಣಿಕಾಂತ್ ಕದ್ರಿ ಸದ್ಯ 'ರನ್ ಆಂಟೋನಿ' ಸಿನಿಮಾದ ಹಾಡುಗಳನ್ನು ಕಂಪೋಸ್ ಮಾಡುತ್ತಿದ್ದಾರೆ. ಇದು ಡಾ. ರಾಜ್‌ಕುಮಾರ್ ಮೊಮ್ಮಗ ವಿನಯ್ ಅವರ ಎರಡನೇ ಸಿನಿಮಾ. ಈ ಹಿಂದೆ ಪುನೀತ್ ರಾಜ್‌ಕುಮಾರ್ ನಟನೆಯ 'ಪೃಥ್ವಿ' ಸಿನಿಮಾಗಾಗಿ ಮಣಿ ಹಾಡುಗಳನ್ನು ಕಂಪೋಸ್ ಮಾಡಿದ್ದರು. ಈ ಗೀತೆಗಳು ಹಿಟ್ ಆಗಿದ್ದವು. ಹೀಗಾಗಿ ರಾಘವೇಂದ್ರ ರಾಜ್‌ಕುಮಾರ್ ತಮ್ಮ ಪುತ್ರನ ಎರಡನೇ ಚಿತ್ರಕ್ಕೆ ಕದ್ರಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ.

ಮೆಲೊಡಿ ಹಾಡುಗಳ ಮೂಲಕ ಫೇಮಸ್ ಆದವರು ಮಣಿಕಾಂತ್. ಇವರ ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿರುವ 'ಸವಾರಿ 2' ಸಿನಿಮಾದ ಹಾಡು 'ನಿನ್ನ ದನಿಗಾಗಿ...' ರಾಷ್ಟ್ರಮಟ್ಟದಲ್ಲೂ ಸದ್ದು ಮಾಡಿತ್ತು. ಈವರೆಗೂ ಅದು ಹತ್ತಕ್ಕೂ ಹೆಚ್ಚು ಪ್ರಶಸ್ತಿ ಪಡೆದಿದೆ. ಅತಿಹೆಚ್ಚು ಡೌನ್‌ಲೋಡ್ ಆದ ಹಾಡುಗಳ ಸಾಲಲ್ಲಿ ಟಾಪ್‌ನಲ್ಲಿದೆ. ಬೆಸ್ಟ್ ಮ್ಯೂಸಿಕ್, ಬೆಸ್ಟ್ ಮ್ಯೂಸಿಕ್ ಡೈರೆಕ್ಟರ್, ಬೆಸ್ಟ್ ಆಲ್ಬಂ, ಬೆಸ್ಟ್ ಸಿಂಗರ್, ಬೆಸ್ಟ್ ಲಿರಿಕ್ಸ್ ಸೇರಿದಂತೆ ಬಹುತೇಕ ಸಿನಿ ಪ್ರಶಸ್ತಿಗಳು ಇದೇ ಹಾಡಿನ ಪಾಲಾಗಿವೆ. ಹೀಗಾಗಿ ಮಣಿಕಾಂತ್‌ಗೆ ಇಂಥದ್ದೊಂದು ಅವಕಾಶ ಸಿಕ್ಕಿದೆ ಎನ್ನೋಣ.

"ನಾನು ಏನೇ ಕೆಲಸ ಮಾಡಿದರೂ ಅಲ್ಲಿ ಶ್ರದ್ಧೆ ಇರುತ್ತದೆ. ನನ್ನ ಕೆಲಸದ ಬಗ್ಗೆ ರಾಘವೇಂದ್ರ ರಾಜ್‌ಕುಮಾರ್ ಅವರಿಗೆ ಗೊತ್ತಿದೆ. ಹೀಗಾಗಿ ಅವರೇ ನನ್ನನ್ನು ಕರೆಯಿಸಿಕೊಂಡು ಸಂಗೀತ ನಿರ್ದೇಶನ ಮಾಡಲು ಹೇಳಿದರು. ನಿಜಕ್ಕೂ ನನಗೆ ಖುಷಿ ಆಯಿತು. ಕೆಲಸ ಬೇಕು ಅಂತ ಯಾವತ್ತೂ ನಾನು ಚಿತ್ರಗಳನ್ನು ಒಪ್ಪಿಕೊಳ್ಳುವುದಿಲ್ಲ. ಕತೆ ಚೆನ್ನಾಗಿದ್ದರೆ, ಆ ಕತೆಯು ಸಂಗೀತ ಬೇಡುತ್ತಿದ್ದರೆ ಮಾತ್ರ ಒಪ್ಪಿಕೊಳ್ಳುತ್ತೇನೆ. ಅಂತಹ ಸಿನಿಮಾಗಳಲ್ಲಿ 'ರನ್ ಆಂಟೋನಿ' ಕೂಡ ಒಂದು" ಅಂತಾರೆ ಮಣಿಕಾಂತ್.



ವೆಂಕಟ್ ಹತ್ತಿರ ದುಡ್ಡಿಲ್ಲ

'ಪೋರ್ಕಿ ಹುಚ್ಚ ವೆಂಕಟ್' ಸಿನಿಮಾ ಮಾಡುವುದಾಗಿ ವೆಂಕಟ್ ಹೇಳಿಕೊಂಡಿದ್ದರು. ಈಗ ಸಿಕ್ಕಿರುವ ಮಾಹಿತಿಯ ಪ್ರಕಾರ ಸದ್ಯ 'ಪೋರ್ಕಿ ಹುಚ್ಚ ವೆಂಕಟ್' ಸಿನಿಮಾ ಸೆಟ್ಟೇರುವುದಿಲ್ಲ, ಕಾರಣ, ಅವರ ಬಳಿ ಹಣವಿಲ್ಲ. ಕಳೆದು ತಿಂಗಳು "ನನ್ನ ಅಕೌಂಟ್‌ನಲ್ಲಿರೋದು ಆರೇಳು ಸಾವಿರ ಮಾತ್ರ" ಅನ್ನುತ್ತಿದ್ದ ವೆಂಕಟ್‌ಗೆ ತಂದೆ ಕೂಡ ಹಣ ಕೊಡುತ್ತಿಲ್ಲ. ಈ ಚಿತ್ರಕ್ಕೆ ಒಂದು ಕೋಟಿ ರೂಪಾಯಿ ಹೊಂದಿಸಿಕೊಳ್ಳಬೇಕಿದೆ. ಹೀಗಾಗಿ ವೆಂಕಟ್ ತಲೆಮೇಲೆ ಕೈ ಇಟ್ಟು ಕೂತಿದ್ದಾರೆ.

ಒಂದು ಕಡೆ ಇವರ ಹಳೆ ಸಿನಿಮಾಗಳು ಬಿಡುಗಡೆ ಆಗುತ್ತಿದ್ದರೆ, ಮತ್ತೊಂದು ಕಡೆ ಹೊಸ ಸಿನಿಮಾದ ಬಗ್ಗೆಯೂ ಸುದ್ದಿ ಕೇಳಿ ಬರುತ್ತಿವೆ. ಏನೇ ಆದರೂ ಇವರ ಕೈಗೆ ಮಾತ್ರ ದುಡ್ಡು ಬರುತ್ತಿಲ್ಲ.

ತಮ್ಮ ಹತ್ತಿರ ದುಡ್ಡಿಲ್ಲ ಅನ್ನುವುದನ್ನು ಒಪ್ಪಿಕೊಳ್ಳುವ ವೆಂಕಟ್ "ನಮ್ಮ ತಂದೆ ಶ್ರೀಮಂತ. ಅವರಲ್ಲಿ ಹಣಕ್ಕೆ ಕೊರತೆ ಇಲ್ಲ, ಒಳ್ಳೆಯ ಕೆಲಸಕ್ಕೆ ಅವರು ದುಡ್ಡು ಕೊಡುತ್ತಾರೆ" ಅಂತಾರೆ. "ಹಣ ಕೊಡದೇ ಇದ್ದರೆ ನನ್ನ ಸಿನಿಮಾಗಳ ನಿರ್ಮಾಪಕರು ದುಡ್ಡು ಕೊಡುತ್ತಾರೆ" ಅನ್ನುವ ಮಾತುಗಳನ್ನೂ ಆಡುತ್ತಿದ್ದಾರೆ. ಈ ಮಧ್ಯೆ ವೆಂಕಟ್‌ನನ್ನು ನಾಯಕನನ್ನಾಗಿ ಆಯ್ಕೆ ಮಾಡಿಕೊಂಡು ಎಸ್.ನಾರಾಯಣ್ ಸಿನಿಮಾ ಮಾಡುತ್ತಿದ್ದಾರೆ. ಈ ಚಿತ್ರಕ್ಕೆ 'ಡಿಕ್ಟೇಟರ್' ಎಂದೂ ಹೆಸರಿಟ್ಟಿದ್ದಾರೆ.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಮಾಜಿ ಅಧ್ಯಕ್ಷ ಬಿ.ವಿಜಯ ಕುಮಾರ್ ಈ ಚಿತ್ರವನ್ನು ನಿರ್ಮಾಣ ಮಾಡಲಿದ್ದಾರೆ. ಇವರೇ ವೆಂಕಟ್‌ಗೆ ಒಂದಿಷ್ಟು ದುಡ್ಡು ಕೊಡುತ್ತಿದ್ದಾರೆ. ಹೀಗಾಗಿ ವೆಂಕಟ್ ತಮ್ಮ ಸಿನಿಮಾಗಳ ಪ್ರೆಸ್‌ಮೀಟ್‌ನಲ್ಲಿ ದಾನಧರ್ಮ ಮಾಡುತ್ತಿದ್ದಾರೆ.

ಸಿನಿಮಾಗೆ ಸಂಬಂಧಿಸಿದಂತೆ ಆಗಲೇ ಒಂದು ಹಂತದ ಮಾತು ಕತೆ ಮುಗಿದಿದೆ. ನಿರ್ದೇಶಕರು, ವೆಂಕಟ್ ಮತ್ತು ನಿರ್ಮಾಪಕರು ಕೂತು ಮಾತಾಡಿದ್ದಾರೆ. ಕೈ ತುಂಬಾ ದುಡ್ಡು ಕೊಟ್ಟಿದ್ದಾರೆ. ಹೀಗಾಗಿ 'ಪೋರ್ಕಿ'ಗಿಂತ ಮುಂಚೆ 'ಡಿಕ್ಟೇಟರ್' ಸಿನಿಮಾ ಸೆಟ್ಟೇರಲಿದೆ.

ಬುಲೆಟ್‌ಗಾಗಿ ಸಿನಿಮಾ ಒಪ್ಪಿದ ಯೋ…

ಲೂಸ್ ಮಾದ ಖ್ಯಾತಿಯ ಯೋಗಿ ಸದ್ಯ ಏನು ಮಾಡುತ್ತಿದ್ದಾರೆ ಅ… ಸ್ವತಃ ಅವರಿಗೇ ಗೊತ್ತಿಲ್ಲ. ಒಂದೆರಡು ಚಿತ್ರಗಳು ಬಿಡುಗಡೆಗೆ ಸಿದ್ಧ… ಈ ಮಧ್ಯೆ ತಮಿಳು ಪ್ರಾಜೆಕ್ಟ್ ಕೂಡ ಕೈ ಕೊಟ್ಟಿದೆ. ಹೀಗಾಗಿ ಯೋ… ನಿರುದ್ಯೋಗಿ. ಈ ನಡುವೆಯೇ ಅಚ್ಚರಿಯ ಸುದ್ದಿಯೊಂದು ಹರಿದಾ… ದರ್ಶನ್ ಜತೆ ಯೋಗಿ ತೆರೆ ಹಂಚಿಕೊಳ್ಳುತ್ತಿರುವುದಾಗಿ ಬುಲೆಟ್ … ಹೇಳಿಕೊಂಡಿದ್ದಾರೆ. ಪುನೀತ್ ಜತೆ ಎರಡು ಚಿತ್ರಗಳಲ್ಲಿ ನಟಿಸಿರುವ … ಈಗ ದರ್ಶನ್ ಜತೆಯೂ ಸಿನಿಮಾ ಮಾಡುತ್ತಾರೆ ಅನ್ನುವ ಕುತೂಹಲ… ಮಾಡಿತ್ತು, ಈ ಕುತೂಹಲಕ್ಕೆ ಸ್ವತಃ ಲೂಸ್ ಮಾದ ತೆರೆ ಎಳೆ… ದರ್ಶನ್ ಜತೆ ಸಿನಿಮಾ ಮಾಡುವುದಾಗಿ ಹೇಳಿಕೊಂಡಿದ್ದಾರೆ. ಜತೆ… ಸಿನಿಮಾ ಒಪ್ಪಿಕೊಂಡಿದ್ದು ಕೇವಲ ಬುಲೆಟ್ ಪ್ರಕಾಶ್‌ಗಾಗಿ ಎಂದು … ಸಿಡಿಸಿದ್ದಾರೆ.

ಬುಲೆಟ್ ಮತ್ತು ಯೋಗಿ ಇಬ್ಬರೂ ಖಾಸಾ ಗೆಳೆಯರು. ಬು… ಮತ್ತು ದರ್ಶನ್ ಕೂಡ ಫ್ರೆಂಡ್ಸ್. ಹೀಗಾಗಿ ಈ ಸಿನಿಮಾ ಆಗುವ … ಹೆಚ್ಚಿದೆ. ದರ್ಶನ್ ಜತೆ ತೆರೆ ಹಂಚಿಕೊಳ್ಳುವುದು ಸುಲಭದ ಮಾತಲ್ಲ… ಯೋಗಿಗೂ ಗೊತ್ತಿದೆ. ಆದರೂ ಇಬ್ಬರೂ ಸಿನಿಮಾ ಮಾಡಲು ಒಪ್ಪಿಕೊ… ಅದು ರೀಮೇಕ್ ಸಿನಿಮಾ ಅನ್ನುವ ಕಾರಣ. ಕತೆಯ ಚಿಂತೆಯಲ್ಲಿ, ದೃಶ್ಯಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಕಿಲ್ಲ. ಹೀಗಾಗಿ ಬುಲೆಟ್ ಪ್ಲಾನ್ ಸಕ್ಸೆಸ್ ಆಗಿದೆ.

ಕ್ರಾಂತಿ ಕಹಳೆ ಮೊಳಗಿಸಿದ ಶುಭಾ



ಶುಭಾ ಪೂಂಜಾ ಅವರ 'ತರ್ಲೇ ನನ್ಮಕ್ಳು' ಸಿನಿಮಾ ಈ ವಾರ ಬಿಡುಗಡೆ ಆಗುತ್ತಿದೆ. ಇದೇ ಖುಷಿಯಲ್ಲೇ ಅವರು ಮತ್ತೊಂದು ಸಿನಿಮಾ ಒಪ್ಪಿಕೊಂಡಿದ್ದಾರೆ. ಸದ್ದಿಲ್ಲದೇ ಈ ಸಿನಿಮಾದ ಶೂಟಿಂಗ್ ಕೂಡ ಮುಗಿದಿದೆ. ಈ ಚಿತ್ರವನ್ನು ಹಿರಿಯ ನಿರ್ದೇಶಕ ಎ.ಆರ್.ಬಾಬು ನಿರ್ದೇಶಿಸಿದ್ದಾರೆ.

ಸ್ವಾತಂತ್ರ್ಯ ಪೂರ್ವ ಕಥಾವಸ್ತುವನ್ನು ಹೊಂದಿರುವ ಈ ಚಿತ್ರದ ಚಿತ್ರೀಕರಣ ಕುಶಾಲನಗರ, ಮಡಿಕೇರಿ, ಮೈಸೂರು ಹಾಗೂ ಬೆಂಗಳೂರು ಸುತ್ತಮುತ್ತ ನಡೆದಿದೆ. 1932 ರಿಂದ 1942ರ ದಿನಮಾನದ ಸಂದರ್ಭಕ್ಕೆ ತಕ್ಕಂತೆ ಸ್ಥಳಗಳನ್ನು ಹುಡುಕಿ ಶೂಟಿಂಗ್ ಮಾಡಿದ್ದಾರೆ ನಿರ್ದೇಶಕರು. ಭಾರತದ ಒಂದೊಂದು ಹಳ್ಳಿಯಲ್ಲಿ ಸ್ವಾತಂತ್ರ್ಯಕ್ಕೆ ಹೋರಾಡಿ ಮಡಿದವರು ಸಾವಿರಾರು ಜನರಿದ್ದಾರೆ. ಭಾರತದ ಉದ್ದಗಲಕ್ಕೂ ಅದೆಷ್ಟೋ ಬಲಿದಾನಗಳಾಗಿವೆ. ನಿರ್ದೇಶಕ ಬಾಬು ಅಂತಹ ಹುತಾತ್ಮರಿಗೆ ಈ ಸಿನಿಮಾವನ್ನು ಅರ್ಪಿಸಿದ್ದು ವಿಶೇಷ. ಮತ್ತೊಂದು ವಿಶೇಷ ಅಂದರೆ, ದಲಿತ ಕವಿ ಸಿದ್ದಲಿಂಗಯ್ಯ ಚಿತ್ರಕ್ಕೆ ಸಾಹಿತ್ಯ ಹಾಗೂ ಸಂಭಾಷಣೆ ರಚಿಸಿದ್ದಾರೆ.

"ಈ ಸಿನಿಮಾದಲ್ಲಿ ನನ್ನದು ವಿಭಿನ್ನ ಪಾತ್ರ. ಇದೇ ಮೊದಲ ಬಾರಿಗೆ ಇಂತಹ ಪಾತ್ರವನ್ನು ನಾನು ಪೋಷಿಸಿದ್ದೇನೆ. ನಿಜಕ್ಕೂ ಖುಷಿ ಆಗುತ್ತಿದೆ. 'ಕ್ರಾಂತಿ ಕಹಳೆ' ನನ್ನ ವೃತ್ತಿ ಬದುಕಿನ ವಿಶೇಷ ಸಿನಿಮಾ" ಅಂದಿದ್ದಾರೆ ಶುಭಾ.

ಬಾಲಾ ಸಿನಿಮಾದಲ್ಲಿ ಕಾವ್ಯ



ಕಾವ್ಯ ಶಾ

ಕನ್ನಡ ಕಿರುತೆರೆಯ ನಿರ್ದೇಶಕ ಕಂ ನಟ ನಾಗೇಂದ್ರ ಶಾ ಪುತ್ರಿ ಕಾವ್ಯ ತಮಿಳಿನ ಖ್ಯಾತ ನಿರ್ದೇಶಕ ಬಾಲಾ ಅವರ ಸಿನಿಮಾದಲ್ಲಿ ನಟಿಸಿದ್ದಾರೆ. ಈ ವಾರ ತೆರೆ ಕಾಣುತ್ತಿರುವ 'ತಾರೈ ತಪ್ಪತೈ' ಸಿನಿಮಾದಲ್ಲಿ ಕಾವ್ಯ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ. ಈ ಸಿನಿಮಾ ಸಾಕಷ್ಟು ನಿರೀಕ್ಷೆ ಮೂಡಿಸಿದೆ ಅನ್ನುವುದು ವಿಶೇಷ.

ಇದೇ ಮೊದಲ ಬಾರಿಗೆ ಬಾಲಾ ಜಾನಪದ ಕುಣಿತವೊಂದರ ಹಿನ್ನೆಲೆಯ ಕತೆಯನ್ನು ತಮ್ಮ ಸಿನಿಮಾಗಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಕರಗ ನೃತ್ಯವನ್ನು ವಿಶೇಷವಾಗಿ ಬಳಸಿಕೊಂಡು ಚಿತ್ರಕತೆ ಹೆಣೆದಿದ್ದಾರೆ. ನೃತ್ಯ ಕಲಾವಿದರ ನಾಲ್ಕು ಪಾತ್ರಗಳು ಕತೆಯಲ್ಲಿ ಪ್ರಧಾನವಾಗಿದ್ದು, ಅದರಲ್ಲಿ ಒಂದು ಪಾತ್ರವನ್ನು ಕಾವ್ಯ ಮಾಡುತ್ತಿದ್ದಾರೆ.

ಅವರಿಗೆ ಈ ಅವಕಾಶ ಸಿಕ್ಕಿದ್ದು ವಾಹಿನಿಯೊಂದರ ಕಾರ್ಯಕ್ರಮದಲ್ಲಿದ್ದಾಗ. ಡಾನ್ಸ್ ಮಾಡುವಾಗ ನಿರ್ದೇಶಕರ ಕಡೆಯವರು, ಇವರ ನೃತ್ಯವನ್ನು ಗಮನಿಸಿದ್ದಾರೆ. ಆನಂತರ ಅದನ್ನು ಬಾಲಾ ಅವರಿಗೆ ಹೇಳಿದ್ದಾರೆ. ಆನಂತರವಷ್ಟೇ ಪಾತ್ರಕ್ಕಾಗಿ ಆಯ್ಕೆಯಾಗಿದ್ದಾರೆ.

ಇದು ಸಂಗೀತ ಪ್ರಧಾನ ಸಿನಿಮಾ. ಸಂಗೀತವೇ ಚಿತ್ರದ ಜೀವಾಳ. ಹೀಗಾಗಿ ಈ ಚಿತ್ರಕ್ಕೆ ಇಳಯರಾಜ ಸಂಗೀತ ನಿರ್ದೇಶನ ಮಾಡಿದ್ದಾರೆ. ಇದು ಇವರ ಸಾವಿರದ ಚಿತ್ರ ಅನ್ನುವುದು ಮತ್ತೊಂದು ವಿಶೇಷ.

ಕಾವ್ಯಾ ಈಗಾಗಲೇ ಬಾಲಿವುಡ್ ನಟ ಶಾರುಖ್ ಖಾನ್ ನಟನೆಯ ಚೆನ್ನೈ ಎಕ್ಸ್‌ಪ್ರೆಸ್ ಸಿನಿಮಾದ ಪ್ರಮೋಷನ್ ಸಾಂಗ್‌ಗೆ ಹೆಜ್ಜೆ ಹಾಕಿ ಸುದ್ದಿ ಮಾಡಿದ್ದರು. ಈಗ ಬಾಲಾ ಸಿನಿಮಾದಲ್ಲಿ ನಟಿಸುವ ಮೂಲಕ ಮತ್ತೊಮ್ಮೆ ಸದ್ದು ಮಾಡಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com